ಸಾಹಿತ್ಯ ದಾಸೋಹ – ೨೦ಜ

ಸಂಚಿಕೆ 29 - ಅಕ್ಟೋಬರ್ 2022

24.09.2022ರ ದಾಸೋಹದ ಬರಹಗಳ ಸಂಕಲನ

ಬೆಗ



ನೀಲಕುರುಂಜಿ ಪುಷ್ಪ



ದಸರಾ ಗೊಂಬೆಗಳು



ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸವೆದಹಾದಿಗಿಂತ ಸವೆಸಬೇಕಾದ ಹಾದಿ ದೀರ್ಘವಿದೆ

ಕಳೆದ ತಿಂಗಳು ೨೪ರಂದು ನಡೆದ ೨೦೫ನೆಯ ಸಾಹಿತ್ಯ ದಾಸೋಹವು ಬಹಳ ಯಶಸ್ವಿಯಾಯಿತು. ೨೫ ಲೇಖಕರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು. ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಧೀರೇಂದ್ರ ಅವರು ಸಿದ್ಧಪಡಿಸಿದ್ದ ವಿಶ್ಲೇಷಣಾತ್ಮಕ ಭಾಷಣವನ್ನು ಸಮಯದ ಅಭಾವದಿಂದ ಪೂರ್ತಿಮಾಡಲು ಸಾಧ್ಯವಾಗಲಿಲ್ಲ. ಆದರೆ ಅವರ ಸಮಗ್ರ ಭಾಷಣವನ್ನು ಈ ಸಂಚಿಕೆಯಲ್ಲಿ ಅಳವಡಿಸಲಾಗಿದೆ. ಎಲ್ಲ ಲೇಖಕರಿಗೂ, ಅಧ್ಯಕ್ಷರಿಗೂ ಸಾಹಿತ್ಯ ದಾಸೋಹ ವೇದಿಕೆಯು ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ದಾಸೋಹವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಮತ್ತು ಹೆಚ್ಚು ಜನ ಭಾಗವಹಿಸಲು ಅನುವು ಮಾಡುವುದಕ್ಕಾಗಿ, ಸಂಚಾಲಕರು ನೋಡಿಯೋ ವೇದಿಕೆಯಲ್ಲಿ ಚರ್ಚಿಸಿ ಕೆಲವು ಅಂಶಗಳನ್ನು ತೀರ್ಮಾನಿಸಿದ್ದಾರೆ. ಮುಂದಿನ ದಾಸೋಹ ಕಾರ್ಯಕ್ರಮಗಳು ಆ ನಿರ್ಣಯಗಳಂತೆ ನಡೆಯಲಿವೆ.

೨೦೨೦ರ ಫೆಬ್ರವರಿಯಲ್ಲಿ ಕೊರೋನಾ ಮಾರಿ ಕಾಣಿಸಿಕೊಂಡ ಕಾರಣ ಮಾರ್ಚ್‌ನಲ್ಲಿ ದಾಸೋಹವನ್ನು ನಡೆಸಲು ಸಾಧ್ಯವಾಗಲಿಲ್ಲ. ಶ್ರೀ ಎಚ್.ಆರ್.ಗುರುಪ್ರಸಾದ್ ಅವರ ತಾಂತ್ರಿಕ ಸಹಕಾರದಿಂದ ಏಪ್ರಿಲ್ ತಿಂಗಳ ದಾಸೋಹವನ್ನು ಅಂತರ್ಜಾಲದ ಮೂಲಕ ನಡೆಸಿದೆವು. ಆನಂತರ ಕೊರೋನಾ ಕಾಲದಲ್ಲಿ ಪವಾಡವೇ ನಡೆಯಿತು. ದಾಸೋಹದ ಜೊತೆಗೆ ಇತರ ಹಲವಾರು ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳೂ ವೇದಿಕೆಯಲ್ಲಿ ನಡೆದವು. ಅಂತರ್ಜಾಲದ ಕಾರ್ಯಕ್ರಮಗಳನ್ನು 'ನೋಡಿಯೋ ಸಾಹಿತ್ಯ ದಾಸೋಹ" ಎಂಬ ಉಪವೇದಿಕೆಯ ಮೂಲಕ ಸಮರ್ಥವಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಈದಿನ ನಡೆಯುವ ೨೦೬ನೆಯ ಸಾಹಿತ್ಯ ದಾಸೋಹವು ನೋಡಿಯೋ ವೇದಿಕೆಯಲ್ಲಿ ನಡೆಯುತ್ತಿರುವ ೭೩ನೆಯ ಕಾರ್ಯಕ್ರಮ. ಸತತವಾಗಿ ನಮ್ಮ ಚಟುವಟಿಕೆಗಳಿಗೆ ಬೆಂಬಲ ಕೊಡುತ್ತಿರುವ ನಿಮಗೆಲ್ಲರಿಗೂ ಸಂಚಾಲಕ ಸಮಿತಿಯು ಆಭಾರಿಯಾಗಿದೆ.

೨೦೨೦ರ ಮೇ ತಿಂಗಳಿನಿಂದ ಈ ಸಾಹಿತ್ಯ ಸಂಚಿಕೆಯನ್ನು ಪಿಡಿಎಫ್ ರೂಪದಲ್ಲಿ ಗುರುಪ್ರಸಾದ್ ಅವರು ತರಲಾರಂಭಿಸಿದರು. ೨೦೨೧ರ ಜೂನ್ ತಿಂಗಳಿನಿಂದೀಚೆಗೆ ಶ್ರೀ ಶೃಂಗೇಶ್ವರ ಶರ್ಮ ಅವರು ಪ್ರಕಟಿಸುತ್ತಿದ್ದಾರೆ. ಇದು ೨೯ನೆಯ ಸಂಚಿಕೆಯಾಗಿದ್ದು, ಪ್ರತಿ ತಿಂಗಳ ಸಾಹಿತ್ಯ ದಾಸೋಹದ ಸಮೃದ್ಧ ಸಾಹಿತ್ಯ ಕೃತಿಗಳನ್ನು ಕಾಪಾಡುವುದರಲ್ಲಿ ಆಸಕ್ತಿ ವಹಿಸಿರುವ ಈ ಇಬ್ಬರಿಗೂ ಸಂಚಾಲಕ ಸಮಿತಿಯ ವಿಶೇಷ ಕೃತಜ್ಞತೆಗಳು. .

ಮುಂದಿನ ತಿಂಗಳುಗಳಲ್ಲಿ ಹೆಚ್ಚಿನ ಕಾರ್ಯಕ್ರಮಗಳನ್ನು ಮಾಡೋಣ ಮತ್ತು ವೇದಿಕೆಯ ಸಾಹಿತ್ಯ ಸಂಪತ್ತನ್ನು ಸಮೃದ್ಧಿಗೊಳಿಸೋಣ.

ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭ ಹಾರೈಕೆಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು ೦೮.೧೦.೨೦೨೨

ದಾಸೋಹದ ಪುಟಗಳಲ್ಲಿ ...

ಮುಖಪುಟದ ಚಿತ್ರ: ನೀಲಿಕುರುಂಜಿ ಪುಷ್ಪ ದಸರಾ ಗೊಂಬೆಗಳು – ಚಿತ್ರ ಕೃಪೆ: ಅಂತರ್ಜಾಲ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೦೫

ಕಾರ್ಯಕ್ರಮ ವರದಿ : ಕೆ.ಎನ. ಮಹಾಬಲ

ದಿನಾಂಕ 24.09.2022ರಂದು ಬಿ.ಎಂ.ಶ್ರೀ. ಕಲಾಭವನದ ಸಭಾಂಗಣದಲ್ಲಿ 205ನೇ ಸಾಹಿತ್ಯ ದಾಸೋಹವು ಬಹಳ ಸಾಹಿತ್ಯಪೂರ್ಣವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯಿತು.

ದಾಸೋಹದ ಆತಿಥ್ಯದ ಹೊಣೆ ವಹಿಸಿಕೊಂಡಿದ್ದ ಶ್ರೀಮತಿ ಶೀಲಾ ಅರಕಲಗೂಡು ಅವರು ಆರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿ, ಕಳೆದ ನಾಲ್ಕು ತಿಂಗಳಿನಿಂದ ಅಂತರ್ಜಾಲ ಮುಖೇನ ನಡೆಯುತ್ತಿದ್ದ ದಾಸೋಹ ಈ ಬಾರಿ ಮತ್ತೊಮ್ಮೆ ಎಲ್ಲರಿಗೂ ಮುಖಾಮುಖಿ ಭೇಟಿಯಾಗುವ ಅವಕಾಶ ಕಲ್ಪಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್.ಧೀರೇಂದ್ರ ಅವರನ್ನು ಪರಿಚಯಿಸಿದ ಶ್ರೀ ಗುರುರಾಜ ಶಾಸ್ತ್ರಿಯವರು, ನಮ್ಮ ವೇದಿಕೆಯ ಕ್ರಿಯಾಶೀಲ ಸದಸ್ಯರಾದ ಶ್ರೀ ಧೀರೇಂದ್ರ ಅವರು ಪ್ರಸಿದ್ಧ ರಂಗಕರ್ಮಿಯಾಗಿದ್ದಾರೆ. 'ನಟರಂಗ' ಹವ್ಯಾಸಿ ನಾಟಕ ತಂಡದ ಸದಸ್ಯರಾಗಿದ್ದು, ಕಾಕನಕೋಟೆ, ತುಘಲಕ್, ಒಥೆಲೊ, ಸಂಕ್ರಾಂತಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿರುವರಲ್ಲದೆ, ಕಿರುತೆರೆಯಲ್ಲಿ ಮೂಡಿಬಂದ ಕಾಮನಬಿಲ್ಲು, ಮುಕ್ತ ಮುಕ್ತ, ಮಿಥುನರಾಶಿ ಮುಂತಾದ ಧಾರಾವಾಹಿಗಳಲ್ಲೂ ಪಾತ್ರ ನಿರ್ವಹಿಸಿದ್ದಾರೆ ಎಂದರು. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತರಾಗಿರುವ ಶ್ರೀ ಧೀರೇಂದ್ರ ಅವರು ಬ್ಯಾಂಕಿನ ಕನ್ನಡ ಸಂಘದ ನಾಟಕ ತಂಡದಲ್ಲೂ ಕ್ರಿಯಾಶೀಲರಾಗಿದ್ದು, ಹಲವು ನಾಟಕಗಳಲ್ಲಿ ಅಭಿನಯ, ನಿರ್ದೇಶನ ಮಾಡಿದ್ದಾರೆ. ಕರೋನಾ ದಿನಗಳಲ್ಲಿ ಅಂತರ್ಜಾಲ ಮುಖೇನ ಕಾರ್ಯಕ್ರಮ ನೀಡುವ 'ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ' ಆರಂಭಿಸಿದಾಗ ಧೀರೇಂದ್ರ ಅವರು ತಾವೊಬ್ಬರೇ ಅಂತರ್ಜಾಲ



ಮುಖೇನ ಅಭಿನಯಿಸಿದ 'ಕನ್ನಡಕ್ಕೊಬ್ಬನೇ ಕೈಲಾಸಂ' ಎಂಬ ಏಕವ್ಯಕ್ತಿ ನಾಟಕ ಪ್ರದರ್ಶನವಂತೂ ಸದಾ ಸ್ಮರಣೀಯ ಎಂದು ನುಡಿದರು. ಅಲ್ಲದೆ, ಎಚ್ಚೆಸ್ಕೆ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಒಂದು ತಿಂಗಳ ಕಾಲ ದಿನಕ್ಕೊಬ್ಬರಂತೆ ಹಲವು ರಂಗ ಕಲಾವಿದರನ್ನು ಕುರಿತು ಧೀರೇಂದ್ರ ಅವರು ಪ್ರಸ್ತುತಪಡಿಸಿದ ಪರಿಚಯ ಲೇಖನಗಳನ್ನೂ ಸ್ಮರಿಸಿದರು.

ಸುಮಾರು 35ಕ್ಕೂ ಹೆಚ್ಚು ಸಾಹಿತ್ಯಾಸಕ್ತರು ಪಾಲ್ಗೊಂಡಿದ್ದ ಈ ದಾಸೋಹದಲ್ಲಿ 25 ಸದಸ್ಯರು ತಮ್ಮ ವಿಭಿನ್ನ ಪ್ರಸ್ತುತಿಗಳನ್ನು ಮಂಡಿಸಿದರು. ಕಥೆ, ಕವನ, ಪ್ರವಾಸ ಕಥನ, ವ್ಯಕ್ತಿ ಚಿತ್ರಣ, ಕೀರ್ತನೆ, ಲಾವಣಿ ಮುಂತಾದ ಹಲವು ಪ್ರಕಾರಗಳ ಸಾಹಿತ್ಯಗಳು ರಾರಾಜಿಸಿದವು.

ಎಲ್ಲರ ಪ್ರಸ್ತುತಿಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ ಕಾರ್ಯಕ್ರಮದ ಅಧ್ಯಕ್ಷ ಶ್ರೀ ಧೀರೇಂದ್ರ ಅವರ ಬದ್ಧತೆ ಎಲ್ಲರ ಮೆಚ್ಚುಗೆ ಗಳಿಸಿತು.

ಶ್ರೀಮತಿ ರಾಧಿಕಾ ಗುಜ್ಜರ್ ಅವರು ವಂದನೆಗಳನ್ನು ಅರ್ಪಿಸಿದರು. ಶ್ರೀ ಶೃಂಗೇಶ್ವರ ಶರ್ಮ ಅವರು ಸಂಕಲಿಸಿರುವ ನೋಡಿಯೋ ಸಾಹಿತ್ಯ ದಾಸೋಹ-204ರ ಪಿಡಿಎಫ್ ರೂಪವನ್ನು ಶ್ರೀಮತಿ ಜಿ.ವಿ.ನಿರ್ಮಲ ಅವರು ಲೋಕಾರ್ಪಣೆ ಮಾಡಿದರು.

ಶ್ರೀ ಬೆಂ.ಶ್ರೀ. ರವೀಂದ್ರ ಅವರು ವೇದಿಕೆಯ ಮುಂದಿನ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟರು. ಶ್ರೀ ಕೆ.ಎನ್ ಮಹಾಬಲ ಅವರು ಕಾರ್ಯಕ್ರಮ ನಿರೂಪಿಸಿದರು.

ಜೀ ಮೀಟ್ ತಂತ್ರಜ್ಞಾನದ ಮೋಡದ ಮರೆಯಿಂದ ಹೊರಬಂದ ಈ ಪ್ರತ್ಯಕ್ಷ ದಾಸೋಹದಲ್ಲಿ ಸದಸ್ಯರ ಸಂಭ್ರಮದ ಕಲರವ ಪ್ರಖರವಾಗಿ ಕಂಡಿತ್ತು.

ಸ್ವಾದಿಷ್ಟ ಲಘು ಉಪಾಹಾರದೊಂದಿಗೆ ಸಾಹಿತ್ಯ ದಾಸೋಹ 205 ಮುಕ್ತಾಯವಾಯಿತು.

***

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಶ್ರೀಮತಿ ರತ್ನಾಮೂರ್ತಿ ಅವರ ಸಮಗ್ರ ಸಾಹಿತ್ಯ - ಒಂದು ಪಕ್ಷಿನೋಟ

ಉಪನ್ಯಾಸ ಮತ್ತು ಸಂವಾದ : ಶ್ರೀಮತಿ ರಾಧಿಕಾ ವಿ. ಗುಜ್ಜರ್

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ 18-09-2022 ರಂದು, ರವಿವಾರ, ಇಳಿಹೊತ್ತು 05.30 ಗಂಟೆಗೆ ಕಾರ್ಯಕ್ರಮ ಆರಂಭವಾಯ್ತು.

ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಇತ್ತೀಚೆಗೆ ವೇದಿಕೆಯಲ್ಲಿ ನಡೆಸಿದ ತನಗ ಉತ್ಸವದಲ್ಲಿ ನಿರೀಕ್ಷೆಗೂ ಮೀರಿ 81 ಜನ ಸದಸ್ಯರು ತನಗಗಳನ್ನು ರಚಿಸಿ ಉತ್ಸವವನ್ನು ಯಶಸ್ವಿಗೊಳಿಸಿದ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಖೋ ಕಾದಂಬರಿ ' ಪಲ್ಲಟ' ದ ಮುಖಪುಟ ಶ್ರೀ ಗಿರಿಧರ ಕಾರ್ಕಳರವರು ರಚಿಸಿದ್ದು, ಕಾಲಯಾನದ ಹೆಜ್ಜೆ ಗುರುತುಗಳು ಎಂಬ ಉಪಶೀರ್ಷಿಕೆಯೊಂದಿಗೆ ಸ್ನೇಹ ಪಬ್ಲಿಷಿಂಗ್ ಹೌಸ್ ನಿಂದ ಪ್ರಕಟವಾಗಲಿದೆ. ಬಿಡುಗಡೆ ಕಾರ್ಯಕ್ರಮ ನವಂಬರ್ ನಲ್ಲಿ ನಡೆಯಲಿದೆ ಎಂದರು.

ರಾಜ್ಯೋತ್ಸವ ತಿಂಗಳನ್ನು ವಿಶೇಷವಾಗಿ ಆಚರಿಸಲು ನಿಮ್ಮ ಸಲಹೆಗಳು ಬರಲಿ ಎಂದ ಅವರು ವೇದಿಕೆ ಕಳೆದ ಒಂಬತ್ತು ವರ್ಷಗಳಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಉತ್ತಮ ಸಾಧನೆ ಮಾಡಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿ ಸದಸ್ಯರು ವೇದಿಕೆಯ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಿ, ವೇದಿಕೆಯ ಹಿರಿಮೆ ಕಾಪಾಡಬೇಕು ಎಂದರು.

ಶ್ರೀಮತಿ ರತ್ನಾ ಮೂರ್ತಿಯವರು ನಮ್ಮ ವೇದಿಕೆಯ ಓರ್ವ ಪ್ರತಿಭಾವಂತ ಸದಸ್ಯರಾಗಿದ್ದು, ಕವನ, ವಚನ, ಕತೆ, ಕಾದಂಬರಿ, ಮುಂಡಿಗೆ, ಗಮಕ ವಾಚನ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿ ಸುಮಾರು 27ಕ್ಕೂ ಹೆಚ್ಚು ವೈವಿಧ್ಯಮಯ ಕೃತಿಗಳನ್ನು ರಚಿಸಿದ್ದಾರೆ, ನಾಗರತ್ನ, ರತ್ನಾಮೂರ್ತಿ, ಗೌರಮ್ಮ ಇತ್ಯಾದಿ ಹೆಸರಿನಿಂದ ಪರಿಚಿತವಾಗಿರುವ ಶ್ರೀಮತಿ ರತ್ನಾಮೂರ್ತಿಯವರ ಸಮಗ್ರ ಸಾಹಿತ್ಯದ ಬಗ್ಗೆ ಇಣುಕು ನೋಟ ನೀಡಬೇಕೆಂಬ ಗುರುತರವಾದ ಜವಾಬ್ದಾರಿಯನ್ನು ಶ್ರೀಮತಿ ರಾಧಿಕಾ ಗುಜ್ಜರ್‌ರವರಿಗೆ ವಹಿಸಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ರವೀಂದ್ರ ತಿಳಿಸಿದರು.

ಶ್ರೀಮತಿ ಲಕ್ಷ್ಮೀ ವಿಠಲ್ ರವರು ಎಲ್ಲರನ್ನೂ ಸ್ವಾಗತಿಸಿ, ಶ್ರೀಮತಿ ರಾಧಿಕಾ ಗುಜ್ಜರ್‌ರವರನ್ನು ಪರಿಚಯಿಸಿದರು. ವೇದಿಕೆಯ ಎಲ್ಲರಿಗೂ ಸುಪರಿಚಿತರೇ ಆಗಿರುವ ಶ್ರೀಮತಿ ರಾಧಿಕಾ ಗುಜ್ಜರ್‌ರವರು ಶ್ರೀ ವಿಶ್ವನಾಥರಾವ್ ಹಾಗೂ ದಿ.ಶಾಂತಾರವರ ಸುಪುತ್ರಿ. ಬಿ.ಕಾಂ ಪದವೀಧರೆ ಮತ್ತು ಸಂಗೀತದಲ್ಲೂ ಪರಿಶ್ರಮ ಉಳ್ಳವರು. ವಿವಾಹವಾದ ನಂತರ ಚಿಕ್ಕಮಗಳೂರಿನಲ್ಲಿ ನೆಲೆನಿಂತ ಇವರು ಕೇಂದ್ರ ಸರಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹದ ಸೂಪರಿಡೆಂಟ್ ಆಗಿ, ಸಹಕಾರಿ ಬ್ಯಾಂಕಿನ ಹಿರಿಯ ಸಹಾಯಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಮಂತ್ರಗಳಲ್ಲಿ ಚಿತ್ರರಚನೆ ಇವರ ಹವ್ಯಾಸ. ಇವರ ಕಥೆ ಕವನಗಳು ನಸುಕು.ಕಾಮ್ ಹಾಗೂ ವಿಶ್ವವಾಣಿಯಲ್ಲಿ ಪ್ರಕಟವಾಗಿವೆ. ಸ್ಪಂದನ ಸಿರಿ ವೇದಿಕೆ, ಭಾವಸಂಗಮ ನಡೆಸಿದ ಸಾಹಿತ್ಯ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ

ಗಳಿಸಿದ್ದಾರೆ. ಇವರ ಕವನ ಸಂಕಲನ 'ಮನದಾಳದಿಂದ ಪುಟಗಳಿಗೆ 'ಪ್ರಕಟಣೆಗೆ ಸಿದ್ಧವಾಗಿದೆ. ವೇದಿಕೆಯಲ್ಲಿ ಪ್ರಸಾರವಾಗುವ ಬರಹಗಳನ್ನು ವಿಶೇಷವಾಗಿ ಅವಲೋಕಿಸಿ ಪ್ರೋತ್ಸಾಹಿಸುವ ಇವರ ಗುಣ ಶ್ಲಾಘನೀಯ ಎಂದು ಹೇಳಿ ಶ್ರೀಮತಿ ರಾಧಿಕಾ ಗುಜ್ಜರ್ ರವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಶ್ರೀಮತಿ ರಾಧಿಕಾ ಗುಜ್ಜರ್ ರವರು ಸುಮಾರು ಒಂದು ಗಂಟೆ ಕಾಲ ಶ್ರೀಮತಿ ರತ್ನಾಮೂರ್ತಿಯವರ ಸಮಗ್ರ ಕೃತಿಗಳ ಬಗ್ಗೆ ಉಪನ್ಯಾಸ ನೀಡಿ, ಅತ್ಯಂತ ಪ್ರಬುದ್ಧ ರೀತಿಯಲ್ಲಿ ವಿಶ್ಲೇಷಿಸಿ ವೀಕ್ಷಕರ ಮೆಚ್ಚುಗೆಗೆ ಪಾತ್ರವಾದರು.

ಶ್ರೀಮತಿ ರತ್ನಾಮೂರ್ತಿಯವರ ಎಲ್ಲಾ ಕೃತಿಗಳನ್ನೂ ಓದಿ ಅದರಲ್ಲಿನ ಸಾರವತ್ತಾದ ಭಾಗಗಳನ್ನು ಪರಿಚಯಿಸಿ, ಸಮಗ್ರ ಕೃತಿಗಳ ಬಗ್ಗೆ ಪಕ್ಷಿನೋಟ ಬೀರುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.

ಶ್ರೀಮತಿ ರತ್ನಾಮೂರ್ತಿಯವರು ಮಾತನಾಡಿ ಈ ಅನಿರೀಕ್ಷಿತ ಕಾರ್ಯಕ್ರಮ ಸಂತಸ ತಂದಿದೆ. ಇಂತಹ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು ಎಲ್ಲ ಸಾಹಿತಿಗಳಿಗೂ ಸಿಗುವಂತಾಗಬೇಕು. ನಿಮ್ಮೆಲ್ಲರ ಮೆಚ್ಚುಗೆ ಯಿಂದ ಏನೋ ಸಾಧಿಸಿರುವ ಸಮಾಧಾನ ನನಗಾಗಿದೆ. ಸಾಹಿತ್ಯ ವಾಙ್ಮಯ ವಿಸ್ತಾರವಾದ ಸಾಗರದಂತೆ. ಹೊಸ ಹೊಸ ಪ್ರಕಾರಗಳು ಸೃಷ್ಟಿಯಾಗುತ್ತಲೇ ಇರುತ್ತದೆ. ಅರಿವಿನ ವಿಸ್ತಾರ, ಅನುಭವ ಹೆಚ್ಚಬೇಕಾಗುತ್ತದೆ. ಇಂತಹ ಸಾಗರದಲ್ಲಿ ನಾನು ಬರೆಸಿರುವುದು ಕೆಲವು ಹನಿಗಳಷ್ಟೇ. ಕಾಲದ ನಿಕಷದಲ್ಲಿ ಸಾಗಿ ನಿಲ್ಲಬೇಕಾದ ಕೃತಿಗಳನ್ನು ಕೊಡುವ ಅಗತ್ಯವಿದೆ. ಈಗ ಹೆಸರಾಗದವರ ಯಾವ ಕೃತಿಗಳನ್ನೂ ಓದುವುದಿಲ್ಲ.ಕೃತಿಗಳನ್ನು ಓದದೇ ಹೆಸರು ಬರುವಂತಿಲ್ಲ ಎಂಬಂತಾಗಿದೆ. ನನ್ನ ಕೃತಿಗಳು ಸಮನ್ವಯ ಸಮಿತಿಯ ಕಣ್ಣಿಗೆ ಬಿದ್ದು ಹೀಗೆ ಕಾರ್ಯಕ್ರಮವಾಗಿ ಮಾಡಿರುವುದು ಸಂತಸ ತಂದಿದೆ. ನನ್ನ ಕೃತಿಗಳಲ್ಲಿ ಎಷ್ಟು ಗಟ್ಟಿಯಾಗಿವೆ ಎಂಬುದನ್ನು ಓದುಗರೇ ನಿರ್ಧರಿಸಬೇಕು. ನನ್ನ 27 ಕೃತಿಗಳನ್ನೂ ಓದಿ ಅಲ್ಪ ಅವಧಿಯಲ್ಲಿ ಪರಿಚಯಿಸುವ ಅಗಾಧ ಕೆಲಸ ವನ್ನು ರಾಧಿಕಾರವರು ಕಾರ್ಯಶ್ರದ್ಧೆ ಮತ್ತು ಪ್ರೀತಿಯಿಂದ ಮಾಡಿದ್ದಾರೆ ಎಂದು ಮೆಚ್ಚಿ ನುಡಿದರು

ಕೊನೆಯಲ್ಲಿ ಸಂವಾದ ಕಾರ್ಯಕ್ರಮವೂ ನಡೆಯಿತು.

ಶ್ರೀಮತಿ ಶೀಲಾ ಭಂಡಾರ್ಕರ್ ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

***

ಅಲ್ಲಿ ಆ ನಾಲ್ಕು ಶ್ಲೋಕಗಳು

– ಶಾಂತಾ ನಾಗಮಂಗಲ

ಸಂಸ್ಕೃತದ ಪ್ರಸಿದ್ಧ ನಾಟಕ " ಅಭಿಜ್ಞಾನ ಶಾಕುಂತಲ"ಕ್ಕೆ ಸಂಬಂಧಿಸಿದಂತೆ ಒಂದು ಪ್ರಸಿದ್ಧವಾದ ಹೇಳಿಕೆಯುಂಟು–

ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ ।
ತತ್ರಾಪಿ ಚ ಚತುರ್ಥೋಽಂಕಃ ತತ್ರ ಶ್ಲೋಕ ಚತುಷ್ಟಯಃ ॥

ಇದರ ತಾತ್ಪರ್ಯ– "ಕಾವ್ಯಗಳಲ್ಲಿ ನಾಟಕವು ರಮ್ಯ. ಅವುಗಳಲ್ಲಿ ಶಾಕುಂತಲಾ ನಾಟಕವು ರಮ್ಯ. ಅದರಲ್ಲೂ ನಾಲ್ಕನೆಯ ಅಂಕವು ರಮ್ಯ. ಆ ನಾಲ್ಕನೆಯ ಅಂಕದಲ್ಲೂ ನಾಲ್ಕು ಶ್ಲೋಕಗಳು ಬಹುರಮ್ಯ" ಎಂದು.

"ದಿ ಪ್ಲೇ ಪರ್ಫೆಕ್ಟ್" ಎಂದು ಕರೆಸಿಕೊಂಡಿರುವ "ಅಭಿಜ್ಞಾನ ಶಾಕುಂತಲ" ನಾಟಕವನ್ನು ಬರೆದವನ ಹೆಸರನ್ನು ಕೇಳದ ಭಾರತೀಯರು ಇರಲಾರರು. ಹೌದು,. "ಕ್ವಿಂಟೆಸೆನ್ಸ್ ಓಫ್ ಇಂಡಿಯನ್ ಕಲ್ಚರ್" ಅಂದರೆ 'ಹಿಂಡಿ ತೆಗೆದ ಭಾರತೀಯ ಸಂಸ್ಕೃತಿಯ ಸಾರ' ಎಂಬ ಹೊಗಳಿಕೆಗೆ ಪಾತ್ರನಾಗಿರುವ ಕವಿಕುಲಗುರು ಕಾಳಿದಾಸನ ಅಮರ ನಾಟಕ ಇದು. ಇದನ್ನು ಓದಿ ಪಾಶ್ಚಾತ್ಯರೂ ಸಹ ತಲೆಯ ಮೇಲಿಟ್ಟು ಕುಣಿದಿದ್ದಾರಂತೆ. ಇದು ಅಷ್ಟು ನಯ–ನವುರುಗಳಿಂದ ಕೂಡಿದ ನಾಟಕವಾಗಿದೆ.

ಈ ನಾಟಕದ ಭಾವ–ಬಂಧಗಳಿಗೆ ಮನಸೋತು ಇದನ್ನು ಲ್ಯಾಟಿನ್ ಭಾಷೆಗೆ ಭಾಷಾಂತರಿಸಿದ ಮೊದಲಿಗನೆಂದರೆ ವಿಲಿಯಮ್ ಜೋನ್ಸ್. (ಸಕೊಂತಲಾ: ಆರ್ ದಿ ಫೇಟಲ್ ರಿಂಗ್, 1789)..ಸಂಸ್ಕೃತದಂಥಹ ಅಭಿಜಾತ ಭಾಷೆ ಯಲ್ಲಿರುವ ಕೃತಿಯ ಅನುವಾದಕ್ಕೆ ಸರಿಹೊಂದುವ ಭಾಷೆಯೆಂದರೆ ಅದು ಲ್ಯಾಟಿನ್ ಎಂದು ಅವನು ಭಾವಿಸಿದ್ದ. ಇದಾದ ಕೆಲವು ವರ್ಷಗಳ ನಂತರ ಮೊನಿಯರ್ ವಿಲಿಯಮ್ಸ್ (ಇವನು ಒಂದು ಸಂಸ್ಕೃತ–ಆಂಗ್ಲ ನಿಘಂಟುವನ್ನೂ ಮಾಡಿದ್ದಾನೆ, ಆನ್ಲೈನ್ ಅವತರಣಿಕೆಯೂ ಲಭ್ಯವಿದೆ) ಇದನ್ನು "ಶಾಕುಂತಲ ಆರ್ ದಿ ಲಾಸ್ಟ್ ರಿಂಗ್" ಎಂಬ ಹೆಸರಿನಲ್ಲಿ ಇಂಗ್ಲೀಷಿಗೆ ಭಾಷಾಂತರಿಸಿದ.

ಲ್ಯಾಟಿನ್‌ನಲ್ಲಿ ಭಾಷಾಂತರವಾಗುತ್ತಿದ್ದಂತೆಯೇ ಅದು ಪಾಶ್ಚಾತ್ಯಲೋಕದ ಸಾಹಿತ್ಯಾಸಕ್ತರ, ದಾರ್ಶನಿಕರ ಗಮನ ಸೆಳೆಯತೊಡಗಿತು. ಪರಿಣಾಮವೆಂದರೆ ಜರ್ಮನಿಯೇ ಮೊದಲಾದ ಹಲವಾರು ಯುರೋಪಿನ ಭಾಷೆಗಳಿಗೆ ಭಾಷಾಂತರಗೊಂಡಿತು. ಒಂದು ಕಾವ್ಯ ಇಷ್ಟು ಭಾಷಾಂತರಗಳನ್ನು ಕಂಡಿರುವುದು ಒಂದು ಇತಿಹಾಸವೇ ಆಗಿದೆ. ಜರ್ಮನ್ ಭಾಷೆಯ ಕವಿ–ದಾರ್ಶನಿಕ ಗಯಟೆಯಂತೂ ಈ ನಾಟಕದ ಮಾಧುರ್ಯವನ್ನು ಕುರಿತು ಮುಕ್ತವಾಗಿ ಪ್ರಶಂಸಿದ್ದಾನೆ.

ವಿದೇಶೀ ಭಾಷಾಂತರಗಳಂತೆ ಈ ನಾಟಕವು ದೇಶಭಾಷೆಗಳಲ್ಲಿಯೂ ಅನುವಾದವಾಗಿವೆ ಎಂದು ಬೇರೆ ಹೇಳಬೇಕಿಲ್ಲವಷ್ಟೇ. ಆದರೆ ಮೊದಲು ವಿದೇಶೀ ಭಾಷೆಗೇ ಇದು ಭಾಷಾಂತರವಾಗಿದ್ದು. ಬಹುಶಃ 18ನೇ ಶತಮಾನದಲ್ಲಿ ನಮ್ಮ ದೇಶದಲ್ಲಿ ಸಂಸ್ಕೃತ ಕಾವ್ಯ–ನಾಟಕಗಳ ಅಧ್ಯಯನಕ್ಕೆ ಅನುವಾದವನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಅಷ್ಟಾಗಿರಲಿಲ್ಲವೆನಿಸುತ್ತದೆ.

ಇನ್ನು ಕನ್ನಡದ ಮಟ್ಟಿಗೆ ಹೇಳುವುದಾದರೆ 19ನೇ ಶತಮಾನದಲ್ಲಿ ಶಾಕುಂತಲದ ಅನುವಾದಗಳು ಬರತೊಡಗಿದವು. ಇವರಲ್ಲಿ ಬಸವಪ್ಪ ಶಾಸ್ತ್ರಿಗಳ ('ಕರ್ನಾಟಕ ಶಾಕುಂತಲ ನಾಟಕಂ') ಹೆಸರೇ ಮೊದಲು ನಿಲ್ಲುವಂಥದ್ದಾಗಿದೆ. ಇವರಿಗೆ "ಅಭಿನವ ಕಾಳಿದಾಸ" ಎಂಬ ಹೆಸರಿಗೂ ಈ ಅನುವಾದವೇ ಕಾರಣ. ಇನ್ನೂ ಹಲವಾರು ಕನ್ನಡದ ಅನುವಾದಗಳಿವೆ.

ಪ್ರಸ್ತುತ ಲೇಖನದ ಉದ್ದೇಶಕ್ಕೆ ಅವುಗಳ ಪ್ರಸ್ತಾಪ ಸ್ವಲ್ಪ ಹೊರಚ್ಚಾಗಿರುವುದರಿಂದ ಇಲ್ಲಿಗೆ ಅವುಗಳನ್ನು ಕೈಬಿಡುವುದಾಗಿದೆ. ಬಸವಪ್ಪ ಶಾಸ್ತ್ರಿಗಳ ಅನುವಾದವನ್ನು ಈ ಲೇಖನದಲ್ಲಿ ಬಳಸಿಕೊಂಡಿರುವ ಕಾರಣ ಅವರ ಹೆಸರನ್ನು ವಿಶೇಷವಾಗಿ ಉಲ್ಲೇಖಿಸಲಾಗಿದೆ.

ಮೇಲಿನ ಸೂಕ್ತಿಯಲ್ಲಿ ಹೇಳಿರುವ ಆ ನಾಲ್ಕು ಶ್ಲೋಕಗಳನ್ನು ಯಥಾಶಕ್ತಿ ಪರಿಚಯಿಸುವ ಪ್ರಯತ್ನ ಈ ಲೇಖನದ್ದು.. ಶಕುಂತಲೆಯ ಕಥೆ ಬಹಳ ಪ್ರಸಿದ್ಧವಾದ ಕಥೆಯೇ ಆಗಿದೆ. ಭಗವಾನ್ ವೇದವ್ಯಾಸರ ಮಹಾಭಾರತದಲ್ಲಿನ ಸಂಭವಪರ್ವದಲ್ಲಿ "ಶಕುಂತಲೋಪಾಖ್ಯಾನ"ವು ಬರುತ್ತದೆ. ವ್ಯಾಸರ ಶಕುಂತಲೋಪಾಖ್ಯಾನವೇ ಕಾಳಿದಾಸನಿಗೂ ಆಕರವಾಗಿದೆ. ಕವಿ ಕಾಳಿದಾಸನು ನಾಟಕಕ್ಕೆ ಮತ್ತು ತನ್ನ ದರ್ಶನಕ್ಕೆ ಅನುವಾಗುವಂತೆ ವ್ಯಾಸರ ಆಕರದಲ್ಲಿ ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ರಚಿಸಿರುವ "ಶಾಕುಂತಲ" ನಾಟಕವೇ ಇಂದು ಎಲ್ಲರ ಮನಸ್ಸಿನಲ್ಲಿ ನೆಲೆಯಾಗಿ ನಿಂತಿದೆಯೇ ಹೊರತು ವ್ಯಾಸರ ಶಕುಂತಲೋಪಾಖ್ಯಾನ ಅಲ್ಲ. ಋಷಿಕವಿಯನ್ನೂ ಮೀರಿ ನಿಂತ ರಸೇಶ್ವರನಾಗಿದ್ದಾನೆ ಕವಿ ಕಾಳಿದಾಸ. ನಾಟಕದ ನಾಲ್ಕನೆಯ ಅಂಕದಲ್ಲಿ, ದುಶ್ಯಂತನನ್ನು ಗಾಂಧರ್ವ ವಿವಾಹವಾಗಿ, ಗರ್ಭವತಿಯೂ ಆಗಿರುವ, ಕಣ್ವರ ಸಾಕುಮಗಳು, ವಿಶ್ವಾಮಿತ್ರ-ಮೇನಕೆಯರ ಔರಸಪುತ್ರಿಯಾದ ಶಕುಂತಲೆಯನ್ನು ಪತಿಗೃಹಕ್ಕೆ ಕಳುಹಿಸುವ ಸಂದರ್ಭದ ಬಹಳ ರಸಾರ್ದ್ರವಾದ ಚಿತ್ರಣವಿದೆ. ಅಲ್ಲಿ ಬರುವ ನಾಲ್ಕು ಪದ್ಯಗಳನ್ನು ನಮ್ಮ ಪರಂಪರೆಯು ಬಹಳ ಮೌಲ್ಯದಿಂದ ಕೂಡಿದ, ಭಾವಗರ್ಭಿತವಾದ, ಉದಾತ್ತ ಜೀವನದ ಸಂದೇಶವನ್ನೂ ಸಾರುವ ಪದ್ಯಗಳಾಗಿವೆ ಎಂದು ನಂಬಿದೆ. ಆ ನಾಲ್ಕು ಶ್ಲೋಕಗಳ ಸ್ವಾರಸ್ಯವನ್ನಷ್ಟು ಕಾಣೋಣ.

ಮೊದಲನೆಯದು-

ತಮ್ಮ ಕಾಮ-ಭೋಗದ ಫಲವಾಗಿದ್ದ ಶಿಶುವನ್ನು ಅಪ್ಪ-ಅಮ್ಮರು ತ್ಯಜಿಸಿ ಹೋಗಿದ್ದರು. ಭೋಗ ಬೇಕಿದ್ದ ಅವರಿಗೆ ಭೋಗಕ್ಕೆ ಅನಿವಾರ್ಯವಾದ ಹೊಣೆಗಾರಿಕೆ ಬೇಕಿರಲಿಲ್ಲ. ಆದರೆ, ನಿಸ್ಸಂಗಿಗಳಾಗಿದ್ದ ಕಣ್ವರು ಆ ಎಳೆ ಬೊಮ್ಮಟೆಯನ್ನು ತಂದು ಆಶ್ರಮದಲ್ಲಿಟ್ಟುಕೊಂಡು, ಬಹಳ ಮುಚ್ಚಟೆಯಿಂದ ಸಾಕಿದ್ದರು. ಆ ಹೆಣ್ಣು ಮಗುವನ್ನು ಪತಿಗೃಹಕ್ಕೆ ಈಗ ಕಳುಹಿಸಬೇಕಾಗಿದೆ. ಅವರ ಹೃದಯವೂ ಒದ್ದಾಡುತ್ತಿದೆ. ಕಣ್ವರ ಮಾತುಗಳನ್ನು ನೋಡಿ-

> ಯಾತ್ಯದ್ಯ ಶಕುಂತಲೇತಿ ಹೃದಯಂ ಸಂಸ್ಪೃಷ್ಟಮುತ್ಕಂಠಯಾ
> ಕಣ್ಠಃ ಸ್ತಮ್ಭಿತ ಬಾಷ್ಪವೃತ್ತಿಕಲುಷಶ್ಚಿನ್ತಾಜಡಂ ದರ್ಶನಮ್ ।
> ವೈಕಲ್ಯಂ ಮಮ ತಾವದೀದೃಶಮಿದಂ ಸ್ನೇಹಾದರಣ್ಯೌಕಸಃ
> ಪೀಡ್ಯನ್ತೇ ಗೃಹಿಣಃ ಕಥಂ ನು ತನಯಾವಿಶ್ಲೇಷದುಃಖೈರ್ನವೈಃ ॥

ಬಸವಪ್ಪ ಶಾಸ್ತ್ರಿಗಳ ಅನುವಾದ

> ಕಳವಳವಾಂತುದೆನ್ನೆರ್ದೆ ಶಕುಂತಳೆ ಪೋದಪಳೆಂದು ಕಂಠಮುಂ
> ಮಳಸುವುದೊತ್ತುವಶ್ರುಭರದಿಂ ಜಡಮಾದುದು ದೃಷ್ಟಿ ಚಿಂತೆಯಿಂ ।
> ದಳಲಿನಿತಾಗೆ ಕಾಡ ಮನುಜಂಗೆನಗಂ ಕಡುನೇಹದಿಂದಮಿ
> ನ್ನುಳಿದ ಗೃಹಸ್ಥರಾತ್ಮಭವೆಯಂ ಕಳುಪುತ್ತಕಟೆಂತಳಲ್ವರೋ ॥

ವಿವರಣೆಯೇನೂ ಹೆಚ್ಚು ಬೇಡ.. ಇನ್ನೇನು ಹೊರಟು ಬಿಡುವುಳು ಶಕುಂತಲೆ ಎಂಬುದನ್ನು ನೆನೆದು ಕಣ್ವರ ಹೃದಯ ಉತ್ಕಂಠಿತವಾಗಿದೆ, ಕಂಠ ಬಿಗಿದಿದೆ, ನೀರು ತುಂಬಿದ ಕಣ್ಣು ಮಂಜಾಗಿದೆ, ತಮ್ಮಂಥಹ ವನದಲ್ಲಿ ವಾಸಿಸುವ ಆಶ್ರಮವಾಸಿಗಳಿಗೆ, ಪ್ರೀತಿ-ಸ್ನೇಹಗಳು ಅಗಲಿಕೆಯ ನೋವನ್ನು ಈ ಪರಿಯಲ್ಲಿ ಕೊಡುತ್ತವಾದರೆ ಇನ್ನು ಗೃಹಸ್ಥರು, ಸಂಸಾರಸ್ಥರು ಹೇಗೆ ಮದುವೆಮಾಡಿ ಗಂಡನ ಮನೆಗೆ ಮಗಳನ್ನು ಕಳುಹಿಸಿಕೊಡುವಾಗ ಎಷ್ಟು ದುಃಖ ಅನುಭವಿಸುತ್ತಾರೋ ಎಂದು ಯೋಚಿಸುತ್ತಿದ್ದಾರೆ. ಈಗ ಸ್ವಲ್ಪ ಪರಿಸ್ಥಿತಿ ಬದಲಾಗಿರಬಹುದು. ಆದರೆ ತಾಯಿ-

ತಂದೆಯರ ಭಾವನೆಗಳಲ್ಲಿ ಬದಲಾವಣೆ ಇರಲು ಸಾಧ್ಯವೇ? ಒಂದರ್ಥದಲ್ಲಿ ಸಾರ್ವಕಾಲಿಕವಾದ, ಕೊನೆಯಪಕ್ಷ ಭಾರತೀಯರ ಮಟ್ಟಿಗಾದರೂ ಸಾರ್ವಕಾಲಿಕವಾದ ಒಂದು ಸತ್ಯವನ್ನು ಕಣ್ವರ ಮಾತುಗಳು ತೆರೆದಿಟ್ಟಿವೆ.

ಎರಡನೆಯ ಪದ್ಯ–

ಕಣ್ವರು ತಮ್ಮ ಸಾಕುಮಗಳನ್ನು ಪತಿಗೃಹಕ್ಕೆ ಕಳುಹಿಸಲು ತಮ್ಮ ಆಶ್ರಮ ಪರಿಸರದಲ್ಲಿದ್ದ ವೃಕ್ಷಗಳ ಅಪ್ಪಣೆ ಕೋರುತ್ತಿದ್ದಾರೆ–

ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷು ಯಾ
ನಾ ದತ್ತೇ ಪ್ರಿಯಮಣ್ಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಮ್।
ಆದ್ಯೇ ವಃ ಕುಸುಮ ಪ್ರಸೂತಿಸಮಯೇ ಯಸ್ಯಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ಼್್ಞಾಯತಾಮ್ ॥

ಯಾರು ನಿಮಗೆ ನೀರೆರೆಯದೆಯೇ ತಾನು ನೀರು ಕುಡಿಯುತ್ತಿರಲಿಲ್ಲವೋ, ಯಾರು ತನ್ನನ್ನು ಚಿಗುರು, ಹೂವುಗಳಿಂದ ಸಿಂಗರಿಸಿಕೊಳ್ಳುವ ಸಹಜವಾದ ಆಸೆಯಿದ್ದರೂ, ನಿಮ್ಮ ಮೇಲಿನ ಸೋದರ ಪ್ರೇಮದಿಂದ ತಳಿರುಗಳನ್ನು ಕೊಯ್ಯುತ್ತಿರಲಿಲ್ಲವೋ, ನೀವು ಮೊದಲು ಕುಸುಮಿಸಿದಾಗ ಯಾರಿಗೆ ಹಬ್ಬವೇ ಆಗಿರುತ್ತಿತ್ತೋ_ ಅದೇ ಇವಳು ಶಕುಂತಲೆ ಪತಿಗೃಹಕ್ಕೆ ಹೊರಟುನಿಂತಿದ್ದಾಳೆ. ಎಲ್ಲರೂ ಅವಳಿಗೆ ಅನುಜ್ಞೆ ಕೊಡಿ.

ಅನುಜ್ಞೆ ಕೇಳುವ ಕತದಿಂದ ಆಶೀರ್ವಾದ ಬೇಡುತ್ತಿದ್ದಾರೆ ಕಣ್ವರು. ಸಕಲ ಚರಾಚರಗಳಲ್ಲಿ ಪರಮಾತ್ಮ ಚೈತನ್ಯದ ಆವಾಸ ಎಂದು ಭಾವಿಸಿದವರು ನಾವು ಭಾರತೀಯರು. ಇದಕ್ಕಿಂತಲೂ ಪರಿಸರ ಸ್ನೇಹ ಬೇರೆಲ್ಲಾದರೂ ಕಾಣಲು ಸಾಧ್ಯವೇ? ಅಥವಾ ಕೇವಲ ಘೋಷಣೆಗಳಿಂದ ಪರಿಸರ ಸ್ನೇಹ ಮೂಡೀತೇ? ಪ್ರಕೃತಿ ಮತ್ತು ಮಾನವರ ಜೊತೆಗಿನ ಅಷ್ಟು ಅಚ್ಚುಕಟ್ಟಾದ, ಸಾವಯವ ಸಂಬಂಧವನ್ನು, ಸಹಬಾಳ್ವೆಯನ್ನು ಶಾಕುಂತಲದಲ್ಲಿ ಕಂಡಂತೆ ಜಗತ್ತಿನ ಸಾಹಿತ್ಯದಲ್ಲೇ ಬೇರೆಲ್ಲೂ ಇಲ್ಲ ಎನ್ನುವ ಅಭಿಪ್ರಾಯವುಂಟು.

ಇನ್ನು ಮೂರನೆಯ ಪದ್ಯ –

ಗರ್ಭಿಣಿಯೂ ಆಗಿರುವ ಶಕುಂತಲೆಯನ್ನು ದುಷ್ಯಂತನ ಬಳಿಗೆ ಕರೆದೊಯ್ಯಲು ಕಣ್ವರು ಗೌತಮೀ ಎಂಬ ಹಿರಿಯ ತಾಪಸಿಯನ್ನೂ, ಶಾರದ್ವತ, ಶಾರ್ಙರವ ಎಂಬಿಬ್ಬರು ತರುಣ ಆಶ್ರಮವಾಸಿಗಳನ್ನು ನಿಯಮಿಸುತ್ತಾರೆ. ಕಣ್ವರು, ಪ್ರಿಯಂವದೆ, ಅನಸೂಯೆ ಮುಂತಾಗಿ ಎಲ್ಲರೂ ಆಶ್ರಮದಿಂದ ಹೊರಟು ಒಂದು ಸರೋವರ ಅಥವಾ ಕೊಳ ಸಿಗುವವರೆಗೂ ಬೀಳ್ಕೊಡಲು ಜೊತೆಯಾಗಿ ಬರುತ್ತಾರೆ. ಶಾಸ್ತ್ರಗಳು ಹೇಳುವಂತೆ ಒಂದು ಜಲದ ಆಸರೆಯವರೆಗೂ ಮಾತ್ರವೇ ಇಷ್ಟ ಜನರನ್ನು ಬೀಳ್ಕೊಡಲು ಜೊತೆಯಲ್ಲಿ ಹೋಗಬೇಕು ಎಂದಿರುವುದನ್ನು ಶಾರ್ಙರವ ನೆನಪಿಸಿದಾಗ, ಕಣ್ವರು ಅಲ್ಲೇ ನಿಲ್ಲುತ್ತಾರೆ. ನಿಂತು 'ತಾವು ದುಷ್ಯಂತನಿಗೆ ಯುಕ್ತವಾದ ಒಂದು ಸಂದೇಶವನ್ನು ಕಳುಹಿಸಬೇಕು' ಎಂದು ಯೋಚಿಸಿಕೊಂಡು ಶಾರ್ಙರವನನ್ನು ಕರೆದು ಹೇಳುತ್ತಿದ್ದಾರೆ. "ಮಗು ಶಾರ್ಙರವ, ಈ ಶಕುಂತಲೆಯನ್ನು ಮುಂದಿಟ್ಟುಕೊಂಡು, ದುಷ್ಯಂತನಿಗೆ ನಾನು ಹೀಗೆ ಹೇಳಿದೆ ಎಂದು ನೀನು ಹೇಳಬೇಕು" ಎನ್ನುತ್ತಾ ಹೇಳುತ್ತಿದ್ದಾರೆ.

ಅಸ್ಮಾನ್ ಸಾಧು ವಿಚಿನ್ತ್ಯ ಸಂಯಮಧನಾನ್ ಉಚ್ಚೈಃ ಕುಲಂ ಚಾತ್ಮನಃ
ತ್ವಯ್ಯಸ್ಯಾಃ ಕಥಮಪಿ ಅಬಾಂಧವಕೃತಾಂ ಸ್ನೇಹಪ್ರವೃತ್ತಿಂ ಚ ತಾಮ್ ।
ಸಾಮಾನ್ಯ ಪ್ರತಿಪತ್ತಿ ಪೂರ್ವಕಮಿಯಂ ದಾರೇಷು ದೃಶ್ಯಾ ತ್ವಯಾ
ಭಾಗ್ಯಾಯತ್ತಮತಃ ಪರಂ ನ ಖಲು ತದ್ವಾಚ್ಯಂ ವಧೂಬನ್ಧುಭಿಃ ॥

ನಾವು ಎಂತಹ ಸಂಯಮಿಗಳೆಂಬುದನ್ನು ಚಿನ್ತಿಸಿ, ನಿನ್ನ ಶ್ರೇಷ್ಠವಾದ ಪೌರವಕುಲವನ್ನು ನೆನೆದು, ನಿನ್ನಲ್ಲಿ ಇವಳು ನಾವು ಬಂಧುಗಳಿಗೆ ಯಾರಿಗೂ ತಿಳಿಯದಂತೆ ಒಲವಿತ್ತ ಪರಿಯನ್ನೂ ನೆನೆದು, ನೀನು ಇವಳನ್ನು ನಿನ್ನ ಭಾರ್ಯೆಯರಲ್ಲಿ ಸಾಮಾನ್ಯ ಗೌರವದೊಂದಿಗೆ ನಡೆಸಿಕೊ. ಮುಂದೆ ಅವಳ ಬದುಕು ಹೇಗೋ ಅದು ಅವಳ ಭಾಗ್ಯವು ಬಯಸಿದಂತೆ. ನಾವು ಹೆಣ್ಣಿನ ಕಡೆಯವರು ಇದಕ್ಕಿಂತ ಹೆಚ್ಚು ಹೇಳಬಾರದು.

ಸಂಯಮ, ಲೋಕದ ರೀತಿ–ನೀತಿಗಳನ್ನು ಕಂಡುಬಂದ ವಿವೇಕ, ಹೆಣ್ಣುಮಗಳು ಸುಖವಾಗಿರಲಿ ಎಂಬ ಕಳಕಳಿ–ಕಾಳಜಿ, ತಮಗೂ ತಿಳಿಯದಂತೆ ಗಾಂಧರ್ವ ವಿವಾಹವಾಗಿದ್ದಾಳೆ. ಗರ್ಭವನ್ನು ಹೊತ್ತಿದ್ದಾಳೆ. ಇದರಿಂದ ಸ್ವಲ್ಪ ನಮ್ಮ ಬಾಯಿಕಟ್ಟಿದಂತೆ ಆಗಿದೆ ಎಂಬ ಸೂಚನೆ ಎಲ್ಲವನ್ನೂ ಬಹಳ ತೂಕವಾಗಿ, ನವುರಾಗಿ ತಿಳಿಯಪಡಿಸುವ ಸಂದೇಶವನ್ನು ಕಣ್ವರು ಕೊಟ್ಟಿದ್ದಾರೆ.

ಮೂರನೇ ಸಾಲಿನ 'ಸಾಮಾನ್ಯ ಪ್ರತಿಪತ್ತಿ ಪೂರ್ವಕಂ ಇಯಂ.' – ಇಲ್ಲಿ ಸಾಮಾನ್ಯ ಶಬ್ದಕ್ಕೆ ನಾಲ್ಕೈದು ಅರ್ಥಗಳನ್ನು ಹೇಳುತ್ತಾರೆ.

ಸಾಮಾನ್ಯ – ಹತ್ತರ ಜೊತೆ ಇನ್ನೊಂದು ಎಂಬಂತೆ ನಿನ್ನ ಹೆಂಡತಿಯರಲ್ಲಿ ಇವಳನ್ನು ಒಬ್ಬಳಾಗಿ ಕಂಡು, ಅವರಿಗೆಲ್ಲಾ ಯಾವ ಗೌರವ ಕೊಡುತ್ತಿದ್ದೆಯೋ ಅಷ್ಟು ಕೊಟ್ಟು ನೋಡಿಕೋ ಎಂದು ಒಂದು ಅರ್ಥ.

ಸಾ ಮಾನ್ಯ – ಸಾ ಅವಳು ಅಂದರೆ ಶಕುಂತಲೆ ಬಹುಮಾನ್ಯಳು .. ಹಾಗೆ ನಡೆಸಿಕೋ ಎಂದು ಇನ್ನೊಂದು ಅರ್ಥ.

ಸಾ ಮಾಮ್ ಅನ್ಯ –.ಇವಳು ಈ ಶಕುಂತಲೆ ಬೇರೆಯಲ್ಲ, ಅವಳು ನಾನೇ ಅನ್ನುವಂತೆ ಗೌರವದಿಂದ ನಡೆಸಿಕೋ.

ಸಾ ಮಾ ಅನ್ಯ –.ಅವಳು ನೀನೇ ಬೇರೆ ಅಲ್ಲ (ಅಧಾರ್ಂಗಿ, ಅರ್ಧೋ ವಾ ಏಷ ಆತ್ಮನಃ ಯತ್ಪತ್ನೀ_ ಶ್ರುತಿವಾಕ್ಯ) ಎನ್ನುವಂತೆ ನಡೆಸಿಕೋ.

ಸಾ ಮಾ ಅನ್ಯ – ಅವಳು ಸಾಕ್ಷಾತ್ ಲಕ್ಷ್ಮೀ, ನಿನ್ನ ಗೃಹಲಕ್ಷ್ಮೀ_ ಹಾಗೆ ಗೌರವದಿಂದ ನಡೆಸಿಕೋ.

ಹೀಗೆ ಐದು ವಿಧದ ಅರ್ಥಗಳಿಗೆ ಅವಕಾಶಕೊಟ್ಟು ಕಣ್ವರು ಕಳುಹಿಸುವ ಸಂದೇಶವು ಎಲ್ಲ ಕಾಲಕ್ಕೂ ಎಲ್ಲಾ ಹೆಣ್ಣು ಹೆತ್ತ ತಂದೆತಾಯಿಗಳು ಬಯಸುವ ಸಂದೇಶವೇ ಆಗಿದೆ. ಪತಿಗೃಹದಲ್ಲಿ ರಾಜ್ಞಿಯಂತೆ, ಸಾಮ್ರಾಜ್ಞಿಯಾಗಿ ಬಾಳುವ ಗೌರವವನ್ನು ಪಡಿ ಎಂದು ವೇದಮಂತ್ರಗಳು ನವವಧುವಿಗೆ ಆಶೀರ್ವದಿಸುತ್ತವೆ. ಹೀಗೆ ರಸಮಾರ್ಗದಲ್ಲಿ ಸಾಗಿ ಕಾಳಿದಾಸ ಸನಾತನ ಮೌಲ್ಯಗಳನ್ನು ಎತ್ತಿಹಿಡಿದಿದ್ದಾನೆ.

ನಾಲ್ಕನೆಯ ಪದ್ಯ–

ದುಷ್ಯಂತನಿಗೆ ಸಂದೇಶ ಹೇಳಿದ ಕಣ್ವರು ತಮ್ಮ ಮಗಳಿಗೂ ಬುದ್ಧಿ ಹೇಳುತ್ತಿದ್ದಾರೆ. ಧರ್ಮವೋ, ಆಚಾರವೋ ಏಕಮುಖವಾಗಿರಲು ಸಾಧ್ಯವಿಲ್ಲವಲ್ಲ. ಶಕುಂತಲೆಗೆ ಕಣ್ವರು ಕೊಟ್ಟ ಪಾಥೇಯ– ದಾರಿಯ ಬುತ್ತಿ, ಬದುಕಿನ ಬುತ್ತಿ–

ಶುಶ್ರೂಷಸ್ವ ಗುರೂನ್ ಕುರು ಪ್ರಿಯಸಖೀವೃತ್ತಿಂ ಸಪತ್ನೀಜನೇ
ಭರ್ತುರ್ವಿಪ್ರಕೃತಾಪಿ ರೋಷಣತಯಾ ಮಾ ಸ್ಮ ಪ್ರತೀಪಂ ಗಮಃ।
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೇಷ್ವನುತ್ಸೇಕಿನೀ
ಯಾನ್ತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ ॥

ದುಷ್ಯಂತನಿಗೆ ಇವಳನ್ನು ಬಹುಮಾನ್ಯೆಯಾಗಿ ನಡೆಸಿಕೋ ಎಂದ ಕಣ್ವರು, ಇಲ್ಲಿ ಶಕುಂತಲೆಗೆ ಪ್ರೀತಿ–ಗೌರವಗಳು ಹಟ–ಯಾಚನೆಗಳಿಂದ ಬರುವಂಥದಲ್ಲ, ಅದನ್ನು ನೀನು ನಿನ್ನ ನಡವಳಿಕೆಯಿಂದ ಗಳಿಸಿಕೊಳ್ಳಬೇಕು. ಹಾಗೆ ಗಳಿಸಿಕೊಳ್ಳಲು ನೀನು ನಿನ್ನ ಪತಿಗೃಹದಲ್ಲಿ ಗುರು–ಹಿರಿಯರನ್ನು ಗೌರವಿಸು, ಸವತಿಯರಲ್ಲಿ ಸ್ನೇಹದಿಂದ ನಡೆದುಕೋ (ಅದು ಬಹುಪತ್ನಿತ್ವವಿದ್ದ ಕಾಲ. ಅದೂ ರಾಜನಿಗಂತೂ ಇನ್ನೂ ಅನಿವಾರ್ಯ), ಗಂಡನಿಗೆ ಸ್ವಲ್ಪ ಕೋಪ ಬಂದರೂ, ನೀನು ಬದಲಿಗೆ ಕೋಪಿಸಬೇಡ, ನಿನ್ನ ಸೇವಕವರ್ಗದವರನ್ನು ಪ್ರೀತಿಯಿಂದ ನಡೆಸಿಕೋ, ಭಾಗ್ಯಬಂದಾಗ (ಇವಳಿಗೆ ಸಂತಾನಭಾಗ್ಯ ಇನ್ನೇನು ಸಿಗಲಿದೆ, ದುಷ್ಯಂತನಿಗೆ ಬೇರೆ ಹೆಂಡತಿಯರಲ್ಲಿ ಮಕ್ಕಳಿಲ್ಲ . ಜೊತೆಗೆ ಆಶ್ರಮದ ಸರಳ ಜೀವನದಿಂದ ವೈಭವದ ಅರಮನೆಯ ವಾಸಕ್ಕೆ ಹೋಗುತ್ತಿದ್ದಾಳೆ)ಜಂಭಪಡಬೇಡ. ಹೀಗೆ ನಡೆಯುತ್ತಾ ಯುವತಿಯರು ಗೃಹಿಣಿಯರಾಗಿ ಪಕ್ವವಾಗಬೇಕು. ಇಲ್ಲವೋ, ಅವರು ವಾಮೆಯರು– ಸ್ವಲ್ಪ ಹದ್ದುಮೀರಿದವರಾಗಿ, ತವರಿಗೆ ಮುಳ್ಳಾಗ್ತಾರೆ. ನೀನು ಹಾಗಾಗದಿರು ಎನ್ನುವ ಕಣ್ವರ ಮಾತುಗಳು ಈ ಕಾಲಕ್ಕೆ ಎಷ್ಟು ಪ್ರಸ್ತುತವೋ ಗೊತ್ತಿಲ್ಲ. ಈ ಎಚ್ಚರಿಕೆಗಳೆಲ್ಲ ಸ್ವಲ್ಪ ಇದ್ದರೆ ಕುಟುಂಬದ ಸಾಮರಸ್ಯದಲ್ಲಿ ಈಗ ಕಾಣುತ್ತಿರುವಷ್ಟು ಬಿರುಕುಗಳು, ಒಡೆತಗಳು ಇರುವುದಿಲ್ಲವೇನೋ?

ಕಣ್ವ ಮಹರ್ಷಿಗಳು ದೊಡ್ಡವರು. ಅಪ್ಪ–ಅಮ್ಮನಿಗೇ ಬೇಡವಾದ ಬೀದಿಯಲ್ಲಿ ಬಿದ್ದ ಮಗುವನ್ನು ತಂದು ಅಕ್ಕರೆಯಿಂದ ಬೆಳೆಸಿದರು. ಯೌವನಕ್ಕೆ ಬಂದ ಮಗಳಿಗೆ ಏನೋ ಗಂಡ ಕಾದಿದೆ ಎಂದು ಅದರ ಪರಿಹಾರಕ್ಕೆಂದು ಸೋಮತೀರ್ಥಕ್ಕೆ ಇವರು ಹೋಗಿದ್ದಾಗ ಅವಳು ಇವರಿಗೆ ತಿಳಿಯದಂತೆಯೇ ಮದುವೆ–ಗರ್ಭ ಎಲ್ಲವನ್ನೂ ಮಾಡಿಕೊಂಡಳು. ಆದರೂ ಅವರು ಅವಳನ್ನು ಹಳಿಯಲಿಲ್ಲ. ಹೀಯಾಳಿಸಲಿಲ್ಲ. ಪುರುವಂಶೀಯನಾದ ದುಷ್ಯಂತನಂಥ ಪತಿ ಸಿಕ್ಕಿದ್ದು ಭಾಗ್ಯವೇ ಎಂದುಕೊಂಡರು. ತಂದೆಯಾಗಿ ಮಾಡಬೇಕಾದ ಕರ್ತವ್ಯವನ್ನು ಚ–ತು ತಪ್ಪದೇ ಮಾಡಿ ಪತಿಗೃಹಕ್ಕೆ ಕಳುಹಿಸುತ್ತಿರುವ ಈ ದೃಶ್ಯ ಯಾರ ಮನಸ್ಸನ್ನೂ ಸೆಳೆಯುತ್ತದೆ.

ಅಭಿಜ್ಞಾನ ಶಾಕುಂತಲದ ಎಲ್ಲಾ ಅಂಕಗಳೂ ಚಂದ. ಎಲ್ಲಾ ಪದ್ಯ–ಸಂವಾದಗಳೂ ಸೊಗಸು. ನಾಲ್ಕನ್ನು ಇಲ್ಲಿ ಪರಿಚಯಿಸುವ ಪ್ರಯತ್ನ ಮಾಡಿದ್ದೇನೆ. ಶತಾವಧಾನಿ ಗಣೇಶರ ಮಾತುಗಳಲ್ಲಿ ಹೇಳುವುದಾದರೆ "ಇವು ಗುಪ್ತರ ಸುವರ್ಣಯುಗದ ಉತ್ಥಾನ ಭೋಗದ ತಳಾತಳದಲ್ಲಿ ಯೋಗೀಶ್ವರನಂತೆ ಬದುಕಿ ಬಾಳಿದ ಋಷಿಕವಿಯ ವಾಣಿ". ಸದಾ ನಮ್ಮ ಹೃನ್ಮನಗಳನ್ನು ಬೆಳಗುವ ಅಪೋಜ್ಯೋತಿ. ತಂಬೆಳಕು – ಚೆಂಬೆಳಕು ಎನ್ನಬಹುದು.

***

ಕೌಸಲ್ಯೆಯ ರಾಮ

– ರಾಧಿಕಾ ವಿ ಗುಜ್ಜರ್

ನನ್ನ ಶಾಮಲ ರಾಮಚಂದ್ರನ
ಕಾಲು ನೀಡಿ ಅಭ್ಯಂಗ ಮಾಡಿಸೆ
ಅಷ್ಟಗಂಧವಿಳಿದು ಹರಿಯುತ
ನೀಲ ನೀರಜಗಳರಳಿಸಿದೆ

ನನ್ನ ಶಾಮಲ ರಾಮಚಂದ್ರನು
ಅಂಗಳಕಿಳಿದು ಮಮ್ಮು ಉಣುತಿರೆ
ಉಳಿದ ತುತ್ತುಗಳಗಾಗಿ ಇಳಿದ
ಗಿಳಿಹಿಂಡು ರಾಮನಾಮ ಮರೆತಿವೆ

ನನ್ನ ಶಾಮಲ ರಾಮಚಂದ್ರನು
ಹೇಮ ಮಂಚದೊಳು ಪವಡಿಸಿರೆ
ಚೆನ್ನ ಖನಿಯ ಹಾಲ್ಗೆನ್ನೆ ನೋಡೆ
ತನ್ನ ಬನಿಯ ಶಶಿ ಒರೆಸಿಕೊಂಡನೆ

ನನ್ನ ಶಾಮಲ ರಾಮನೊಡನೆ
ಅಂಬೆಗಾಲಲುರುಳೋ ತ್ರಯರು
ಅಂಬೆಗಳಗೆ ಪುಷ್ಪರಾಗವು
ನೀಲರಾಮ ಅಲ್ಲಿ ದಿವ್ಯಕಾಂತನು

ನನ್ನ ಶಾಮಲ ರಾಮಚಂದ್ರನು
ತಮ್ಮಂದಿರನು ಮುದ್ದಿಸಿ ಕರೆದು
ತರತಮ ತೋರದೆ ಆಟಕೆಯೀವ
ವಾತ್ಸಲ್ಯಕುಪಮೆ ಹಿರಿಯಣ್ಣನು

ನನ್ನ ಶಾಮಲ ರಾಮಚಂದ್ರಗೆ
ಆತ್ಮವಾದ ಮೂವರನುಜರು
ನನ್ನ ಸುಭಗದ ಶ್ಲೋಕಗಳಲಿ
ನಾಲ್ಕು ಮುಗ್ಧ ಚರಣಗಳವರು

ನನ್ನ ಶಾಮಲ ರಾಮಚಂದ್ರನು
ತೊದಲು ಭಾಷಣ ಚಿಗಿದು ನಗುವ
ಸಂವಾದದೆ ತೊದಲನುಲಿಸುವ
ತೊದಲ ರಾಜಭಾಷೆಯಾಗಿಸಿಹ

ನನ್ನ ಶಾಮಲ ರಾಮಚಂದ್ರನು
ತೊದಲಲುಲಿಯೆ ವೇದ ಸಾಲನು
ಆಲಿಸುತಿಹ ಆದಿ ಪುರುಷನು
ಇಳಿವ ಜೊಲ್ಲಿನ ಜೇನ ಒರೆಸನು

ನನ್ನ ಶಾಮಲ ರಾಮಚಂದ್ರನು
ಆಗಸದ ಚಂದಮಾಮ ತೋರಿ
ಹಟದಿ ಜಾಗರಣೆಯನು ಮಾಡಿಸಿ
ಪ್ರಾಸಾದಕೆಲ್ಲರೆಳೆದ ಪೋರನು

ನನ್ನ ಶಾಮಲ ರಾಮಚಂದ್ರನು
ಮುಂದೆ ತರುಣನಾಗಿ ಬೆಳಗಲು
ಇಂದಿನಿಂದಲೆ ವ್ರತ ನೇಮವು
ದೈವ ಕೃಪೆಯ ವರುಷ ಬೇಡಲು

ಶಾಮಲ ಕಂದ ಶ್ರೀರಾಮಚಂದ್ರ
ಕೌಸಲ್ಯಾತ್ಮಜ ಪಂಚಪ್ರಾಣ

***

ಅಪ್ಪಯ್ಯನಿಗೆ ಮದುವಿ

-ಗೋಪಿನಾಥ್

ಜಳಕಮಾಡಿ ದೇವರಪೂಜಿಗೆ ಕುಳತಿದ್ದ ಕುಲಕರ್ಣಿಯವರಿಗೆ ಮನೆಕೆಲಸದಾಕಿ ಲಕ್ಷ್ಮೀಬಾಯಿ ವಿಷಯ ಮುಟ್ಟಿಸಿದಳು.

"ಲಗೂನ ಪೂಜಿ ಮುಗಿಸಿ ಬರ್‍ರೆಲ್ಲಾ, ಶಾಂತಕ್ಕ ಬಂದಾರ ಲಗ್ನದ ವಿಷಯ ಮಾತಾಡಲಿಕ್ಕ" ಕುಲಕರ್ಣಿಯವರ ಮಗಳಿಗೂ ದೇಶಪಾಂಡೆಯವರ ಮಗನಿಗೂ ಶಾಂತಕ್ಕ ಹೆಣ್ಣು-ಗಂಡು ಹೊಂದಿಸ್ಯಾಳೆ.

"ಆಯ್ತು. ಒಂದ್ ಮಿನಿಟದಾಗ ಬರತೀನಿ" ಅಂತ ಕುಲಕರ್ಣಿ ದೇವರಪೂಜಿ ಅಷ್ಟಕ್ಕೆ ನಿಲ್ಲಿಸಿ ಕೈ ಮುಗಿದು, "ಯಪ್ಪಾ..ದೇವರೇ, ಆಕಿ ಬಂದಾಳಂದ್ರ ಮತ್ತೇನ ಡಿಮ್ಯಾಂಡ್ ತಂದಿರತ್ತಾಳಾ ಹುಡುಗನ ಕಡೀಂದ" ಎಂದು ಅನಕೋತ ದೇವರಮನಿಯಿಂದ ಹೊರಗ ಬಂದು,

"ನಮಸ್ಕಾರ್‍ರೀ, ಏನ್ ಸಮಾಚಾರ ತಂದೀರಿ. ಎಲ್ಲಾ ಚಲೋ ಅದೀರಲ್ಲೋ" ಅಂತ ಶಾಂತಕ್ಕನಿಗೆ ಕೇಳದರು.

"ಹೂನ್ರೀ, ಬರ್‍ರೀ, ಕುಂದರ್‍ರೀ" ಎಂದರು ಶಾಂತಕ್ಕ.

ಶಾಂತ ಅನ್ನೊ ಹೆಸರು ಶಾಂತಕ್ಕ ಆಗೇದ. ಆಕಿಗಿನ್ನೂ ನಲವತ್ತು ವರ್ಷ.. ಈ ಕಸುಬು ಆಕಿ ಕೈಹಿಡಿದು ಆಕೀನ ಎಲ್ಲಾ ಮಂದಿ ಶಾಂತಕ್ಕಾಂತ ಗೌರವದಿಂದ ಕರಿಯೊ ಹಂಗಾಗದೆ. ಆದರೆ ಆಕಿಗಿನ್ನೂ ಲಗ್ನ ಆಗಿಲ್ಲ. ಕುಲಕರ್ಣಿ ಸಾಹೇಬರಿಗಿನ್ನೂ ಐವತ್ತಕ್ಕೆ ಐದು ಕಮ್ಮಿ... ಆಗಲೇ ಹೆಂಡತಿ ಕಳಕೊಂಡಾರ. ಹೆಂಡತಿ ಹೋದಮ್ಯಾಲೆ ಕೈಬಾಯಿ ಸುಟುಕೊಂಡು ಮಗಳನ್ನು ದೊಡ್ಡವಳಾಗಿ ಬೆಳಸ್ಯಾರ. ಈಗ ಆಕಿಗೆ ಗಂಡು ಹುಡುಕಲು ಶಾಂತಕ್ಕನಿಗೆ ಹೇಳದ್ದರು.

"ಸಾಹೇಬರಾ, ಮಗಳು ವನಜಾ ಎಲ್ಲಿ ಕಾಣೋಹಂಗಿಲ್ಲ?"

"ಆಕಿ ಕಾಲೇಜಿಗೆ ಹೋಗ್ಯಾಳ".

..

"ಮತ್ತ ಆಕಿಗ ನೀವೇ ತಿಂಡಿ ಮಾಡಿಕೊಟ್ಟರೇನು?"

"ಇಲ್ಲವ್ವ ಆಕಿನೇ ಮಾಡಿಕೊಂಡಾಳ, ನಿಮ್ಮದು ತಿಂಡಿ ಆಗಿಲ್ಲಂತಿದ್ದರೆ ಬರ್‍ರೆಲ್ಲಾ, ನೀವೂ ರುಚಿ ನೋಡ್ರಿ, ನನ್ನ ಮಗಳು ಎಷ್ಟು ಚಲೊ ಮಾಡ್ಯಾಳ ಬಕ್ರಿ" ಎಂದರು.

"ನಿಮಗ ಮಗಳ ಕಂಡ್ರ ಅದೆಷ್ಟು ಪ್ರೀತಿ ಸಾಹೇಬ್ರಾ, ಹೆಂಡತಿ ಹೋದಮ್ಯಾಕ ನೀವು ಇನ್ನೊಂದು ಲಗ್ನ ಯಾಕಾಗಲಿಲ್ಲಾಂತ ಈಗ ತಿಳೀತದ.. ಆದ್ರೂ ನೀವು ಲಗ್ನ ಆಗಬೇಕಿತ್ತು ನೋಡ್ರಿ.."

"ಯಾಕಾ..ನಾ ಚಂದಿರೋದು ಇಷ್ಟವಿಲ್ಲೇನು ನಿಮಗ? ಇನ್ನೊಂದು ಮದುವಿಯಾಗಿದ್ದರ ನನ್ನ ಮಗಳು ನನ್ನ ಪ್ರೀತಿ ಮಾಡತ್ತಿದ್ದಳೇನು? ಹೌದು, ನೀವ್ಯಾಕೆ ಮದುವಿ ಮಾಡಿಕೊಳ್ಳಲಿಲ್ಲ, ನನಗ ಹೇಳುವಾಕಿ".

"ನನ್ನ ಜವಾಬ್ದಾರಿ ಹೆಚ್ಚಿತ್ತು, ಮುಗದಾಗ ವಯಸ್ಸು ಹೆಚ್ಚಾಗಿ ಸುಮ್ಮಗಾದೆ".

‘ಹಂಗೇನಿಲ್ರೀ, ನೀವು ಇನ್ನೂ ಸಣ್ಣಾಕಿ ಇದೀರಿ. ಮದುವಿ ಆಗಬಹುದು ತಪ್ಪಿಲ್ಲ.. ಚಲೊ ಕಾಣತ್ತೀರಿ” ಎಂದು ಹೊಗಳಿಕೆ ಮಾತಾಡಿದರು ಕುಲಕರ್ಣಿಯವರು.

ಅದೇ ವೇಳ್ಯಾಗ ಸರಿಯಾಗಿ ಮಗಳು ವನಜ ಮನಿ ಒಳಗ ಬಂದು ಅವರಿಬ್ಬರ ಮಾತನ್ನು ಆಲಿಸ್ಯಾಳೆ. .ಅಪ್ಪಯ್ಯ ಮೆಚ್ಚಿಕೊಂಡ ಮಾತು ಕಿವಿಗೆ ಬಿದ್ದಿತ್ತು!

"ಅದು ಬಿಡರಲ್ಲ ಶಾಂತಮ್ಮ ಈಗ ಅದೇನು ಗಂಡಿನವರ ಕಡಿಯಿಂದ ಖಬರ್ ತಂದೀರಿ ಹೇಳ್ರಿ..”

"ಅವರಿಗೆ ಇನ್ನು ಸ್ವಲ್ಪ ಬಂಗಾರ ಹಾಕಲೀಂತ ಆಶಾ ಅದ. ಇನ್ನೊಂದು ಲಕ್ಷ ರೂಪಾಯಿ ಬಂಗಾರ ಹಾಕಲೀಂದ್ರು..”

"ನಾ ಏನು ರೊಕ್ಕ ಪ್ರಿಂಟ್ ಹಚ್ಚಲ್ಲ, ಎಲ್ಲಿಂದ ತರೋದು ರೊಕ್ಕ.. ನಾ ಸಾಮಾನ್ಯ ಗುಮಾಸ್ತ. ನಮ್ಮಪ್ಪಂದು ಚಿಕ್ಕಾಸೂ ದಕ್ಕಿಲ್ಲ ಆಸ್ತಿ”.

“ಸಿಟ್ಟಾಗಬ್ಯಾಡ್ರಿ..ನಂಗೊತ್ತು, ನಿಮ್ ಕಷ್ಟ ನಂಗ್ ತಿಳೀತದ_ ನಾ ಏನಾರ ಹೇಳತೀನಿ ಬಿಡರಲ್ಲ.. ಹಿಂಗ ಕೋಪ ಬಂದಾಗ ಹೆಂಡತಿ ಇರಬೇಕು ನೋಡ್ರಿ ಸಮಾಧಾನ ಮಾಡಲಿಕ್ಕ.. ತಿಳೀತಿಲ್ಲೊ ನೀವು ಇನ್ನೊಂದ್ ಮದುವಿ ಮಾಡಕೊಳ್ರೀ, ಹುಡುಗಿ ನಾ ಹುಡಕತ್ತೀನಿ..ನೀವು ಮಗಳಿಗೆ ಮದುವಿ ಮಾಡತ್ತಿದ್ದೀರಲ್ಲ, ಆಕಿ ವರ್ಷದಾಗೆ ಬಸುರಿಯಾಗಿ ಮನಿಗ್ ಬಂದ್ರ ಆಕಿಗೆ ಬಾಣಂತನ ನೀವು ಮಾಡತ್ತಿರೇನು? ಮಗಳ ಸಲುವಾಗಿಯಾದರೂ ನೀವು ಮದುವಿಯಾಗಬೇಕು.. ಅದು ಮೊದಲು ಅವಶ್ಯಕತಿ ಐತಿ”.

ವನಜಳಿಗೆ ಶಾಂತಕ್ಕ ಅಪ್ಪನ್ನ ರಮಿಸುವ ಮಾತು..ಇಷ್ಟವಾಗಿ, ಕಟ್ಟಿಕೊಂಡ ಹೆಂಡತಿಯ ಹಾಗೆ ಸಂತೈಸತ್ತಾಳೆ ಅಪ್ಪನ್ನ ಎನಿಸಿತು. ಆಕಿ ಸಿಟ್ಟಾಗಬ್ಯಾಡ್ರಿಂತ..ಎಷ್ಟು ಚಂದಾಗಿ ಅಪ್ಪಯ್ಯನ್ನ ರಮಿಸ್ತಾಳೆ. ಇಂತಹ ಮಾತು ಹೆಂಡತಿಯಿಂದ ಮಾತ್ರ ಸಾಧ್ಯ ಎಂದುಕೊಂಡು, ಅಪ್ಪಯ್ಯನಿಗೆ ತಕ್ಕವಳು ಎನಿಸಿತು. ತನ್ನ ಮದುವಿಗಿಂತಲು ಅಪ್ಪಯ್ಯನಿಗೆ ಹೆಂಡತಿ ಭಾಳ ಅವಶ್ಯಕ ಐತಿ ಎನಿಸಿತು .

"ಅಪ್ಪಯ್ಯ.. ಏನು ಭಾರೀಜೋರಾಗಿ ಲಗ್ನದ ಮಾತ ನಡದೈತಿ?..ಶಾಂತಕ್ಕ ಎಲ್ಲಿಗೆ ಬಂತು ನನ್ನ ಲಗ್ನದ ಮಾತು?”

"ಇದೇನವ್ವ ಯಾಕಿಷ್ಟು ಆತುರ ಮದುವಿಯಾಗಾಕ?”

"ನಾ ಲಗೂನ ಮದುವಿಯಾಗಿ ನಮ್ಮಪ್ಪಗೆ ಹೆಣ್ಣು ನೋಡಬೇಕು”.

"ಯವ್ವಿ..ಯವ್ವಿ..ಇದೇನವ್ವ ಇಂತ ಯೋಚನಿ..”

"ಹೌದು ಶಾಂತಕ್ಕ ನಾ ಮದುವಿಯಾಗಿ ಹೊಂಟರೆ ನಮ್ಮಪ್ಪಗೆ ಯಾರು ನೋಡತಾರ_ ನಾ ಏನಾರ ಮಾಡಿ ಹೋಗಬೇಕಲ್ಲ.”

"ಇದೇನು ಮಗಳೆ ನಿನ್ನ ಮಾತು. ತಮಾಷಿ ಬ್ಯಾಡವ್ವ ನಿನ್ನ ಮದುವಿ ಹ್ಯಾಂಗ್ ಮಾಡೋದೂಂತ ನನ್ನ ಚಿಂತಿಯಾದ್ರೆ ನೀ ನನಗಾ ಲಗ್ನಾ ಮಾಡಕ್ಕ ಹೊಂಟೀಯಾ."

"ಅಪ್ಪಯ್ಯ, ನಂಗೆ ಮದುವಿ ಮಾಡತೀಯಾ ಸರಿ.. ನಾ ಮದುವಿಯಾಗಿ ಹೆರಿಗಿಗೀಂತ ಮನೀಗೆ ಬಂದ್ರೆ ನೀ ಏನ್ ಮಾಡೀಯಾ ನನ್ನ ಚಾಕರಿ? ಅದಕ ನೋಡು, ನೀ ಮದುವಿಯಾಗು ಅಂದದ್ದು ನನ್ನ ಸ್ವಾರ್ಥಕ್ಕೆ."

"ಬಾರಿ ಬುದ್ಧಿವಂತಳು ಕಾಣವ್ವ ನೀನು ಚಲೋ ಮಾತು ಆಡದೀ. ಅಪ್ಪಯ್ಯನ್ನ ಹೆಂಗ್ ಕಟ್ಟಿಹಾಕಿಬಿಟ್ಟೀ".

"ಶಾಂತಕ್ಕ, ನಮ್ಮ ಅಪ್ಪಗೊಂದು ಹೆಣ್ಣು ನೋಡಿ.."

"ಅವರಿಗೆ ಎಂತಾ ಹೆಣ್ಣು ಬೇಕೂಂತ ಹೇಳವ್ವ, ಪ್ರಯತ್ನ ಮಾಡುವಾ" ಶಾಂತಕ್ಕ ಹೇಳಿದಳು.

"ನಾನೊಂದು ಹೆಣ್ಣು ನೋಡಿನೀ, ಆಕಿ ಒಪ್ಪಿದರ ನೀವೇನೂ ಹೆಣ್ಣು ನೋಡೋದು ಬ್ಯಾಡ.."

"ಯಾರವ್ವ ಹೆಣ್ಣು..ನೀನೇ ಹುಡುಕಿಯಾಂದ ಮ್ಯಾಲೆ ನನ್ನ ಕಮಿಷನ್‌ಗೇ ಸಂಚು ತಂದಯಲ್ಲವ್ವಾ, ಯಾರಾಕಿ?"

"ಶಾಂತಕ್ಕ, ನಿಮ್ಮ ಕಮಿಷನ್ ಏನಾಗಲ್ಲ ಚಿಂತಿ ಬ್ಯಾಡ್ರೀ, ಹೆಣ್ಣು ಯಾರು ಗೊತ್ತೈತೇನು?"

"ನೀನು ಚಂದಾಕಿರೊ ಹೆಣ್ಣೇ ನೋಡಿರ್ತೀ ಬಿಡವ್ವ. ಒಟ್ಟಿನಲ್ಲಿ ಸಾಹೇಬರನ್ನ ಚಂದಾಗಿ ನೋಡಿಕೊಳ್ಳೊ ಹೆಣ್ಣಾಗಬೇಕು".

"ಖರೇ ಐತಿ ನಿಮ್ಮಮಾತು ಶಾಂತಕ್ಕ.. ಆ ಹುದ್ದಿಗೆ ನಿಮ್ಮನ್ನೇ ಆಯ್ಕೆ ಮಾಡಿರೋದು ನಾ"

.

ಶಾಂತಕ್ಕ ನಾಚಿಕೆಯಿಂದಲೇ, "ಬ್ಯಾಡವ್ವ ನಾನೆಲ್ಲಿ ಅವರೆಲ್ಲಿ. ನನ್ನ ಅವರು ಲಗ್ನ ಆದಾರೇ..?"

"ಶಾಂತಕ್ಕ.. ಬ್ಯಾಡ ಅಂತಲೇ..ನನ್ನ ಲಗ್ನ ಆದಾರೇ ಅಂತ ಒಪ್ಪಿಗೆ ಕೊಟ್ಟೀಯಲ್ಲ" ಅಂತ ನಗಾಡಿದಳು ವನಜಾಕ್ಷಿ.

"ಹಂಗೆಲ್ಲ ಕೇಳಬ್ಯಾಡ ನಂಗ್ ನಾಚಿಕಿ ಆಗ್ತದ"

..

"ಅಪ್ಪಯ್ಯ ನಿಂಗೆ ಒಪ್ಪಿಗೆ ನಾ?"

"ಇದೇನು ಮಗಳೆ.. ನಿನ್ನ ಹುಡುಗಾಟ. ಮದುವಿ ಮಾಡಿಕೊಂಡು ಗಂಡನ ಜೊತಿಗೆ ಕನಸು ಕಾಣೋ ವಯಸಾಗೆ ಅಪ್ಪನ ಮದುವಿ ಮಾಡೋ ಚಿಂತಿ ನಿನಗೆ.. ಇದೆಲ್ಲ ಬ್ಯಾಡವ್ವ.."

"ಅಪ್ಪಯ್ಯ, ಆಕಿಗೆ ನಿನ್ನ ಕಂಡ್ರೆ ಪ್ರಾಣ. ಆಕಿ ಜೊತೀಗೆ ನೀ ಇದ್ದರ ನನಗ ನೆಮ್ಮದಿ. ಒಲ್ಲೆ ಅನಬ್ಯಾಡ ಅಪ್ಪಯ್ಯ." ಎಂದಾಗ..ಶಾಂತಕ್ಕ–ಕುಲಕರ್ಣಿಯರ ನಾಲ್ಕು ಕಣ್ಣುಗಳು ಒಂದಾಗಿದ್ದವು!

"ಮುಗಸಟ್ಟಿ ಹೆಣ್ಣು ಗೊತ್ತಾತೂಂತ ನನ್ನ ಕಮಿಷನ್ ಕೊಡದೆ ಇರಬ್ಯಾಡರೀ ಮತ್ತ" ಅಂದಳು ಶಾಂತಕ್ಕ!!

***

ಮರದ ಸಾವು

– ನಾಗರತ್ನ ಚಂದ್ರಶೇಖರ್

ಆ ಮನೆಯಲ್ಲಿ ಅಂದು ಸ್ಮಶಾನ ಮೌನ ಆವರಿಸಿತ್ತು. ಹಿರಿಜೀವಗಳಾದ ಸೀತಾಲಕ್ಷ್ಮಿ, ಶಿವರಾಮಯ್ಯ ಇಬ್ಬರಿಗೂ ಊಟ ಮಾಡಲೂ ಮನಸ್ಸಿಲ್ಲ. ಮನೆಯಲ್ಲಿ ಸೂತಕದ ವಾತಾವರಣ ಸೃಷ್ಟಿಯಾಗಿದ್ದರೂ ಆ ಮನೆಯ ಸದಸ್ಯರನ್ನು ಬಿಟ್ಟರೆ ಮಿಕ್ಕವರಾರಿಗೂ ಸಂಬಂಧಪಟ್ಟಿಲ್ಲ ಎನ್ನುವಂತೆ ಹೊರಜಗತ್ತು ಎಂದಿನಂತೆಯೇ ಇತ್ತು.

"ಸೀತಾ ನಿನಗೆ ಜ್ಞಾಪಕ ಇದೆಯಾ ಆ ಮರ ಇನ್ನು ಚಿಕ್ಕದಿರುವಾಗ ನಮ್ಮ ಅನಿ, ಸುನಿ ಇಬ್ಬರೂ ಅದಕ್ಕೆ ಬೆಳಗೂ, ಸಂಜೆ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ಹೋಗಿ ಹಾಕುತ್ತಿದ್ದುದು."

"ಅದರ ಹೂವುಗಳಂತೂ ಮೊದಲ ಸಾರಿ ಬಿಟ್ಟಾಗ ಒಳ್ಳೆ ಬೆಂಕಿ ಜ್ವಾಲೆಗಳೇನೋ ಎನಿಸಿತ್ತು ಬೆಳಕು ಹರಿಯುತ್ತಿದ್ದಂತೇ ಅದರ ಮೇಲೆ ರಾತ್ರಿಯಿಡೀ ಮಲಗಿರುತ್ತಿದ್ದ ಹಕ್ಕಿಗಳೆಲ್ಲಾ ಎಷ್ಟು ಸಂಭ್ರಮದಿಂದ ಗೂಡು ಬಿಟ್ಟು ಗುಂಪು ಗುಂಪಾಗಿ ಚಿಲಿಪಿಲಿಗುಟ್ಟುತ್ತಾ ಹಾರಿ ಹೋಗಲು ಸಿದ್ಧವಾಗುತ್ತಿದ್ದವು ಅಲ್ಲವೆ?"

"ಸೀತಾ..... ನಿನಗೆ ಇನ್ನೊಂದು ವಿಷಯ ಗೊತ್ತಿದೆಯಾ? ನಮ್ಮ ಮೊಮ್ಮಕ್ಕಳು ಯುಗಾದಿಗೆ ಜೋಕಾಲಿ ಆಡಿದ್ದು....!"

"ಹುಂ......ಹೌದು ರೀ....ಪಾಪ ಈಗ ಅಮೇರಿಕಾದಲ್ಲೂ ಆ ಮಕ್ಕಳು ಅದನ್ನು ನೆನಸಿಕೊಳ್ಳುತ್ತಲೇ ಇರುತ್ತಾರಂತೆ, ಅವರ ಮನೆ ಹಿಂದೆನೂ ಒಂದೆರಡು ಮರಗಳಿವೆಯಂತೆ. ಅದಕ್ಕೆ ಕಾರಿನ ಟೈರ್ ಕಟ್ಟಿ ಆಟವಾಡುತ್ತಾರೆ ಅಂತ ಸುನಿ ಹೇಳ್ತಾ ಇದ್ದ."

"ನಾವು ಈ ಬಡಾವಣೆಗೆ ಬಂದಾಗ ಮನೆ ಕಟ್ಟುತ್ತಿರುವಾಗ ಗಾರೆ ಕೆಲಸದ ರಾಜಣ್ಣ ಅಲ್ವ ಆ ಗಿಡ ತಂದು ಅಲ್ಲಿ ನೆಟ್ಟದ್ದು. ಒಂದೆರಡು ವರ್ಷಕ್ಕೆ ಎಷ್ಟು ದೊಡ್ಡದಾಗಿಬಿಡ್ತು."ನಮ್ಮ ಮನೆ ಗುರುತು ಹೇಳಬೇಕೂಂದ್ರೆ ಕೆಂಪು ಹೂವಿನ ಈ ಮರ ಅಂದ್ರೆ ಎಲ್ಲರಿಗೂ ಸುಲಭವಾಗಿ ಪತ್ತೆ ಆಗ್ತಿತ್ತು."

ಆ ಮೇಲೆ ಎಷ್ಟೊಂದು ಗಿಡಗಳು ಮರಗಳು ಎಲ್ಲರ ಮನೆ ಮುಂದೆ ಬೆಳೆದ್ರೂ ಈ ಮರ ಮಾತ್ರ ಸೀತಾ, ಶಿವರಾಮಯ್ಯನವರ ಬದುಕಿನಲ್ಲಿ ಹಾಸುಹೊಕ್ಕಾಗಿ ಕುಟುಂಬದ ಸದಸ್ಯನೆನ್ನುವಷ್ಟು ಅದರ ಮೇಲೆ ಅವರಿಗೆ ಮೋಹ ಬೆಳೆದುಕೊಂಡಿತ್ತು.

ಶಿವರಾಮಯ್ಯನಿಗೆ ಸಿಟಿಯೊಳಗೆ ಉದ್ಯೋಗ, ಸ್ಕೂಟರ್, ಕಾರು ಇತ್ಯಾದಿಗಳ ವೈಭೋಗದಿಂದ ಹೊರತಾದ ಅವರ ಸರಳ ಜೀವನಕ್ಕೆ ಇದ್ದ ಏಕೈಕ ವಾಹನವೆಂದರೆ ಎರಡು ಚಕ್ರದ ರಥ, ರ್‍ಯಾಲಿ ಸೈಕಲ್. ಓಡಾಡಲು ಸರಿಯಾದ ರಸ್ತೆಗಳೇ ಇಲ್ಲದ ದಾರಿಗಳಲ್ಲಿ ಎಲ್ಲೂ ನಿಲ್ಲದೆ, ಪೆಟ್ರೋಲ್ ಬೇಡದೆ, ಪರಿಸರ ಸ್ನೇಹಿಯಾದ ಇಂಥ ಅನೇಕ ಸೈಕಲ್‌ಗಳಲ್ಲಿ ಬಂದಿಳಿಯುತ್ತಿದ್ದ ಸ್ನೇಹಿತರ ಒಂದು ದೊಡ್ಡ ಗುಂಪೇ ಅವರು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಯಲ್ಲಿತ್ತು. ಇದರಿಂದಾಗಿ ಅವರಿಗೆ ಎಂದೂ ಕೀಳರಿಮೆ ಬಾಧಿಸಲಿಲ್ಲ. ಬಾಡಿಗೆ ಮನೆಯ ವನವಾಸದ ಕಷ್ಟಗಳಿಗೆ ಇತಿಶ್ರೀ ಹಾಡಬೇಕೆಂದು ಕಷ್ಟಪಟ್ಟು ಕೂಡಿಟ್ಟ ಹಣವನ್ನೆಲ್ಲ ಒಂದು ಸ್ವಂತ ಗೂಡಿಗಾಗಿ ಅವರು ಖರ್ಚು ಮಾಡಿದ್ದರು.

"ಸೀತೂ... ಸಿಟಿಗೆ ಸ್ವಲ್ಪ ದೂರವೇ ಇದ್ರೂ ಸೈಟು ನಮ್ಮ ಬಜೆಟ್‌ಗೆ ಸಿಗೋಂತದ್ದು, ಒಂದು ಹತ್ತು ವರ್ಷನಾದ್ರೂ ಬೇಕು ಆ ಜಾಗ ಬಡಕಾಯಿಸಲು" ಎಂದು ಹೆಂಡತಿಗೆ ಸಮಾಧಾನ ಹೇಳುತ್ತಾ ಧೈರ್ಯಮಾಡಿ ಜಾಗ ಖರೀದಿಸಿದ್ದರು. ಅವರ ಊಹೆ ತಪ್ಪಾಗಿತ್ತು. ರೂಪಾಂತರಗಳು ಆಶ್ಚರ್ಯ ಹುಟ್ಟಿಸುವಷ್ಟು ವೇಗವಾಗಿ ಆಗುತ್ತಾ ಹೋಗುತ್ತವೆ ಎನ್ನಲು ಈ ಬಡಾವಣೆಯೇ ಸಾಕ್ಷಿಯಾಗಿತ್ತು. ನೀರಿಗಾಗಿ ತೋಡಿಸಿದ ಬಾವಿಯಿಂದ ಸಮೃದ್ಧಿಯಾಗಿ ಗಂಗೆ ಉಕ್ಕಿದಾಗ ಮನೆ ಕಟ್ಟಿ ಮುಗಿಸಿ ಗೃಹಪ್ರವೇಶದ ಹೊತ್ತಿಗೆ ಮನೆಯ ಅಂಗಳದಲ್ಲಿ ಅವರದೇ ಆದ ಪುಟ್ಟ ಕೈತೋಟವೂ ಸಿದ್ಧವಾಗತೊಡಗಿತ್ತು. ತಮ್ಮದೇ ಸ್ವಂತ ಮನೆ, ಮನೆಯ ಸುತ್ತಾ ಹೂವು, ತರಕಾರಿ, ಕೈತೋಟ, ಬಸ್ಸು, ಕಾರು, ಧೂಳು, ಗಲಾಟೆಗಳಿಂದ ದೂರವಾಗಿ ಶಾಂತ ವಾತಾವರಣದಲ್ಲಿ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳುವ ಅವರ ಆಸೆ ಕೊನೆಗೊಮ್ಮೆ ಕೈಗೂಡಿತ್ತು. ಮಕ್ಕಳನ್ನು ಇದ್ದುದರಲ್ಲೇ ಹತ್ತಿರದಲ್ಲಿದ್ದ ಸರ್ಕಾರಿ ಶಾಲೆಗೆ ಸೇರಿಸಿದ್ದಾಯಿತು.

ಸೀತಾಳಿಗೆ ಈಗ ಕೈ ತುಂಬಾ ಕೆಲಸ. ಮನೆಯನ್ನು ಅಚ್ಚುಕಟ್ಟು ಮಾಡುವುದು, ಅಂಗಳದಲ್ಲಿ ಮೈತುಂಬಿ ನಿಂತ ಹಸಿರು ಗಿಡಗಳಲ್ಲಿ ಅರಳಿದ ಹೂ, ಮೊಗ್ಗು, ಬಗೆಬಗೆ ತರಕಾರಿಗಳು ಅವಳ ಬಿಡುವನ್ನೆಲ್ಲಾ ಆವರಿಸಿಕೊಳ್ಳುವ ಆಪ್ತ ಸಂಗಾತಿಗಳು. ಒಳ್ಳೆ ಗಾಳಿ, ಬೆಳಕು, ನಿಶ್ಶಬ್ದ ವಾತಾವರಣ, ನಗರ ಜೀವನದ ಧಾವಂತದ ಬಿಸಿಯಿಂದ ದೂರವಾದ ಸಂತೃಪ್ತಿ ಆ ಕುಟುಂಬದ ಆರೋಗ್ಯ, ಆನಂದವನ್ನು ಹೆಚ್ಚಿಸಿತ್ತು. ಅನಿ, ಸುನಿ ಸರ್ಕಾರಿ ಶಾಲೆಯಲ್ಲೇ ಓದಿ ಬುದ್ಧಿವಂತರಾಗಿದ್ದು ಕೂಡ ಅವರ ಸಂತೋಷವನ್ನು ಹೆಚ್ಚಿಸಿತ್ತು. ಮನೆಯ ಎಡ ಕೊನೆಯಲ್ಲಿದ್ದ ರಸ್ತೆ ಬದಿಯಲ್ಲಿ ಇವರು ಹಾಕಿದ ಮರ ಈಗ ಇವರದಾಗಿರಲಿಲ್ಲ. ಆದರೇನು, ಅದನ್ನು ಪೋಷಿಸಿ ಬೆಳೆಸಿದ ತೃಪ್ತಿ, ಅಭಿಮಾನ, ಪ್ರೀತಿಯಂತೂ ಯಾರೂ ಕಸಿದುಕೊಳ್ಳಲು ಸಾಧ್ಯವಿರಲಿಲ್ಲ. ರಸ್ತೆ ಬದಿಯಲ್ಲಿದ್ದರೂ ದನಕರುಗಳ ಪಾಲಾಗದಂತೆ ಅದರ ರಕ್ಷಣೆಗೆ ಸುತ್ತ ಬೇಲಿ ಹಾಕಿದ್ದರಿಂದ ನೋಡನೋಡುತ್ತಿದ್ದಂತೆ ಅದು ಬೆಳೆಯುತ್ತಾ ಬೆಳೆಯುತ್ತಾ ಯಾರ ಕೈಗೂ, ಬಾಯಿಗೂ ನಿಲುಕದಷ್ಟು ಎತ್ತರವಾಗಿ ನಿಂತಾಗ ಶಿವರಾಯಯ್ಯನವರ ಮನೆಯವರಿಗೆಲ್ಲಾ ತಮ್ಮದೇ ಕುಟುಂಬದ ಸದಸ್ಯ ಪ್ರಬುದ್ಧನಾದಷ್ಟು ಸಂತೋಷವಾಗಿತ್ತು. ಹುಟ್ಟಾ ಮಲೆನಾಡಿನವರಾದ ಅವರಿಗೆ ಪ್ರಕೃತಿಯ ಒಡನಾಟ ಹೊಸದೇನಲ್ಲ. ಅವರು ಸೈಕಲ್ ತುಳಿಯುತ್ತಲೇ ಸ್ಕೂಟರಿಗೆ ಪ್ರಮೋಷನ್ ಪಡೆದುಕೊಂಡರೂ ಕಾರಿನಲ್ಲಿ ಓಡಾಡುವ ಶ್ರೀಮಂತಿಕೆಯ ಕನಸನ್ನು ಕಾಣುತ್ತಿರಲಿಲ್ಲ. ಮುಂದೊಂದು ದಿನ ಅನಿಲ ದೊಡ್ಡ ಹುದ್ದೆಯನ್ನು ಪಡೆದು ಹೊಸತೊಂದು ಕಾರನ್ನು ಕೊಂಡು ಮನೆ ಮುಂದೆ ನಿಲ್ಲಿಸತೊಡಗಿದಾಗ ಇದೇ ಮರದ ರೆಂಬೆ ಕೊಂಬೆಗಳ ತುಂಬಾ ಅರಳಿಕೊಂಡಿದ್ದ ಕೆಂಪು ಹೂಗಳು ಪುಷ್ಪವೃಷ್ಟಿಗೆರೆಯುವಂತೆ ಕಾರಿನ ಸುತ್ತಾ ದಿನಾ ಉದುರಿ ಬಿದ್ದಿರುತ್ತಿದ್ದವು.

"ಅಪ್ಪಾ ಕಾರನ್ನು ನಿಲ್ಲಿಸಲು ಗ್ಯಾರೇಜಿನ ಅಗತ್ಯ ಇದೆ ಅನಿಸುತ್ತಿದೆ, ಹೊರಗೆ ನಿಲ್ಲಿಸುವಷ್ಟು ಸುರಕ್ಷಿತವೂ ಅಲ್ಲ!" ಮಗ ಪೀಠಿಕೆ ಹಾಕಿ ಅಪ್ಪನ ಮನಸ್ಸನ್ನು ತಿಳಿಯಬಯಸಿದ್ದ.

"ಅದೇನೋ ಸರಿ ಅನಿ... ಕಾರು ನಿಲ್ಲಿಸುವಷ್ಟು ಜಾಗವೇನೂ ನಮ್ಮ ಕಾಂಪೌಂಡಿನಲ್ಲಿದೆ, ಗ್ಯಾರೇಜ್ ಕಟ್ಟಿದರೆ ಆ ಕಡೆ ಬೆಳೆಸಿರುವ ಗಿಡಗಳನ್ನೆಲ್ಲಾ ತೆಗೆಯಬೇಕು ಅಲ್ಲವೇನೋ" ಸೀತಮ್ಮನಿಗೆ ಗಿಡಗಳನ್ನು ಕತ್ತರಿಸಿ ಹಾಕುವ ಸಂಕಟ.

"ಹೌದಮ್ಮ, ಲಕ್ಷಾಂತರ ರೂಪಾಯಿ ಕಾರಿಗೆ ಕೊಟ್ಟಿದೆ, ಹೊರಗೆ ನಿಲ್ಲಿಸಿದರೆ ಈಗ ಗಾಳಿ ಮಳೆಗೆ ಒಂದೇ ಅಲ್ಲ, ರಾತ್ರಿ ಹೊತ್ತಿರಲಿ ಬೆಳಗ್ಗೆಯೇ ಕಾರಿನ ಪಾರ್ಟ್ ಬಿಚ್ಚಿಕೊಂಡು ಹೋಗುವ ಕಳ್ಳರು ಹೆಚ್ಚಾಗಿದ್ದಾರೆ!" ಅನಿಲನಿಗೆ ಕಾರಿನ ಮೇಲೆ ಮೋಹ ಅದಾಗಲೇ ಆವರಿಸಿಕೊಂಡುಬಿಟ್ಟಿತ್ತು.

ಮುಂದಿನ ದಿನಗಳಲ್ಲಿ ಗ್ಯಾರೇಜಿನ ಕೆಲಸ ಪ್ರಾರಂಭವಾಗುತ್ತಿದ್ದಂತೆ ಅಂಗಳದಲ್ಲಿ ನಗುನಗುತ್ತಿದ್ದ ಗಿಡಗಳೆಲ್ಲಾ ಕಲ್ಲು, ಮಣ್ಣು, ಧೂಳಿನ ಸ್ನಾನದಿಂದಾಗಿ ಸೊರಗತೊಡಗಿದವು. ಎತ್ತರದಲ್ಲಿದ್ದ ಕೆಂಪು ಹೂವಿನ ಮರ ಮಾತ್ರ ಯಾವುದೇ ಸಮಸ್ಯೆಯಿಲ್ಲದೆ ತನ್ನ ಪಾಡಿಗೆ ತಾನು ನಿಶ್ಚಿಂತೆಯಿಂದಿತ್ತು. ಅದಕ್ಕೆ ಮಳೆ ಬಂದಾಗಷ್ಟೇ ಸಂಪೂರ್ಣ ಜಳಕದ ಆನಂದ.

ಈಗ ಬಡಾವಣೆಯಲ್ಲಿ ಎಲ್ಲಿಯೂ ಖಾಲಿ ಜಾಗ ಕಾಣಿಸುವುದಿಲ್ಲ. ಒಂದಕ್ಕಿಂತ ಒಂದು ಚೆಂದದ ಮನೆಗಳು ಈ ಹತ್ತು ವರ್ಷಗಳಲ್ಲಿ ನಿರ್ಮಾಣಗೊಂಡಿದ್ದವು. ಶಿವರಾಮಯ್ಯನ ಮನೆ ಈಗ ಪ್ರತಿಷ್ಠಿತ ಬಡಾವಣೆಗಳ ಹೆಸರಿನ ಪಟ್ಟಿಯಲ್ಲಿತ್ತು. ಸೈಟಿನ ಬೆಲೆಯಂತೂ ಹೇಳುವಂತಿಲ್ಲ.

"ನೀನು ತುಂಬಾ ಲಕ್ಕಿ ಕಣಯ್ಯ, ಆಗ ತೆಗೆದುಕೊಂಡು ಮನೆ ಕಟ್ಟಿಕೊಂಡು ಒಳ್ಳೇದು ಮಾಡಿದೆ. ಈಗ ಒಂದಿಂಚು ಜಾಗ ಅಲ್ಲಿ ಸಿಗುತ್ತಿಲ್ಲ!" ಎಂದು ಅವರ ಸ್ನೇಹಿತರು ಹೇಳುವಾಗಲೆಲ್ಲಾ ಶಿವರಾಮಯ್ಯನ ಮನಸ್ಸು ಉಬ್ಬಿಹೋಗುತ್ತಿತ್ತು. ಆ ಕಾಲಕ್ಕೆ 60/40 ಅಳತೆಯ ಆ ಸೈಟಿಗೆ ದುಡ್ಡು ಹೊಂದಿಸಲೇ ಅವರ ಕೈಯಲ್ಲಾಗಿರಲಿಲ್ಲ; ಊರಲ್ಲಿದ್ದ ಜಮೀನು ಮಾರಿ ಅವರಪ್ಪ ಇವರ ಪಾಲು ಕೊಟ್ಟಿದ್ದರಿಂದ ಬೆಂಗಳೂರು ನಗರದಲ್ಲೊಂದು ಮನೆ ಮಾಡಿಕೊಳ್ಳುವ ಭಾಗ್ಯ ಅವರದಾಗಿತ್ತು. ಈಗಂತೂ ಕನ್ನಡ ಚಿತ್ರರಂಗದ ನಾಲ್ಕೈದು ನಟ, ನಟಿಯರ ಭವ್ಯ ಬಂಗಲೆಗಳು ಇದೇ ಬಡಾವಣೆಯಲ್ಲಿ ಬಂದ ಮೇಲಂತೂ ಅಲ್ಲೀಗ ಬಣ್ಣದ ಲೋಕದ ಒಂದು ಝಲಕ್ ಜನರಿಗೆ ಪ್ರತಿನಿತ್ಯ ಕಾಣಲು ಸಿಗುತ್ತಿತ್ತು. ರಸ್ತೆಗಳಂತೂ ಗುಂಡಿ ಬಿದ್ದದ್ದೇ ಇಲ್ಲವೆನ್ನುವಷ್ಟು, ಐಶಾರಾಮಿ ಕಾರುಗಳು ಜಾರಿ ಹೋಗುವಷ್ಟು ನುಣುಪಾಗಿದ್ದವು. ಹತ್ತಿರದಲ್ಲೇ ಇದ್ದ ರೆಸಿಡೆನ್ಸಿಯಲ್ ಶಾಲೆ ಯಿಂದಾಗಿ ಅಲ್ಲಿ ಓದುತ್ತಿದ್ದ ಗಣ್ಯಾತಿಗಣ್ಯರ ಮಕ್ಕಳು, ಮೊಮ್ಮಕ್ಕಳೆಲ್ಲರ ಆರೋಗ್ಯದ ದೃಷ್ಟಿಯಿಂದ ಆ ಪರಿಸರದ ನೀರು, ಗಾಳಿ ಕೂಡ ಕಲುಷಿತವಾಗದಷ್ಟು ಎಚ್ಚರಿಕೆ ಆಡಳಿತ ಯಂತ್ರಕ್ಕೆ. ಆಗೆಲ್ಲ ಅವರಿಗೆ ಮುಂಬಯಿಯ ನೆನಪಾಗುತ್ತಿತ್ತು. ಕೆಲಸದ ನಿಮಿತ್ತ ಮುಂಬಯಿಗೆ ಅವರು ಒಂದೆರಡು ಸಾರಿ ಹೋಗಿ ಬಂದಿದ್ದರು. ವಿಮಾನ ನಿಲ್ದಾಣ ಬಿಟ್ಟು ಹೊರ ಬಂದರೆ ತಲೆ ಎತ್ತಿ ನೋಡಿದಷ್ಟು ಎತ್ತರಕ್ಕೆ ಸಾಲು ಸಾಲು ಗೋಪುರಗಳಂತೆ ಆಕಾಶದೆತ್ತರ ನಿಂತ ಕಟ್ಟಡಗಳು, ನೆಲದಗಲ ಮುಗಿಲು ಮುಟ್ಟಿದರೂ ಅದೇ ನೆಲವನ್ನು ಬಳಸಿ ಹರಡಿಕೊಂಡ ಕೊಳೆಗೇರಿಗಳ (ಸ್ಲಮ್) ಸಾಲುಗಳಂತೂ ಕೆಸರಿನಲ್ಲಿ ಕಮಲ ಎನ್ನುವ ಮಾತಿಗೆ ಹೋಲಿಕೆಯಾಗುತ್ತಿತ್ತು. ಉಪ್ಪರಿಗೆಯ ಮೇಲೆತ್ತರದಲ್ಲಿ ನೆಲೆ ನಿಂತವರು ಕೆಳಗಿನ ಶೀಟಿನ ಮನೆಯೊಳಗಿನ ದಾರಿದ್ರ್ಯದ ಚಿತ್ರಣ ಕಂಡರೂ ಕಾಣಿಸದಂತಹ ಶ್ರೀಮಂತಿಕೆಯ ತೆರೆ ಎಳೆದುಕೊಂಡಿದ್ದರು. ಆ ಕಾಂಕ್ರೀಟ್ ಕಾಡಿನೊಳಗೆ ಹಸಿರಿನ ಹೆಸರನ್ನು ಹುಡುಕುವ ಭ್ರಮೆಗೆ ಒಳಗಾಗದೆ ಶಿವರಾಮಯ್ಯ ತಾವೇ ಭಾಗ್ಯವಂತರು ಎಂದುಕೊಂಡಿದ್ದು ಅದೆಷ್ಟು ಸಾರಿಯೋ.

ವಿಮಾನ ನಿಲ್ದಾಣಕ್ಕೆ ಸುಗಮ ಸಂಚಾರ ಕಲ್ಪಿಸಲು ಮೇಲ್ಸೇತುವೆಗಳ ನಿರ್ಮಾಣ ಅಗತ್ಯ, ಅನಿವಾರ್ಯ ಎಂದು ತೀರ್ಮಾನಿಸಿದ ಸರ್ಕಾರಕ್ಕೆ ತಲೆ ದಂಡ ತೆತ್ತ ಸಾವಿರಾರು ಮರಗಳ ಸಾಲಿನಲ್ಲಿ ಇವರ ಬಡಾವಣೆಯ ಹತ್ತಾರು ಮರಗಳು ಇದ್ದವು. ರಸ್ತೆ ಅಗಲೀಕರಣದ ಕಾರಣದಿಂದ ಶಿವರಾಮಯ್ಯನವರು ಸಾಕಿ ಬೆಳಸಿದ ಕೆಂಪು ಹೂವಿನ ದೊಡ್ಡಮರವೂ ಕೂಡ ಒಂದು ದಿನ ಬಲಿಯಾಗಲೇಬೇಕಾಯಿತು. ದೈತ್ಯಾಕಾರವಾಗಿ ಬೆಳೆದು ನಿಂತಿದ್ದ ಆ ಮರ ಧರೆಗುರುಳಿದ ದೃಶ್ಯವನ್ನು ಅವರು ನೋಡದಿದ್ದುದೇ ಒಳ್ಳೆಯದಾಯಿತು.

ತೀರ್ಥಯಾತ್ರೆ ಮುಗಿಸಿ ಬಂದ ದಂಪತಿಗಳ ಕಣ್ಣ ಮುಂದೆ ಮರದ ಸಾವಿನ ನಂತರದ ದೃಶ್ಯವೇ ಮನ ಮಿಡಿಯುವಂತಿತ್ತು. ಮರದ ಸಾವು, ಅದರ ಶವಯಾತ್ರೆಯ ನಂತರದ ದಿನಗಳು ಅವರ ಹೃದಯಕ್ಕೆ ಅತೀವ

ನೋವನ್ನು ತಂದಿತ್ತು. ಮನೆಯ ಸದಸ್ಯರೊಬ್ಬರು ತಮ್ಮನ್ನು ಬಿಟ್ಟು ಅಗಲಿದಂತೆ ಅವರಿಬ್ಬರ ಮನಸ್ಸಿನಲ್ಲಿ ಶೋಕ ಸಾಗರ ಮಡುಗಟ್ಟಿತ್ತು.

ಸಾವು ಮನುಷ್ಯರಿಗಾಗಲೀ, ಮರಕ್ಕಾಗಲೀ ಅದರ ನೋವಿನ ತೀವ್ರತೆ ಒಂದೇ ಥರದ್ದು ಎಂದು ಎಲ್ಲರಿಗೂ ಅರ್ಥವಾಗದಿರಬಹುದು. ಪ್ರಕೃತಿಯನ್ನು ಪ್ರೀತಿಸುವ ಹಸಿರನ್ನು ಆರಾಧಿಸುವ ಹೃದಯವಂತರಿಗೆ ಮಾತ್ರ ಅದರ ಅನುಭವ ಆಗುವುದು. ಅನೇಕ ವರ್ಷಗಳ ಕಾಲ ತನ್ನನ್ನು ಬಿಸಿಲಿಗೆ ಒಡ್ಡಿ ತನ್ನ ಆಶ್ರಯಕ್ಕೆ ಬಂದವರಿಗೆ ನೆರಳನ್ನು ನೀಡುತ್ತಿದ್ದ, ಪಕ್ಷಿಗಳಿಗೆ ತಂಗುದಾಣದಂತಿದ್ದ ಆ ಕೆಂಪು ಹೂವಿನ ಮರ ಸತ್ತ ನಂತರ ಸ್ವರ್ಗ ಸೇರದಿದ್ದರೂ ಕಟ್ಟಿಗೆ ಅಂಗಡಿಯವನ ಸೌದೆ ತುಂಡುಗಳಾಗಿ ಮುಂದೊಂದು ದಿನ ಯಾರದೋ ಶವದ ಸಂಸ್ಕಾರಕ್ಕೆ ಸ್ಮಶಾನ ಯಾತ್ರೆ ಮಾಡಿರಲೂಬಹುದು ಅಥವಾ ಉರುವಲಿಗಾಗಿ ಯಾರದೋ ಮನೆಯ ಅಟ್ಟ ಸೇರಿರಲೂ ಸಾಕು. ಮದುವೆಗೋ, ಮಸಣಕೋ ಮರದ ಸಾವಿನ ನಂತರದ ನಿರ್ಧಾರ ಮನುಷ್ಯನಿಗೇ ಬಿಟ್ಟದ್ದು!.

***

ದಸರಾ ಗೊಂಬೆಗಳ ಪ್ರದರ್ಶನ



ಚಿತ್ರಕೃಪೆ : ಡೆಕ್ಕನ್ ಹೆರಾಲ್ಡ್ (ಅಂತರ್ಜಾಲ)

***

ಒಳಗೂ ಹೊರಗೂ

– ಶಾಂತಿ ವಾಸು

ಗೇಟು ತೆರೆದ ಶಬ್ದಕ್ಕೆ ಸೋಫಾ ಮೇಲೆ ಕುಳಿತು ಅಳುತ್ತಿದ್ದ ಸುಕನ್ಯಳಿಗೆ ತಾನು ಮುಂಬಾಗಿಲನ್ನು ಹಾಕಿಯೇ ಇಲ್ಲವೆಂದು ನೆನಪಾಗಿ ಎದ್ದು ದಡದಡನೆ ಬಾಗಿಲಿನ ಬಳಿಗೆ ಧಾವಿಸಿದಳು. ಸಮಯ ಮಧ್ಯಾಹ್ನ ಒಂದು ಗಂಟೆ. ಸಾಮಾನ್ಯವಾಗಿ ನಡುಬೇಸಿಗೆಯ ಈ ಸಮಯದಲ್ಲಿ ಆ ರಸ್ತೆ ಪೂರ್ತಿ ಮರದ ನೆರಳು ಬಿಟ್ಟರೆ ನಿಶ್ಯಬ್ದದ ಸಾಮ್ರಾಜ್ಯ ವಾಗಿರುತ್ತಿತ್ತು. ಹಾಗೂ ಶಬ್ದವೇನಾದರೂ ಆಗುತ್ತದೆಯೆಂದರೆ ಅದು ಕೇವಲ ಅಳಿಲುಗಳ ಚುಪ್ ಚುಪ್ ಹಾಗೂ ಎಲ್ಲೋ ಒಂದೊಂದು ವಾಹನ ದೂರದಲ್ಲಿ ಓಡಾಡುವ ಶಬ್ದ ಮಾತ್ರ ಅಷ್ಟೇ. ಗಂಡ ಅನಂತರಾಮ ಕೂಡ ಹತ್ತು ಗಂಟೆಗೆ ಕಚೇರಿಗೆ ಹೊರಡುವಾಗ "ಈ ನಡುವೆ ಎಲ್ಲ ಕಡೆ ಕಳ್ಳರು ಹೆಚ್ಚಾಗಿದ್ದಾರೆ. ಬಾಗಿಲು ಹಾಕ್ಕೊಳ್ಳೋದು ಮರೀಬೇಡ" ಅಂತ ಎರಡೆರಡು ಸಲ ಎಚ್ಚರಿಸಿ ಹೋಗಿದ್ದ. ಆದರೆ ಅವನು ಹೇಳಿದಾಗ ಗಮನ ಕೊಡದೆ, ಅಳುತ್ತಲೇ ಕುಳಿತಿದ್ದು ಈಗ ಗಾಬರಿಯಿಂದ ಓಡುತ್ತಿದ್ದಾಳೆ ನೋಡಿ.

ಮದುವೆಯಾಗಿ ಮೂರು ವರ್ಷವಾಗಿತ್ತು ಅಷ್ಟೇ. ಮಕ್ಕಳಿಲ್ಲದ ಈ ದಂಪತಿಗಳು ಈ ಬಡಾವಣೆಯಲ್ಲಿ ಕಟ್ಟಿದ್ದ ಮನೆಯನ್ನೇ ಕೊಂಡು, ಗೃಹಪ್ರವೇಶ ಮಾಡಿ, .ವಾಸಕ್ಕೆ ಬಂದಿನ್ನೂ ಎರಡು ತಿಂಗಳಾಗಿದೆ ಅಷ್ಟೇ. ಇವಳಿಗೆ ಇನ್ನೂ ಅಕ್ಕಪಕ್ಕದ ಜನರ ಪರಿಚಯ ಆಗಿರಲಿಲ್ಲ. ಪರಿಚಯದವರೇ ಇಲ್ಲದ ಮೇಲೆ ಇವಳನ್ನು ಹುಡುಕಿ ಬರುವ ಆತ್ಮೀಯರೂ ಯಾರೂ ಇರಲಿಲ್ಲ ಎಂದರ್ಥ. ಹೋಗಲಿ ನೆಂಟರು ಯಾರಾದರೂ ಬಂದಿರಬಹುದೇ? ಎನ್ನುವುದಾದರೆ ಅದೂ ಇಲ್ಲ ಬಿಡಿ. ಗೃಹಪ್ರವೇಶಕ್ಕೆ ಎಲ್ಲರೂ ಬಂದು ಹೋಗಿದ್ದಾರೆ. ಹಾಗೂ ಬರುವವರಿದ್ದರೆ ಫೋನ್ ಮಾಡಿಯೇ ಬರುತ್ತಾರೆ ತಾನೇ?

ಹಾಗಾದರೆ ಯಾರಪ್ಪ ಹೀಗೆ ಗೇಟನ್ನು ತೆಗೆದು ಬಂದವರು? ಗಂಡ ಹೇಳಿದ ಹಾಗೆ ಕಳ್ಳನೇ ಇರಬೇಕು ಎಂಬ ಗಾಬರಿಯಲ್ಲಿ ಇಷ್ಟು ಹೊತ್ತು ಅಳುತ್ತಿದ್ದುದನ್ನು ಹಾಗೂ ಅಳುವ ಕಾರಣವನ್ನು ಮರೆತು ಬಾಗಿಲು ಹಾಕಿಕೊಳ್ಳಲು ಓಡಿದಳು ಸುಕನ್ಯ. ತನಗಾಗಿ ಉಳಿದಿದ್ದ ಇಷ್ಟು ಕಡಿಮೆ ಸಮಯದಲ್ಲಿ, ಬಂದವನು ಕಳ್ಳನೋ ಕೊಲೆಗಾರರನೋ ಆಗಿದ್ದರೂ ಅವನಿಂದ ತಪ್ಪಿಸಿಕೊಳ್ಳಲು ಇರುವ ಉಪಾಯವನ್ನು ಮಾತ್ರ ಮನಸ್ಸು ಹುಡುಕುತ್ತಿತ್ತು.

ಅದ್ಯಾರೋ ಧಡೂತಿ ಆಕಾರದವನೊಬ್ಬ ತಾನೇ ತೆರೆದ ಗೇಟನ್ನು ಮುಚ್ಚದೆ ಬಾಗಿಲ ಬಳಿಗೆ ಮೆಲ್ಲನೆ ಬರುತ್ತಿರುವುದು ಕಾಣಿಸಿತು. ಅವನು ಬಾಗಿಲ ಬಳಿ ಬರುವುದಕ್ಕೂ, ಸುಕನ್ಯಾ ಒಳಗಿನಿಂದ ಬಾಗಿಲ ಬಳಿ ಬರುವುದಕ್ಕೂ ಸರಿಯಾಯಿತು. ಸಾಮಾನ್ಯವಾಗಿಯೇ ತಲೆಯನ್ನು ಹೊರಗೆ ಹಾಕದ ಇಲ್ಲಿಯ ಜನ, ಬಿಸಿಲಿನ ಬೇಗೆಗೆ ಹೊರಬರುವರೇ? ಕೂಗಿಕೊಂಡರೂ ಬರಬಹುದೇ? ಇಲ್ಲವೇ ಇಲ್ಲ ಕಣ್ರೀ. ಬರುವುದಿಲ್ಲ. ಯಾಕೆಂದರೆ ಅದು ಒಂದು ಪ್ರತಿಷ್ಠಿತ ಜನರು ವಾಸಿಸುವ ಪ್ರತಿಷ್ಠಿತ ಬಡಾವಣೆ. ಈಗ ಸುಕನ್ಯಳ ಹೃದಯ ಬಾಯಿಗೆ ಬಂದಿತ್ತು. ಕಣ್ಣು ಅಗಲಿಸ ಬೇಕೆಂದರೂ ಅತ್ತೂ ಅತ್ತೂ ಅದು ಊದಿಕೊಂಡು ಪುಟ್ಟಪುಟ್ಟದಾಗಿತ್ತು.

ಆದದ್ದಾಗಲಿ ಎಂದು "ಯಾರು? ಯಾರು ಬೇಕು ಸಾರ್?" ಎಂದಳು. ಅವನು ಆಟೋ ಓಡಿಸುವವನು ಎನ್ನುವಂತೆ ಉದ್ದ ತೋಳಿನ ನೀಲಿ ಶರ್ಟು ಅದರ ಮೇಲೆ ಗ್ರೀಸ್ ಕಲೆಯಾಗಿದ್ದ ಅರ್ಧ ತೋಳಿನ ಖಾಕಿ ಶರ್ಟು ಹಾಕಿಕೊಂಡು ಎದೆಯ ಮೇಲ್ಭಾಗದ ಎಡಗಡೆ ಒಂದು ಬ್ಯಾಡ್ಜ್ ಹಾಕಿದ್ದಾನೆ. ಬೇರೆ ಸಮಯದಲ್ಲಿಯಾದರೆ ಅವನ ಈ ತರಹದ ಕೊಳಕು ಅವತಾರ ನೋಡಿ "ಸಾರ್" ಎಂದು ಬೇರೆ ಸಂಬೋಧಿಸುತ್ತಿದ್ದಳೇ ಜಂಬಗಾತಿ ಸುಕನ್ಯಾ? ಸಾಧ್ಯವೇ ಇಲ್ಲ ಬಿಡಿ. ಆದರೆ ಅವನ ಕಣ್ಣಿಗೆ ಅವಳು "ಅಯ್ಯೋ ಪಾಪದವಳು" ಎನ್ನುವಂತೆ ಕಾಣಿಸಿಕೊಳ್ಳುವ ಉಪಾಯ ಮಾಡಿದ್ದಳು. ಅವನು ಮೊದಲ ಬಾರಿಗೆ ಕರ್ಕಶ ಧ್ವನಿಯಲ್ಲಿ "ನಾಯಿ ಇದ್ಯಾ ಮೇಡಂ?" ಕೇಳಿದ.

ನಾಯಿ ಇದ್ದರೆ ಹುಷಾರಾಗಿರಬಹುದು ಎನ್ನುವ ಉದ್ದೇಶದಿಂದ ಕೇಳುತ್ತಿದ್ದಾನೆ ಅನ್ನಿಸಿತು. ಜೊತೆಗೆ ಈಗ ಅವನು ಖಂಡಿತ ಸರ ಕೀಳಲು ತನ್ನ ಕುತ್ತಿಗೆಗೆ ಕೈ ಹಾಕೇಹಾಕ್ತಾನೆ ಎಂದೆನಿಸಿ ಮನೆಯಿಂದ ಹೊರಗೆ ಬಂದುಬಿಟ್ಟಳು. ಬಂದದ್ದೇ ಅಲ್ಲ. "ಒಳಗಿದೆ" ಅಂತ ಹೇಳ್ತಾನೇ ಗೇಟಿನ ಹತ್ರ ಬಂದುಬಿಟ್ಟಳು. ಅವನು ಮನೆಯ ಹೊಸ್ತಿಲಲ್ಲಿದ್ದ. ಇವಳು ಗೇಟಿನ ಬಳಿ ಇದ್ದಾಳೆ. ಅವನು ಒಳಗೆ ಹೋದರೆ ಹೊರಗಿನಿಂದ "ಕಳ್ಳ ಕಳ್ಳ" ಎಂದು ಕೂಗಿಕೊಳ್ಳಬಹುದು. ಸದ್ಯಕ್ಕೆ ಆ ದಾಂಡಿಗನ ಕೈಯ್ಯಿಂದ ತಾನು ತಪ್ಪಿಸಿಕೊಂಡರೆ ಸಾಕು ಎನ್ನುವ ಉಪಾಯ ಅವಳದ್ದು.

ಅವಳನ್ನು ಗೇಟಿನ ಬಳಿ ನೋಡಿ ನಗುತ್ತಾ ಅವ್ನು "ಮೇಡಂ, ನಿಮ್ಮ ನಾಯಿ ಸಿಕ್ತಾ?" ಕೇಳಿದ. ನಮ್ಮ ನಾಯಿ ತಪ್ಪಿಸಿಕೊಂಡದ್ದು ಇವನಿಗೆ ಹೇಗೆ ತಿಳಿಯಿತು? ಅವಳಿಗೀಗ ಆಶ್ಚರ್ಯ. ಅವಳ ಮನೆಗೆ ಅವಳೇ ಅಪರಿಚಿತಳು ಎನ್ನುವಂತೆ ಗೇಟಿನಿಂದ ಹೊರಗೆ ನಿಂತಿದ್ದವಳು ಈಗ "ನಾಯಿ ತಪ್ಪಿಸಿಕೊಂಡಿದ್ದು ನಿಮಗೆ ಹೇಗೆ ಗೊತ್ತು? ಯಾರು ಹೇಳಿದರು?" ಅಂತ ಕೇಳಿದಳು.

ಅವನು "ನೀವು, ನಿಮ್ಮ ನಾಯಿ ಫೋಟೋ ಹಿಡ್ಕೊಂಡು, ಮಧ್ಯಾಹ್ನ ಮೂರು ಗಂಟೆಯಿಂದ ಏಳು ಗಂಟೆ ತನಕ ಸಿಕ್ಕಸಿಕ್ಕವರನ್ನು ಕೇಳ್ಕೊಂಡು ಓಡಾಡಿದ್ದು ನನ್ನ ಆಟೋನಲ್ಲೇ ಅಲ್ವಾ? ಮರ್ತೋದ್ರಾ?" ನಗುಮುಖ ಮಾಡಿ ಕೇಳಿದ ಅವನ ಮಾತಿಗೆ ಒಂಚೂರು ನಿರಾಳವಾದಳು ಸುಕನ್ಯಾ. ಅವಳಿಗೆ ಅವನ ಚಹರೆ ನೆನಪಾಗುತ್ತಿಲ್ಲ. ಅಷ್ಟು ಹೊತ್ತು ಅಳುವುದನ್ನು ಮರೆತಿದ್ದವಳು ಮತ್ತೆ ಕಾಂಪೌಂಡಿನೊಳಗೆ ಎರಡು ಹೆಜ್ಜೆ ನಡೆದು ಬಂದು "ಇಲ್ಲ ಅದು ಯಾವುದೋ ಗಾಡಿಗೆ ಸಿಕ್ಕು ಸತ್ತು ಹೋಗಿತ್ತು. ಅದನ್ನ ತಂದು ಈ ತೆಂಗಿನ ಮರದ ಕೆಳಗೆ ಹೂತಿದ್ದೇವೆ. ನಂಗೆ ಅದನ್ನ ಬಿಟ್ಟಿರೋಕ್ಕೆ ಆಗ್ತಾನೇ ಇಲ್ಲ" ಎಂದು ಅಳುತ್ತಾ ಬಲಗೈಲಿ ಕಣ್ಣೊರೆಸಿಕೊಂಡು ಎಡಗಡೆಗೆ ಕೈ ತೋರಿದಳು. ತೆಂಗಿನ ಮರದ ಕಡೆ ನೋಡಿ "ಛೇ ಛೇ, ಅಯ್ಯೋ ಪಾಪ. ಹೌದಾ? ಸತ್ತೇ ಹೋಯ್ತಾ? ಹೀಗಾಗಬಾರದಿತ್ತು ಮೇಡಂ. ಏನೋ ಆಗಿದ್ದು ಆಗೋಯ್ತು. ಸಮಾಧಾನ ಮಾಡ್ಕೊಳ್ಳಿ" ಎನ್ನುತ್ತಾ ಹೊರಗೆ ಹೋಗಲು ಗೇಟಿನ ಕಡೆಗೆ ಬಂದ. ಗೇಟಿನ ಬಳಿ ನಿಂತಿದ್ದವಳು ಅವನನ್ನು ದಾಟಿ ಒಳಗೆ ಬರುತ್ತಾ "ಅವತ್ತು ನೀವು ಕೊಡಿಸಿದ ಬಿಸ್ಕೆಟ್ ಮತ್ತು ನೀರಿನ ಹಣ ಎಷ್ಟಾಯ್ತು?" ಕೇಳಿದಳು.

ಉತ್ತರವಾಗಿ ಅವನು "ಮೇಡಂ, ಮೊನ್ನೆ ನೀವು ತುಂಬಾ ಅಳ್ತಿದ್ರಿ. ಹೇಗೂ ನಂಗೆ ಈ ಕಡೆನೇ ಸವಾರಿ ಇತ್ತು. ಅದಕ್ಕೇ ನಾಯಿ ಸಿಕ್ತಾ ಅಂತ ವಿಚಾರ್ಸೋಕೆ ಬಂದೆ ಅಷ್ಟೇ. ನಿಮ್ಮನ್ನ ಈ ಮನೆ ಹತ್ರನೇ ಬಿಟ್ಟು ಹೋಗಿದ್ರಿಂದ ಅಡ್ರೆಸ್ಸೂ ಗೊತ್ತಿತ್ತು. ಆದ್ರೆ ನೀವು ಮಿಸ್ಟೇಕ್ ಮಾಡ್ಕೊಂಡಿದ್ದೀರಿ ನೋಡಿ. ಆಟೋ ಚಾರ್ಜ್ ಅವತ್ತೇ ಕೊಟ್ಟಿದ್ದೀರ. ಅಷ್ಟು ಸಾಕು. ಆಟೋನಲ್ಲಿ ಗಿರಾಕಿ ಇದೆ. ನಾನು ಹೋಗ್ತೀನಿ" ಎನ್ನುತ್ತಾ ಗೇಟು ದಾಟಿ ಹಿಂತಿರುಗಿ ನೋಡದೆ ಹೊರಟೇ ಹೋದ.

ಯಾರನ್ನೂ, ಯಾವುದನ್ನೂ ಗಮನಿಸದೇ ಅಳುವುದರಲ್ಲಿ ಯಾವಾಗಲೂ ತನಗಿರುವ ತನ್ಮಯತೆಯನ್ನು ನೆನೆದು ಮೊದಲಸಲ ಸಂಕೋಚವಾಯಿತು ಅವಳಿಗೆ. "ಛೇ ಪಾಪ. ದುಃಖ ವಿಚಾರಿಸಲು ಬಂದವರನ್ನು ಅನಾವಶ್ಯಕವಾಗಿ ಅನುಮಾನಪಟ್ಟೆನಲ್ಲಾ? ಬಾಗಿಲು ಮುಚ್ಚಿದ್ದಿದ್ದರೆ ಇಷ್ಟು ಮುಜುಗರವಾಗುವುದಾದರೂ ತಪ್ಪುತ್ತಿತ್ತು. ಬಾಗಿಲು ಮುಚ್ಚಿದ್ದಿದ್ದರೆ ಕಿಟಕಿಯಲ್ಲಿಯಾದರೂ ನೆಮ್ಮದಿಯಾಗಿ ಮಾತಾಡಿಸಬಹುದಿತ್ತು. ಅದು ಬಿಟ್ಟು ನನ್ನ ಮನೆಯಲ್ಲಿ ನಾನೇ ಇಲ್ಲದಂತಾಗಿ ಬಿಡ್ತು" ಎಂದುಕೊಂಡು ಮನೆ ಒಳಗೆ ಬಂದು ಭದ್ರವಾಗಿ ಬಾಗಿಲು ಹಾಕಿಕೊಂಡಳು.

***

ಕೀಲಿಕೈ ನೀಡದ ಸಾಂತ್ವನ

– ಜಿ.ವಿ. ನಿರ್ಮಲ

ಸೆಪ್ಟಂಬರ್ ತಿಂಗಳು, 2003ನೇ ವರ್ಷ, 10ನೆಯ ದಿನಾಂಕವಿರಬಹುದು. ಯಾಹೂ ಸಾಫ್ಟ್‌ವೇರ್ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದ ನನ್ನ ಮಗ ಆನಂದ್ ಆ ದಿನ ಬೆಳಬೆಳಗ್ಗೆ 'ಅಮ್ಮ, ನನಗೆ ಕಂಪನಿಯ ಕಡೆಯಿಂದ ಒಂದು ಅವಾರ್ಡ್ ಸಿಕ್ಕಿದೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲು ಅಕ್ಟೋಬರ್ ಮೊದಲ ವಾರದಲ್ಲಿ ಅಮೆರಿಕಕ್ಕೆ ಹೋಗಬೇಕು; ಜೊತೆಗೆ ಒಬ್ಬರನ್ನು ಕರೆದುಕೊಂಡು ಹೋಗಲು ಅವಕಾಶವಿದೆ' ಎಂದು ಬಹು ಸಂತಸದ ಸುದ್ದಿ ಹೇಳಿದ. ಹತ್ತೊಂಬತ್ತು ವರ್ಷಗಳ ಹಿಂದೆ ವಿದೇಶಕ್ಕೆ ವಿಮಾನದಲ್ಲಿ ಪಯಣಿಸುವುದನ್ನು ನಾನು ಕನಸಿನಲ್ಲಿಯೂ ಕಾಣದ ಕಾಲವೆಂದೇ ಹೇಳಬಹುದು. ಇಂದು ನಂಬಲಾಗದ ಸತ್ಯವೂ ಹೌದು. ಇದೀಗ ನಾನು ಎಣಿಸಲಾರದಷ್ಟು ಬಾರಿ ವಿಮಾನದಲ್ಲಿ ದೇಶ–ವಿದೇಶಗಳಿಗೆ ಪಯಣಿಸಿದ್ದೇನೆ. ಅಂದು ನಮ್ಮಿಬ್ಬರಿಗೂ ಪಾಸ್‌ಪೋರ್ಟ್ ಕೂಡ ಇರಲಿಲ್ಲ. ಕೇವಲ ಇಪ್ಪತ್ತು ದಿನಗಳಲ್ಲಿ ಸಾಕಷ್ಟು ಗಡಿಬಿಡಿಯಿಂದ, ಸಂಸ್ಥೆಯವರ ಸಹಕಾರದಿಂದ, ಇಬ್ಬರೂ ಪಾಸ್‌ಪೋರ್ಟ್, ವೀಸಾ ಪಡೆದುಕೊಂಡು ವಿಮಾನ ಹತ್ತೇಬಿಟ್ಟೆವು. ವೀಸಾ ಸಹಿತ ಯಾಹೂ ಸಂಸ್ಥೆಯವರದ್ದೇ ಖರ್ಚು. ಈಗಿನ ಸಂದರ್ಭದಲ್ಲಿ ವೀಸಾ ಸಂದರ್ಶನ ಪಡೆದುಕೊಳ್ಳುವುದೂ ಅಸಾಧ್ಯ. ನನ್ನ ಮೊತ್ತಮೊದಲ ವಿಮಾನ ಪಯಣ. 'ಬ್ಯುಸಿನೆಸ್ ಕ್ಲಾಸ್'ನಲ್ಲಿ, ಯಾಹೂ ಸಂಸ್ಥೆಯ ಆತಿಥ್ಯದಲ್ಲಿ!

ಅವಾರ್ಡ್ ಸಮಾರಂಭದ ನಂತರ ಆನಂದ್ ಒಂದು ತಿಂಗಳು ಅಮೆರಿಕ ಆಫೀಸಿನಲ್ಲಿಯೇ ಕೆಲಸ ಮಾಡುವುದಾಗಿಯೂ, ನಾನು ಅಮೆರಿಕದಲ್ಲಿದ್ದ ನಮ್ಮ ಆಪ್ತರ ಮನೆಗಳಿಗೆ ಭೇಟಿ ನೀಡುವುದಾಗಿಯೂ ನಿಶ್ಚಯಿಸಿ ಅದಕ್ಕೂ 'VUSA- visit USA' ಟಿಕೆಟ್ ಬೆಂಗಳೂರಿನಲ್ಲಿಯೇ ಪಡೆದುಕೊಂಡೆ. ಇದು ನಮ್ಮ ಪರಿಚಿತ ಏಜೆಂಟ್ ನೀಡಿದ ಸೂಕ್ತ ಸಲಹೆ.

ಅವಾರ್ಡ್ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಕ್ಯಾಲಿಫೋರ್ನಿಯಾದ ಒಂದು ದೊಡ್ಡ ಹೋಟೆಲ್‌ನಲ್ಲಿ ಅಕ್ಟೋಬರ್ 2ರಂದು ಜರುಗಿತು. ನನಗೆ ಈಗಲೂ ಎಲ್ಲವೂ ಕನಸಿನಲ್ಲಿ ನೋಡಿದಂತೆಯೇ ಭಾಸವಾಗುತ್ತದೆ.

ಒಂದೆರಡು ದಿನಗಳ ನಂತರ ನಾನು ನನ್ನ ಅಮೆರಿಕ ಹಾರಾಟ ಶುರುಮಾಡಿದೆ. ಮೊದಲಿಗೆ ಕ್ಯಾಲಿಫೋರ್ನಿಯಾದಿಂದ ನ್ಯೂಜೆರ್ಸಿಗೆ ಹೊರಟೆ. ಅದು ನನ್ನ ಮೊದಲ 'ಸೋಲೋ' ವಿಮಾನ ಪಯಣ. ಬೆಳಗ್ಗೆ 9 ಗಂಟೆಗೆ ವಿಮಾನ ಹೊರಡುವುದಿತ್ತು. ನನ್ನ ಅಕ್ಕನ ಮಗ ನನ್ನನ್ನು 7 ಗಂಟೆಗೇ ವಿಮಾನ ನಿಲ್ದಾಣದಲ್ಲಿ ಬಿಟ್ಟು ಆಫೀಸಿಗೆ ಹೊರಟುಬಿಟ್ಟ. ನನಗೆ ಏನೇನೂ ತಿಳಿವಳಿಕೆ ಇರಲಿಲ್ಲ. 'ಸೆಕ್ಯೂರಿಟಿ' ತಪಾಸಣೆ ಸರತಿಯ ಸಾಲು ಹನುಮಂತನ ಬಾಲದಂತೆ ಇತ್ತು. ವಿಮಾನ ಹೊರಡುವುದಕ್ಕೆ ಮುಂಚೆ ಸೆಕ್ಯೂರಿಟಿ ತಪಾಸಣೆ ಮಾಡಿ ನನ್ನನ್ನು ಕಳಿಸೇ ಕಳಿಸುತ್ತಾರೆ; ಹಾಗೆ ತಪಾಸಣೆ ಮಾಡಿ ಕಳಿಸುವುದು ವಿಮಾನ ಕಂಪನಿಯವರ ಜವಾಬ್ದಾರಿ ಅಂತ ನಿಶ್ಚಿಂತೆಯಿಂದ, ಬೆಪ್ಪುಬೆಪ್ಪಾಗಿ ಸಾಲಿನಲ್ಲಿ ನಿಂತಿದ್ದೆ. ಕ್ಯೂನಲ್ಲಿ ನನ್ನ ಮುಂದೆ ನಿಂತಿದ್ದ ಒಬ್ಬ ಅಮೆರಿಕದ ಪಯಣಿಗ ನನ್ನ ವಿಮಾನದ ಬಗ್ಗೆ ವಿಚಾರಿಸಿದ. ಕೂಡಲೇ ನೀವು ಹೀಗೇ ನಿಂತಿದ್ದರೆ ಸೆಕ್ಯೂರಿಟಿ ಚೆಕ್ ಆಗಿ, ಸಮಯಕ್ಕೆ ಸರಿಯಾಗಿ ನಿಮ್ಮ ವಿಮಾನ ತಲುಪಲಾರರಿ. ಸಾಲಿನಲ್ಲಿ ಮುಂದಿರುವವರನ್ನು ರಿಕ್ವೆಸ್ಟ್ ಮಾಡಿಕೊಂಡು ಮುಂದೆ ಸಾಗಿ ಎಂದು ಸೂಚಿಸಿದ. ಅಮೆರಿಕನ್ ಉಚ್ಚಾರಣೆಯ ಅವನ ಇಂಗ್ಲಿಷ್ ಅಷ್ಟು ನನಗೆ ಅರ್ಥವಾಗಿದ್ದು ನನ್ನ ಪುಣ್ಯವೇ ಸರಿ. ಬಹುಶಃ ಬೆಪ್ಪುಬೆಪ್ಪಾಗಿ ನಿಂತಿದ್ದವಳನ್ನು ಕಂಡು ಮತ್ತು ಸೀರೆ ಉಟ್ಟಿದ್ದ ನನಗೆ ಏನೂ ತಿಳಿದಿರುವುದಿಲ್ಲವೆಂದು ನನ್ನ ಮೇಲೆ ಕನಿಕರವಾಯ್ತೇನೋ? ಆ ಮಾತು ಕೇಳುತ್ತಿದ್ದಂತೆ ನನ್ನ ಎದೆ ಢವಢವ ಹೊಡೆದುಕೊಳ್ಳಲು ಶುರುವಾಯಿತು. ಹೇಗೋ ಸಾವರಿಸಿಕೊಂಡು, ನನ್ನ ಮುಂದಿದ್ದವರಲ್ಲಿ ವಿನಂತಿಸಿಕೊಂಡು ಮುಂದೆ ಮುಂದೆ ಹೋದೆ. ಅಷ್ಟರಲ್ಲಿ ನನ್ನ ಹೆಸರು ವಿಚಾರಿಸುತ್ತಾ ವಿಮಾನ ಸಂಸ್ಥೆಯ

ಓರ್ವ ಸಹಾಯಕಿ ಬಂದಳು. ನನ್ನ ಸ್ಯೂಟ್‌ಕೇಸ್‌ಗೆ ಹಾಕಿದ್ದ ಬೀಗದ ಪುಟ್ಟ ಕೀಲಿಕೈ ಪಡೆದುಕೊಂಡಳು. ಬೀಗ ಹಾಕಬಾರದೆನ್ನುವ ಅವರ ನಿಯಮಕ್ಕೆ ವಿರುದ್ಧವಾಗಿ ನಾನು ಬೀಗ ಹಾಕಿದ್ದೆ!. ಸಿಬ್ಬಂದಿಯವರು ಸ್ಯೂಟ್‌ಕೇಸ್ ತೆರೆದು ತಪಾಸಣೆ ಮಾಡುವುದಾಗಿ ಹೇಳಿದಳು. ನನಗಂತೂ ಕೈಕಾಲು ನಡುಗಲಾರಂಭಿಸಿದವು. ನನ್ನನ್ನು ಬಂಧಿಸಿದರೆ ಏನು ಮಾಡುವುದು ಎನ್ನುವಷ್ಟು ಗಾಬರಿ ಶುರುವಾಯ್ತು. ಯಾರಿಗಾದರೂ ಕರೆ ಮಾಡಲು ನನ್ನ ಬಳಿ ಮೊಬೈಲ್ ಕೂಡ ಇರಲಿಲ್ಲ. ಯಾಕಾದರೂ ಈ VUSA ಟಿಕೆಟ್ ಪಡೆದುಕೊಂಡೆನೋ, ಅಪರಿಚಿತ ದೇಶದಲ್ಲಿ ಒಬ್ಬಳೇ ಪಯಣಿಸುವ ಧೈರ್ಯ ಮಾಡಿದೆನೋ ಎಂದು ನನ್ನನ್ನು ನಾನು ಬೈದುಕೊಂಡೆ. ಶಪಿಸಿಕೊಂಡೆ ಎಂದರೂ ಸರಿ.

ಅಂತೂ ಇಂತೂ ಸೆಕ್ಯೂರಿಟಿ ಚೆಕ್ ಆಯಿತು. ಮುಂದೆ 'ಗೇಟ್' ಹುಡುಕುವ ಪರಿಪಾಟ್ಲು. ಆ ದೊಡ್ಡ ವಿಮಾನ ನಿಲ್ದಾಣದಲ್ಲಿ ಯಾವ ದಿಕ್ಕಿನಲ್ಲಿ ಹೋಗುವುದೆಂದು ತಬ್ಬಿಬ್ಬಾಯಿತು. ಎಲ್ಲ ಕಡೆಯೂ ಬೋರ್ಡುಗಳಿರುತ್ತವೆ. ಆದರೆ ನನ್ನ ಮನಸ್ಥಿತಿಯಲ್ಲಿ ಅವೂ ನನ್ನ ಕಣ್ಣಿಗೆ ಕಾಣದಾದವು. ಯಾರನ್ನೋ ಕೇಳಿದೆ. ಸೀರೆ ಉಟ್ಟುಕೊಂಡು ಗಾಬರಿಯಿಂದ ಓಡುತ್ತಿದ್ದ ನಾನು ಅವರಿಗೆ ಮೃಗಾಲಯದಿಂದ ತಪ್ಪಿಸಿಕೊಂಡಿರುವ ಪ್ರಾಣಿಯಂತೆ ಕಂಡಿರಬೇಕು ಅಥವಾ ನನ್ನ ಭಾಷೆಯೂ ಅರ್ಥವಾಗಲಿಲ್ಲವೋ ಕಾಣೆ. ನನ್ನನ್ನೇ ಮಿಕಮಿಕ ನೋಡಿದರು. ಅವರಿಗೇನು ಗೊತ್ತು ನನ್ನ ಪಾಡು?

ಅಷ್ಟರಲ್ಲಿ ಧ್ವನಿವರ್ಧಕದಲ್ಲಿ ನನ್ನ ಹೆಸರು ಕೇಳಿಸಿದಂತಾಯ್ತು. ಅಲ್ಲಿಯೂ ಎಡವಟ್ಟೇ. ಪಾಸ್‌ಪೋರ್ಟಿನಲ್ಲಿ ನನ್ನ ಮೊದಲ ಹೆಸರು 'ಗುಂಡಮರಾಜು' ಎಂದಿರುವುದರಿಂದ ಧ್ವನಿವರ್ಧಕದಲ್ಲಿ 'ಗುಂಡಮರಾಜು' ಅವರು ವಿಮಾನ ಹತ್ತಲು ತುರ್ತಾಗಿ ಬರಬೇಕು ಎಂದು ಕರೆಯುತ್ತಿದ್ದರು. (ಜಿ.ವಿ.ನಿರ್ಮಲದಲ್ಲಿ 'ಜಿ' ಎಂದರೆ ಗುಂಡಮರಾಜು. ನಮ್ಮ ವಂಶದ ಗುರುತು) ಹಾಗೆ ಕರೆಸಿಕೊಂಡು ರೂಢಿಯಿಲ್ಲದ ನನಗೆ ಅವರು ಕರೆಯುತ್ತಿರುವುದು ನನ್ನನ್ನೇ ಎಂದು ಅರ್ಥೈಸಿಕೊಳ್ಳುವುದೇ ಕಷ್ಟವಾಯಿತು. ನನ್ನ ಅದೃಷ್ಟಕ್ಕೆ ಅದೇ ಸಮಯದಲ್ಲಿ ನಾನು ಹುಡುಕುತ್ತಿದ್ದ ಗೇಟ್ ನಂಬರ್ ಕಾಣಿಸಿತು. ಓಡಿಹೋಗಿ 'ಗೇಟ್' ಬಳಿ ಇದ್ದವರಿಗೆ ನನ್ನ ಬೋರ್ಡಿಂಗ್ ಪಾಸ್ ತೋರಿಸಿದೆ. ಮುಂದೆ ಸಾಗುವಂತೆ ಕೈತೋರಿದರು. ಹೇಗೆ ಧಾವಿಸಿದೆ, ಹೇಗೆ ವಿಮಾನ ಹತ್ತಿದೆ ಎನ್ನುವುದು ಈಗಲೂ ನೆನಪಿಲ್ಲ. ಓಡಿಹೋಗಿ, ವಿಮಾನ ಹತ್ತಿ, ನನ್ನ ಜಾಗದಲ್ಲಿ ಕುಳಿತೆ. ಒಂದೈದು ನಿಮಿಷಗಳಲ್ಲಿ ವಿಮಾನ ಹೊರಟಿತು. ನನ್ನ ಎದೆಬಡಿತ ನನಗೇ ಕೇಳಿಸುವಂತಿತ್ತು. ನಾನು ಸರಿಯಾದ ವಿಮಾನದಲ್ಲಿದ್ದೇನೆಯೇ ಎನ್ನುವ ಪ್ರಶ್ನೆ ಇನ್ನೂ ಬಾಧಿಸುತ್ತಿತ್ತು. ಆದರೆ ವಿಮಾನದ ಕಿಟಕಿಯಿಂದ ಏನು ಕಾಣುತ್ತದೆ? ಕಂಡರೂ ಏನು ತಿಳಿಯುತ್ತದೆ? ತಪ್ಪು ವಿಮಾನವಾಗಿದ್ದರೂ ನಾನೇನು ಮಾಡಲು ಸಾಧ್ಯ? ಮೈಸೂರಿನಿಂದ ಬೆಂಗಳೂರಿಗೆ ಹೊರಟಾಗ ಪಾಂಡವಪುರ, ಶ್ರೀರಂಗಪಟ್ಟಣ ಕಂಡಾಗ ಸರಿಯಾದ ರೈಲು ಹತ್ತಿರುವೆನೆಂದು ನಿರಾಳವಾಗುತ್ತದೆ. ಇಲ್ಲೇನು ಮಾಡಲಿ ಎಂದು ಚಡಪಡಿಸುತ್ತಿದ್ದೆ.

ಅಷ್ಟರಲ್ಲಿ 'ಏರ್ ಹೋಸ್ಟಸ್' ನನ್ನ ಬಳಿ ಬರುತ್ತಿರುವುದು ಕಾಣಿಸಿತು. ಮತ್ತೇನು ಹೇಳುವಳೋ ಎಂದು ಭಯದಿಂದ ಹೃದಯವೇ ಬಾಯಿಗೆ ಬಂದಂತಾಯ್ತು. ಅವಳು ಮೆಲುನಗೆ ನಕ್ಕು, ಸೆಕ್ಯೂರಿಟಿ ಸಾಲಿನಲ್ಲಿ ನನ್ನಿಂದ ಪಡೆದಿದ್ದ ಸ್ಯೂಟ್‌ಕೇಸ್ ಕೀಲಿಕೈ ಕೊಟ್ಟಳು. ಸಿಬ್ಬಂದಿಯವರು ನನ್ನ ಸ್ಯೂಟ್‌ಕೇಸ್‌ನಲ್ಲಿ ಯಾವುದೇ ಕಾನೂನುಬಾಹಿರ ಸಾಮಾನಿಲ್ಲವೆಂದು ಚೆಕ್ ಮಾಡಿದ ನಂತರ ಕೀಲಿಕೈಯ್ಯನ್ನು ವಾಪಸ್ಸು ತಲುಪಿಸಿದ್ದರು. ಆ ಪುಟ್ಟ ಕೀಲಿಕೈ ನೋಡಿದ ಕ್ಷಣವೇ ನನಗೆ ಸಮಾಧಾನವಾಯಿತು. ಸರಿಯಾದ ವಿಮಾನದಲ್ಲಿದ್ದೇನೆಂದು ಖಾತ್ರಿಯಾಯ್ತು. ಆ ಪುಟ್ಟ ಕೀಲಿಕೈಗೆ ಮನದಲ್ಲಿಯೇ ವಂದಿಸುತ್ತಾ, ನಿಶ್ಚಿಂತೆಯಿಂದ ಕಣ್ಣುಮುಚ್ಚಿ ಸೀಟಿಗೆ ಒರಗಿದೆ.

***

ಲಘು ಬರಹ

ಪಾಪದ ಪಾಪಣ್ಣ

– ಶೀಲಾ ಅರಕಲಗೂಡು

ಪಾಪಣ್ಣ ಅಂದರೆ ಯಾರು ಅಂತ ತಿಳ್ಕೊಂಡಿದೀರಿ? ಅದೇ, ನಮ್ಮ ಚಿಕ್ಕನಹಳ್ಳಿ ದಾಸಪ್ಪನ ಮಗ! ನೆನಪಾಯ್ತಲ್ವಾ? ಹಾಂ! ಅದೇ ಪಾಪಣ್ಣನ ಬಗ್ಗೆ ನಾನೀಗ ಹೇಳ್ತರೋದು. 'ಸರೀ, ಪಾಪಣ್ಣ ಗೊತ್ತು. ಆದರೆ, ಶೀರ್ಷಿಕೆಯಲ್ಲಿ ಪಾಪದ ಪಾಪಣ್ಣ ಅಂತ ಯಾಕೆ ಬರೆದಿದ್ದೀರಿ?' ಅಂತ ಕೇಳ್ತಿದೀರಾ? ಅದನ್ನೇ ನಾನೀಗ ನಿಮಗೆ ಹೇಳೋಕೆ ಹೊರಟಿರೋದು. ಕೇಳಿದ ಮೇಲೆ ನೀವೂ ಕೂಡಾ ಲೊಚಗುಟ್ಟಿ 'ಛೇ, ಪಾಪದ ಪಾಪಣ್ಣ' ಅಂತ ಹೇಳೇ ಹೇಳ್ತೀರಿ ಅಂತ ನಂಗೊತ್ತು ಬಿಡಿ. ಕುತೂಹಲ ಶುರುವಾಯ್ತೇ? ತಡೀರಿ ಸ್ವಲ್ಪ, ಹೇಳ್ತೀನಿ. ಅದಕ್ಕೇ ತಾನೇ ನಾನಿಲ್ಲಿ ಬಂದಿರೋದು? ನಂಗೂ ತುಂಬಾನೇ 'ಪಾಪ!' ಅನ್ನಿಸಿ, ತಡೆದುಕೊಳ್ಳಲಾರದೆ ನಿಮ್ಮೊಂದಿಗೆ ಹೇಳಕೊಳ್ಳೋಣ ಅಂತ ಬಂದಿದೀನಿ.

ಅದೇನೋ, ಚಿಕ್ಕಂದಿನಲ್ಲೇ ನಮ್ಮ ಪಾಪಣ್ಣನಿಗೆ ದೊಡ್ಡವನಾದ ಮೇಲೆ ಬೆಂಗಳೂರು ಸೇರಬೇಕೆಂಬ ಗೀಳಿತ್ತು. ಹಳ್ಳಿಯಲ್ಲಿದ್ದಾಗ ಓದಿದ್ದು ಏಳನೇ ಕ್ಲಾಸಿನ ತನಕ. ಅಲ್ಲಿಂದ ಅದು ಮುಂದುವರೆಯಲೇ ಇಲ್ಲ. ಯಾಕಂತೀರೋ? ಅವನು ಪ್ರತಿದಿನ ಬೆಳಗಿನ ಜಾವಕ್ಕೇ ಎದ್ದು ಮನೆಯಲ್ಲಿನ ದನದ ಕೊಟ್ಟಿಗೆ ಕೆಲಸ, ಹೊಲದ ಕೆಲಸ ಅಂತೆಲ್ಲಾ ಮಾಡಿ ಶಾಲೆಗೆ ಹೋಗ್ಬೇಕಿತ್ತು. ರಾತ್ರಿಯೂ ಅವನಿಗೆ ಬೇಗನೆ ಮಲಗೋಕೆ ಆಗ್ತಿರಲಿಲ್ಲ. ಹಾಗಾಗಿ ಶಾಲೆಯಲ್ಲಿ ತೂಕಡಿಕೆ ಬಂದುಬಿಡ್ತಿತ್ತು. ಮೇಷ್ಟ್ರ ಪಾಠವಂತೂ ಜೋಗುಳದಂತಾಗಿರುತ್ತಿತ್ತು. ನೋಡಿದ ಮೇಷ್ಟ್ರು ಬಿಟ್ಟಾರೆಯೇ? ಬಿಡ್ತಿದ್ರು ನಾಲ್ಕು ಬೆನ್ನಿನ ಮೇಲೆ. 'ಅಲ್ಲಾ, ಸ್ವಲ್ಪ ಹೊತ್ತು ನಿದ್ದೆ ಮಾಡಿದರೆ ಮೇಷ್ಟ್ರ ಗಂಟೇನು ಹೋಗುತ್ತೆ? ಅವರು ಮಾತ್ರ ಮಧ್ಯಾಹ್ನ ಊಟದ ನಂತರ ತರಗತಿಯಲ್ಲಿ ಕುಳಿತು ಗೊರಕೆ ಹೊಡೀಬಹುದು, ನಾನು ಮಾಡಿದರೇಕೆ ಶಿಕ್ಷೆ?' ಎಂದುಕೊಳ್ಳುತ್ತಿದ್ದ ಪಾಪಣ್ಣ ಶಾಲೆಯ ಬಗ್ಗೆ ಬೇಸರದ ಭಾವ ಹೊಂದಿದ್ದ. ಹಾಗಾಗಿ, ಏಳನೇ ಕ್ಲಾಸಿನ ನಂತರ ಅವನ ವಿದ್ಯಾಭ್ಯಾಸ ಮುಂದೇಳಲೇ ಇಲ್ಲ.

ಹಾಗೂ ಹೀಗೂ ಒಂದಷ್ಟು ವರ್ಷ ಹಳ್ಳಿಯಲ್ಲಿದ್ದವನು ಸಣ್ಣ ಅವಕಾಶ ಸಿಗ್ತಿದ್ದ ಹಾಗೇ ಬೆಂಗಳೂರಿಗೆ ಹಾರಿ ಬಂದಿದ್ದ. ಬೆಂಗಳೂರಿಗೆ ಬಂದವನು ತಾನು ವಾಸಿಸುತ್ತಿದ್ದ ಬಡಾವಣೆಯಲ್ಲಿದ್ದ ಒಂದು ದೊಡ್ಡ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ್ದ. ಹೇಗಾದರೂ ಒಂದೊಳ್ಳೆಯ ಹೆಸರು ಮಾಡಿ ತಾನೂ ಒಬ್ಬ ಯೋಗ್ಯ ಮನುಷ್ಯ ಅನ್ನಿಸಿಕೊಳ್ಳುವ ಆಸೆ ಇತ್ತವನಿಗೆ.

ಪಾಪಣ್ಣ ಕೆಲಸ ಮಾಡುತ್ತಿದ್ದ ಕಾರ್ಖಾನೆಯಲ್ಲಿ ಆಗಾಗ್ಗೆ ಕೆಲಸಗಾರರಿಗಾಗಿ ತರಬೇತಿ ಕಾರ್ಯಕ್ರಮ ನಡೆಸುತ್ತಿದ್ದರು. ವಿಶೇಷ ಅತಿಥಿಗಳನ್ನು ಕರೆಸಿ ಭಾಷಣ ಏರ್ಪಡಿಸುತ್ತಿದ್ದರು. ಅಂತ್ಯದಲ್ಲಿ ಅತಿಥಿಗಳಿಗೆ ಶಾಲು ಹೊದಿಸಿ, ಹಣ್ಣಿನ ಬುಟ್ಟಿ ಕೊಟ್ಟು ಜೊತೆಗೆ ಏನಾದರೊಂದು ಉಡುಗೊರೆ ಕೊಡುತ್ತಿದ್ದರು. ಫೋಟೋಗ್ರಾಫರ್ ಬಂದು, ಶಾಲು ಹೊದಿಸುವ, ಹಣ್ಣಿನ ಬುಟ್ಟಿ ಕೊಡುವ ಹಾಗೂ ಉಡುಗೊರೆ ನೀಡುವ ವಿವಿಧ ಹಂತಗಳ ಫೋಟೋಗಳನ್ನು ತೆಗೆದು ಸಂಸ್ಥೆಯ ಮುಖ್ಯಸ್ಥರಿಗೆ ಕೊಡುತ್ತಿದ್ದ. ಆ ಫೋಟೋಗಳನ್ನೆಲ್ಲ ಅತಿಥಿಗಳಿಗೆ ತಲುಪಿಸುವ ಜವಾಬ್ದಾರಿ ಪಾಪಣ್ಣನದೇ ಆಗಿತ್ತು. ಆಗೆಲ್ಲ ನಮ್ಮ ಪಾಪಣ್ಣನಿಗೆ ತಾನೂ ಏನಾದರೂ ಸಾಧಿಸಿ ಈ ರೀತಿ ಮರ್ಯಾದೆ ಮಾಡಿಸಿಕೊಳ್ಳಬೇಕು, ತೆಗೆಸಿಕೊಂಡ ಫೋಟೋಗಳನ್ನು ಹಳ್ಳಿಗೆ ತೆಗೆದುಕೊಂಡು ಹೋಗಿ, ಮೇಷ್ಟ್ರಿಗೆ ತೋರಿಸಿ, 'ನೋಡಿ ಸರ್, ಏನೋ ಒಂದೊಂದ್ಸಲ ಕ್ಲಾಸಿನಲ್ಲಿ ನಿದ್ದೆ ಮಾಡಿದರೆ ದನಕ್ಕೆ ಬಡಿಯುವ ಹಾಗೆ ಬಡಿದು, ನೀನೊಬ್ಬ ಅಪ್ರಯೋಜಕ ಅಂತ ಬೈತಿದ್ರಲ್ಲಾ ಈಗ ನೋಡಿ ನನಗೂ ಸನ್ಮಾನ ಮಾಡಿದ್ದಾರೆ' ಎಂದು ಜಂಭದಿಂದ ತೋರಿಸುವ ಆಸೆಯಿತ್ತು.

ಹಲವಾರು ವರ್ಷಗಳು ಕಳೆದರೂ ಪಾಪಣ್ಣನ ಸನ್ಮಾನ ಮಾಡಿಸಿಕೊಳ್ಳುವ ಆಸೆ ಜೀವಂತವಾಗಿಯೇ ಇತ್ತು. ತನ್ನ ಬದುಕಿನಲ್ಲಿ ಬರಬಹುದಾದ ಆ ಅಮೃತ ಘಳಿಗೆಗೆ ಕಾಯುತ್ತಲೇ ಇದ್ದ, ಕಾಯುತ್ತಲೇ ಇದ್ದ. ಬೆಂಗಳೂರಿನಲ್ಲಿ ಯಾರ್ಯಾರಿಗೆಲ್ಲ ಸನ್ಮಾನ ಆಗುವುದನ್ನು ಗಮನಿಸಿದ್ದ ಅವನಿಗೆ ನಿರಾಶೆ ಕಾಡುತ್ತಿರಲಿಲ್ಲ.

ಅಂತೂ ಇಂತೂ ಪಾಪಣ್ಣ ನಿರೀಕ್ಷಿಸುತ್ತಿದ್ದ ಅಮೃತ ಘಳಿಗೆ ಹತ್ತಿರವಾದಂತೆ ತೋರುತ್ತದೆ. ಆ ವರ್ಷ ಮೇ ತಿಂಗಳ ಒಂದನೇ ತಾರೀಕು ಕಾರ್ಮಿಕರ ದಿನಾಚರಣೆಯ ನಿಮಿತ್ತ ಪಾಪಣ್ಣ ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಕಾರ್ಮಿಕರಲ್ಲಿ ಐವತ್ತು ಮಂದಿಯನ್ನಾರಿಸಿ ಸನ್ಮಾನ ಮಾಡುತ್ತಾರೆಂಬ ವದಂತಿ ಹರಡಿತು. ಸುಮಾರು ಮುನ್ನೂರರಷ್ಟು ಸಂಖ್ಯೆಯಲ್ಲಿದ್ದ ಕಾರ್ಮಿಕರಿಗೆಲ್ಲಾ ಆತಂಕಭರಿತ ಕುತೂಹಲವೋ ಕುತೂಹಲ! ಪಾಪಣ್ಣ ಕೂಡ ಅವರಲ್ಲೊಬ್ಬ ತಾನೇ? ರಾತ್ರಿಯೆಲ್ಲಾ ನಿದ್ದೆ ಬರದೆ ಹೊರಳಾಡುತ್ತಿದ್ದ. 'ನಾನು ಇನ್ನಷ್ಟು ಶ್ರದ್ಧೆಯಿಂದ ಕೆಲಸ ಮಾಡಬೇಕಿತ್ತೋ ಏನೋ. ಹೋದವರ್ಷ ರಜೆ ಕೊಡೋದಿಕ್ಕಾಗೋದಿಲ್ಲ ಅಂತ ಹೇಳಿದ್ದರೂ ನಾನು ರಜೆ ತೆಗೆದುಕೊಂಡು ಬಿಟ್ಟಿದ್ದೆ. ಛೇ, ಹಾಗೆ ಮಾಡಬಾರದಿತ್ತು. ಅದನ್ನೇ ನೆಪವಾಗಿಟ್ಟುಕೊಂಡು ನನ್ನನ್ನು ಆಯ್ಕೆ ಮಾಡದಿದ್ದರೆ? ಇಲ್ಲ ಇಲ್ಲ, ಹಾಗೆ ಮಾಡಲಾರರು. ಉಳಿದಂತೆ ನಾನು ಅದೆಷ್ಟು ವಿಧೇಯನಾಗಿ ಹೇಳಿದ ಕೆಲಸವನ್ನೆಲ್ಲ ಮಾಡಿ ಮುಗಿಸುತ್ತಿದ್ದೆನಲ್ಲ. ಹಾಗೆಂದು ಎಷ್ಟೋ ಬಾರಿ ನನ್ನನ್ನು ಇತರರ ಎದುರಿಗೆ ಹೊಗಳಿದ್ದೂ ಇದೆ. ಖಂಡಿತ ಐವತ್ತರಲ್ಲಿ ನಾನೂ ಒಬ್ಬನಾಗಿ ಆಯ್ಕೆ ಆಗಿಯೇ ಆಗಬಹುದು....' ಹೀಗೆ ಅವನು ಎರಡೂ ಬಗೆಯಲ್ಲಿ ವಿಚಾರ ಮಾಡಿ ಮಾಡಿ ದಣಿಯುತ್ತಿದ್ದ.

ಏಪ್ರಿಲ್ ೩೦ರಂದು ಸನ್ಮಾನಕ್ಕೆ ಆಯ್ಕೆಯಾದವರ ಪಟ್ಟಿ ಪ್ರಕಟವಾಗಿಯೇಬಿಟ್ಟಿತು. ಪಾಪಣ್ಣನ ನಿರಂತರ ತಪಸಿನ ಫಲವೋ ಎಂಬಂತೆ ಅವನ ಹೆಸರೂ ಪಟ್ಟಿಯಲ್ಲಿತ್ತು. ಅದನ್ನು ನೋಡಿದ ಅವನಿಗೆ ಸಂತಸದಿಂದ ಹೃದಯಾಘಾತವಾಗದಿದ್ದುದೇ ಆಶ್ಚರ್ಯ!

ಮಾರನೆಯ ದಿನವೇ ಮೇ ಒಂದು. ಕಾರ್ಖಾನೆಯಲ್ಲಿ ಸಮಾರಂಭದ ಅಂಗವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಹಾಗಾಗಿ ಸನ್ಮಾನ ಕಾರ್ಯಕ್ರಮ ಅಂತ್ಯದಲ್ಲಿತ್ತು. ಸಂಜೆ ಆರಕ್ಕೆ ಪ್ರಾರಂಭವಾದ ಕಾರ್ಯಕ್ರಮ ಒಂಭತ್ತರವರೆಗೂ ಎಳೆದಿತ್ತು. ಬೇಗಬೇಗನೆ ಇಪ್ಪತ್ತು ನಿಮಿಷಗಳಲ್ಲಿ ಐವತ್ತು ಜನರಿಗೆ ಸನ್ಮಾನ ಮಾಡಬೇಕಿತ್ತು. ಹೆಸರು ಕೂಗಿದಾಕ್ಷಣ ಸಂಬಂಧಪಟ್ಟವರು ವೇದಿಕೆಯ ಮೇಲೆ ಬಂದು ಅಲ್ಲಿರಿಸಿದ್ದ ಕುರ್ಚಿಯ ಮೇಲೆ ಕುಳಿತಾಕ್ಷಣ ಅಲ್ಲೇ ವೇದಿಕೆಯ ಮೇಲಿನ ಮೂವರು ಮುಖ್ಯಸ್ಥರು ಶಾಲು ಹೊದಿಸುವ, ಹಣ್ಣಿನ ಬುಟ್ಟಿ ಕೊಡುವ, ಕಾಣಿಕೆ ನೀಡುವ ಕೆಲಸವನ್ನು ಹಂಚಿಕೊಂಡಿದ್ದರು. ಮತ್ತೊಬ್ಬರಿದ್ದು ಹೊದಿಸಿದ ಶಾಲು, ಹಣ್ಣಿನ ಬುಟ್ಟಿ, ಕಾಣಿಕೆಯನ್ನು ತೆಗೆದು ಒಂದು ಚೀಲದಲ್ಲಿ ಹಾಕಿಕೊಡುತ್ತಿದ್ದರು. ಇವೆಲ್ಲವೂ ಇಪ್ಪತ್ತರಿಂದ ಮೂವತ್ತು ಸೆಕೆಂಡುಗಳಲ್ಲಿ ಮುಗಿಸಬೇಕಿತ್ತು. ಈ ನಡುವೆ ಫೋಟೋಗ್ರಾಫರ್ ಚುರುಕಾಗಿ ಫೋಟೋ ತೆಗೆಯಬೇಕಿತ್ತು.

ಇದೆಲ್ಲವನ್ನೂ ನೋಡುತ್ತಿದ್ದ ಪಾಪಣ್ಣನಿಗೆ ಆಗಲೇ ಸ್ವಲ್ಪ ನಿರಾಸೆಯಾಗಿತ್ತು. ತನ್ನ ಇಡೀ ಜೀವಮಾನವನ್ನೇ ಈ ಸಂದರ್ಭಕ್ಕಾಗಿ ಕಾಯ್ದಿರಿಸಿದ್ದ ಆತನಿಗೆ ಈಗ ಅದನ್ನು ಅನುಭವಿಸಲು ಸಿಗುತ್ತಿದ್ದುದು ಕೇವಲ ಇಪ್ಪತ್ತೋ ಇಪ್ಪತ್ತೈದೋ ಸೆಕೆಂಡುಗಳು! ಆದರೂ ತನ್ನ ಸರದಿಗಾಗಿ ಕಾದವನು ಹೆಸರು ಕೂಗಿದಾಕ್ಷಣ ವೇದಿಕೆಯನ್ನೇರಿ ಕುರ್ಚಿಯ ಮೇಲೆ ಕುಳಿತ. ಕುಳಿತಾಕ್ಷಣ ಒಬ್ಬರು ಶಾಲು ಹೊದಿಸಿದರೆ ಮತ್ತೊಬ್ಬರು ತಕ್ಷಣವೇ ತೆಗೆದು ಮಡಿಸಿಟ್ಟರು. ಹಣ್ಣಿನ ಬುಟ್ಟಿ, ಕಾಣಿಕೆಗಳನ್ನೂ ಕೊಟ್ಟಂತೆ ಮಾಡಿ ಶಾಲಿನೊಂದಿಗೆ ಒಂದು ಚೀಲದಲ್ಲಿ ಹಾಕಿ ಕೊಡುವಷ್ಟರಲ್ಲಿ ಮುಂದಿನವರು ಬಂದು ಕುರ್ಚಿಯಲ್ಲಿ ಕುಳಿತಾಗಿತ್ತು. ಸಂಭ್ರಮವನ್ನು ಅನುಭವಿಸುವ ಮುಂಚೆಯೇ ಪಾಪಣ್ಣ ವೇದಿಕೆಯಿಂದ ಕೆಳಗಿಳಿದಾಗಿತ್ತು.

ನಾಲ್ಕು ದಿನಗಳ ನಂತರ ಫೋಟೋಗ್ರಾಫರ್ ತಂದಿಟ್ಟ ಫೋಟೋಗಳನ್ನು ಮುಖ್ಯಸ್ಥರು ಪಾಪಣ್ಣನ ಕೈಗೆ ಕೊಟ್ಟು ಎಲ್ಲರಿಗೂ ಹಂಚಲು ತಿಳಿಸಿದರು. ಉತ್ಸಾಹದಿಂದ ಫೋಟೋಗಳನ್ನು ತೆಗೆದುಕೊಂಡ ಪಾಪಣ್ಣ ತನ್ನ ಫೋಟೋಗಾಗಿ ಹುಡುಕಿದ. ಸಿಕ್ಕಿತು, ಆದರೆ... ಅದರಲ್ಲಿ ಪಾಪಣ್ಣ ಕುರ್ಚಿಯ ಪಕ್ಕದಲ್ಲಿ ಚೀಲ ಹಿಡಿದು ನಿಂತಿದ್ದ. ನೋಡಿದವರಿಗೆ ಅವನು ವೇದಿಕೆಯ ಮೇಲೆ ಸಹಾಯಕನಾಗಿ ನಿಂತಂತೆ ಕಾಣಿಸುತ್ತಿತ್ತು. ಫೋಟೋ ನೋಡಿದ ಪಾಪಣ್ಣನ ಮುಖ ಯಾವ ಪರಿ ಇಳಿದು ಹೋಯ್ತೆಂದರೆ, ಬಹುಶಃ, ಆತನಿಗೆ ತನ್ನ ಬದುಕಿಗೆ ಅರ್ಥವೇ ಉಳಿಯಲಿಲ್ಲ ಎನ್ನಿಸಿರಬಹುದು. ಪಾಪ! ಪಾಪದ ಪಾಪಣ್ಣ!!

***

ನನ್ನ ಹಾಡು....

– ಭ ರಾ ವಿಜಯಕುಮಾರ

ಬೇಸರದ ಕ್ಷಣಗಳಲಿ ಆಸರೆಯು ತಾನಾಗಿ
ತುಸು ನೆಮ್ಮದಿಯ ಕೊಡಲಿ ನನ್ನ ಹಾಡು
ಬಾಯಾರಿದೊಡಲಿಗೆ ಸಿಹಿನೀರಿನೊರತೆಯೊಲು
ಹಾಯೆನಿಸುವಂತಿರಲಿ ನನ್ನ ಹಾಡು।

ಬಿಂಬವನೆ ನೋಡುತ್ತ ಅಂಗೈಲಿ ತಲೆಸವರಿ
ಕೇಶತಿದ್ದುವ ಪರಿಯಲಿರಲಿ ಹಾಡು
ಮುನ್ನ ಮರೆತಂತಿದ್ದು ಥಟ್ಟನೇ ನೆನಪಾದ
ಸಂತಸದ ಕ್ಷಣವಾಗಲೆನ್ನ ಹಾಡು।

ಮಗು ನಕ್ಕು ಕರೆದಂತೆ, ಕರು ನೆಗೆದು ಕುಣಿದಂತೆ
ಎಳೆ ಬಿಸಿಲ ಕೋಲಾಗಲೆನ್ನಹಾಡು
ಕಂಡ ಕನಸಿನ ಲೋಕ ಕಣ್ಣೆದುರೆ ತೆರೆದಂತೆ
ಏನೊ ನೆನಪಾದಂತೆ ಬರಲಿ ಹಾಡು।

ಕಾಲನೋಟದೆ ಸಾಗಿ ಕಳೆದು ಹೋಗದೆ ಮರೆಗೆ
ನಡಿಗೆಯಲಿ ನೆನಪಾಗಲೆನ್ನ ಹಾಡು
ಸಾಲುದೀಪಗಳಂತೆ ಸರಿದಾರಿಯನು ತೋರಿ
ಬೆಳಕ ಬೀರುತಲಿರಲಿ ನನ್ನ ಹಾಡು।

***

ಗಾದೆಗಳು ಹೊಸ ಅವತಾರದಲ್ಲಿ

(ಅಜ್ಜಿ ಮೊಮ್ಮಗನ ನಡುವಿನ ಸಂಭಾಷಣೆ ಮೂಲಕ)

– ಕೆ.ಆರ್. ವೆಂಕಟೇಶ್

ಗಾದೆಗಳು ನೂರಾರು ವರ್ಷಗಳಿಂದ ಜೀವನಾನುಭವಗಳಿಂದ ಜನಜನಿತವಾಗಿರುವ ಸತ್ಯವಾಕ್ಯಗಳು. ಜನರು ತಾವು ಅನುಭವಿಸಿರುವ ಅಥವಾ ಸಾಕ್ಷಿಯಾಗಿರುವ ಎಷ್ಟೋ ಸಂದರ್ಭಗಳು, ಪರಿಸ್ಥಿತಿಗಳು ಈ ರೀತಿಯ ವಾಕ್ಯಗಳನ್ನು ಹುಟ್ಟುಹಾಕಲು ಕಾರಣವಾಗಿವೆ. ಇದನ್ನು ದೈನಂದಿನ ಜೀವನದಲ್ಲಿ ನಾವು ಅಳವಡಿಸಿಕೊಂಡು ಮುಂದೆ ಸಾಗಲು ಅನುಕೂಲವಾಗಿವೆ.

ಆ ಸತ್ಯಗಳಿಗೆ ಅಂದರೆ ಗಾದೆಗಳು ನೀಡುವ ಒಳ ಅರ್ಥಗಳಿಗೆ ಒಂದಿಷ್ಟೂ ಚ್ಯುತಿ ಬಾರದಂತೆ ಅವುಗಳಲ್ಲಿ ಬಳಸಿರುವ ಪದಗಳು ಆಯಾ ಕಾಲಕ್ಕೆ ಬದಲಾಗಬಹುದೇ? ಅಂದರೆ ಆಧುನಿಕ ಕಾಲಕ್ಕೆ ತಕ್ಕಂತೆ ಬದಲಾಗಬಹುದೇ? ಗೊತ್ತಿಲ್ಲ.

ಹಾಗೊಂದು ಪ್ರಯತ್ನ ಈ ಕೆಳಕಂಡ ಒಂದು ಹಾಸ್ಯಭರಿತ ಸಂಭಾಷಣೆಗಳಿಂದ.

ಗುಡ್ಡೇನಹಳ್ಳಿಯಲ್ಲಿರುವ ಗಂಗಜ್ಜಿ ನಾಲ್ಕನೇ ಕ್ಲಾಸಿನ ತನಕವಷ್ಟೇ ಓದಿದ್ದರೂ ಜೀವನದಲ್ಲಿ ಬಹಳ ಅನುಭವಸ್ಥೆ. ಅವಳ ಒಂದು ವಿಶೇಷ ಗುಣವೆಂದರೆ ಮಾತಿನ ಮಧ್ಯೆ ಆಗಾಗ ಗಾದೆಗಳನ್ನು ಬಳಸುವುದು. ಹಾಗಾಗಿ ಈ ಹಳ್ಳಿಯಲ್ಲಿ ಆಕೆ ಗಾದೆ ಗಂಗಜ್ಜಿ ಎಂದೇ ಚಿರಪರಿಚಿತ. ಈ ಗಾದೆಗಳನ್ನು ಅವಳು ಅವಳಮ್ಮ ರುಕ್ಕಮ್ಮನಿಂದ ಕಲಿತಿದ್ದು.ಆ ರುಕ್ಕಮ್ಮ ಅವಳಮ್ಮ ಕಮಲಮ್ಮನಿಂದ. ಹೀಗೆ ತಲೆತಲಾಂತರದಿಂದ ಬಂದಿದ್ದು ಈ ಗಾದೆಗಳನ್ನು ಬಳಸುವ ವಿದ್ಯೆ..

ಗಂಗಜ್ಜಿಯ ಮೊಮ್ಮಗ ಗುಂಡೂರಾವ್ ಅಲಿಯಾಸ್ ಗುಂಡ. ಅವನು ಹತ್ತನೇ ತರಗತಿಯ ತನಕ ಹಳ್ಳಿಯಲ್ಲಿ ಓದಿ, ಕಾಲೇಜು ಬೆಂಗಳೂರಿನಲ್ಲಿ ಓದಿ ಇದೀಗ ಐಟಿ ಕೆಲಸದಲ್ಲಿದ್ದಾನೆ. ಹಳ್ಳಿ ಮತ್ತು ನಗರ ಎರಡೂ ಜೀವನವನ್ನು ಕಂಡಿರುವ ಗುಂಡ ಇದೀಗ ಅಜ್ಜಿಯನ್ನು ನೋಡಲು ಹಳ್ಳಿಗೆ ಬಂದಿದ್ದಾನೆ. ಬೆಳಗ್ಗೆ ತಿಂಡಿ ತಿಂದು ಅಜ್ಜಿ ಗಂಗಜ್ಜಿ ಜೊತೆ ಹರಟೆ ಹೊಡೆಯಲು ಆರಂಭಿಸಿದ ಗುಂಡ. .

ಗುಂಡ: ಅಜ್ಜೀ ಹಳ್ಳಿಲೆಲ್ಲಾ ನಿನ್ನನ್ನ ಗಾದೆ ಗಂಗಜ್ಜಿ ಅಂತ ಕರೀತಾರಲ್ಲ. ಗಾದೆ ಹೇಳೋದೂಂದ್ರ ಅಷ್ಟೊಂದು ಗ್ರೇಟಾ?

ಗಂಗಜ್ಜಿ: ಗ್ರೇಟೋ ಪಾಟೋ ಗೊತ್ತಿಲ್ಲಕಣಪ್ಪಾ. ಆದರೆ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮಾತಿದೆ ಅದಂತೂ ನಿಜ.

ಗುಂಡ: ಅಂದ್ರೆ ಒಂದು ರೀತಿ 'ಬೈಬಲ್ ಸುಳ್ಳಾದರೂ ಗೂಗಲ್ ಸುಳ್ಳಾಗದು' ಅನ್ನೋ ಹಾಗಿದೆ. ಏನಂತೀಯಾ?

ಗಂಗಜ್ಜಿ : ಅದೇನೋ ನಂಗೆ ಗೊತ್ತಿಲ್ಲ.

ಗುಂಡ: ಅಜ್ಜಿ, ಅದೇ ಪಕ್ಕದ ರಸ್ತೆ ರತ್ನಮ್ಮನ ಮಗಳು ಯಾರದೋ ಜೊತೆ ಓಡಿಹೋಗಿ ಮದ್ವೆ ಮಾಡ್ಕೊಂಡಿದ್ದಲ್ಲ. ಮತ್ತೆ ಹಳ್ಳಿಗೆ ಒಂದು ವಾರದ ಹಿಂದೆ ವಾಪಸ್ಸಾಗಿದ್ದಾಳಂತೆ ಅಂತ ಎದ್ರು ಮನೆ ರಾಮು ಹೇಳ್ದ. ಏನು ಕತೆ.?

ಗಂಗಜ್ಜಿ: ಹೌದಂತೆ ನಾನಿನ್ನೂ ಅವಳನ್ನ ನೋಡಿಲ್ಲ. ಎಲ್ಹೋಗ್ತಾಳೆ. 'ಊರಿಗೆ ಬಂದವ್ಳು ನೀರಿಗೆ ಬರದೇ ಇರ್ತಾಳಾ?'

ಗುಂಡ: ಓ ಅದೇ, 'ಎಟಿಎಂಗೆ ಹೋದವ್ಳು ಶಾಪಿಂಗ್ ಮಾಲ್‌ಗೆ ಬರದೇ ಇರ್ತಾಳಾ' ಅನ್ನೋ ತರಹ ಅಲ್ವಾ?

ಗಂಗಜ್ಜಿ: ಏನೋ ಗೊತ್ತಿಲ್ಲ… ಹಂಗೇ ಇಟ್ಕೋ.

ಗುಂಡ: ಅದ್ಸರಿ ಅಜ್ಜಿ,. ಆ ದೊಡ್ಡಬಾವಿ ಸೋಮಯ್ಯ ಏನೋ ಹೊಲನೆಲ್ಲಾ ಮಾರಿ ಬೆಂಗಳೂರಿಗೆ ಹೋಗ್ತಾನಂತೆ. ಅವ್ನ ಮಗಂಗೆ ಬೆಂಗಳೂರಿನಲ್ಲಿ ಒಳ್ಳೇ ಕೆಲಸ ಸಿಕ್ಕಿದ್ಯಂತೆ.

ಗಂಗಜ್ಜಿ: ಗೊತ್ತು. ಬುದ್ಧಿ ಇಲ್ಲ ಅವನಿಗೆ. ಅದೇನೋ ಹೇಳ್ತಾರಲ್ಲ..'ಅರಸನ್ನ ನೆಚ್ಕೊಂಡು ಪುರುಷನನ್ನು ಕೈಬಿಟ್ರು' ಅಂತಾ ಹಂಗಾಯ್ತು.

ಗುಂಡ: ಅದೇ 'ಐಟಿ ಕೆಲಸ ನೆಚ್ಚಿಕೊಂಡು ಮೇಟಿ ಕೆಲಸ ಕೈಬಿಟ್ರು' ಅಂದ ಹಾಗೆ.

ಗಂಗಜ್ಜಿ: ಈಗಿನ ಕಾಲದ ಹೈಕ್ಳಿಗೆ ಎಷ್ಟು ಬುದ್ಧಿ ಹೇಳಿದ್ರೂ ತಲೆಗೆ ಹೋಗಲ್ಲ 'ಕೋಣನ ಮುಂದೆ ಕಿಂದರಿ ಬಾರಿಸ್ದಂಗೆ'.

ಗುಂಡ: ಹೌದು. 'ವ್ಯಾಟ್ಸಪ್ ನೋಡ್ತಾ ಇರೋವ್ರ ಮುಂದೆ ವರೀಸ್ ಹೇಳ್ಕೊಂಡಂಗೆ' ಅಂತ.

ಗಂಗಜ್ಜಿ: ಅದೇನು ವ್ಯಾಟ್ಸಪ್ಪೋ.. ನಂಗಂತೂ ಅರ್ಥ ಆಗಲ್ಲ.

ಗಂಗಜ್ಜಿ: ಲೋ ಗುಂಡ… ಮೊನ್ನೆ ನನ್ನ ಹಳೇ ರೇಷ್ಮೆ ಸೀರೆ ಗಾಳಿಯಾಡ್ಲಿ ಅಂತ ಹಿಂದೆ ತಂತಿ ಮೇಲೆ ಹಾಕಿದ್ರೆ ಪಕ್ಕದ ಮನೆ ಜ್ಯೋತಿಲಕ್ಷ್ಮಿ ಎತ್ತಿಟ್ಟುಕೊಂಡಿದ್ಲು. ಏನೋ ನೆಪ ಮಾಡಿ ಅವರ ಮನೆ ಒಳಗೆ ಹೋದಾಗ ಆ ಸೀರೆ ಅಲ್ಲಿತ್ತು. ಕೇಳಿದ್ದಕ್ಕೆ ಮುಖ ಇಷ್ಟಗಲ ಆಯ್ತು. ಗಾಳಿಗೆ ನಮ್ಮನೆ ಕಡೆ ಬಿದ್ದಿತ್ತು. ನಿಮ್ಗೇ ಕೊಡೋಣ ಅಂತ ಎತ್ತಿಟ್ಟಿದ್ದೆ ಅಂತ ಸುಳ್ಳು ಹೇಳಿದ್ಲು. ಅದೇನೋ ಹೇಳ್ತಾರಲ್ಲ… 'ಅಡಿಕೆ ಕದ್ದ ಮಾನ ಆನೆ ಕೊಟ್ಟರೂ ಬಾರದು' ಅಂತ ಹಾಗಾಗಿತ್ತು ಅವಳ ಸ್ಥಿತಿ..

ಗುಂಡ: ನೀ ಹೇಳೋದು ಹೆಂಗಿದೆ ಅಂದ್ರೆ 'ಮೊಬೈಲ್ ಕದ್ದ ಮಾನ ಮರ್ಸಿಡೀಸ್ ಕೊಟ್ರೂ ಬಾರದು' ಅನ್ನೋಹಂಗೆ.

ಗುಂಡ: ಅಜ್ಜಿ.. ಅದೇ ನನ್ನ ಜೊತೆ ಓದ್ತಾ ಇದ್ನಲ್ಲಾ ಪ್ರಕಾಶ. ಅದೇ ತುಂಬಾ ತೀಟೆ. ಅವ್ನು ಏನೋ ಗಲಾಟೆ ಮಾಡ್ಕೊಂಡು ಪೋಲೀಸ್ ಸ್ಟೇಷನ್ ಮೆಟ್ಲು ಹತ್ತಿದ್ನಂತೆ ಹೌದಾ? "

ಗಂಗಜ್ಜಿ: ಹೌದಪ್ಪ,. ಅಯ್ಯೋ ಬಿಡು. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?'

ಗುಂಡ: ಅಂದ್ರೆ 'ಕಿಂಡರ್ಗಾರ್ಟನ್ ನಲ್ಲಿ ಬಗ್ಗದ್ದು ಕಾಲೇಜಿನಲ್ಲಿ ಬಗ್ಗೀತೇ' ಅನ್ನೋ ತರ ಆಯ್ತಲ್ವಾ ಅಜ್ಜಿ.

ಗಂಗಜ್ಜಿ: ನಿನ್ನ ತಂಗಿ ಜೊತೆ ಓದ್ತಾ ಇದ್ಲಲ್ಲಾ ಆ ಕಮಲೀ.. ಅವಳಿಗೆ ಒಳ್ಳೇ ಸಾಹುಕಾರರ ಸಂಬಂಧ ಬಂದಿದ್ಯಂತೆ… ಅವ್ರಪ್ಪಂಗೆ ಒಂದೆಕ್ರೆ ಭೂಮಿ ಕೂಡ ಇಲ್ಲ..ಆದ್ರೂ ತಲೇನೇ ನಿಲ್ತಾ ಇಲ್ಲ. ಅದೇನೋ ಹೇಳ್ತಾರಲ್ಲ, 'ಅಲ್ಪಂಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದ ಹಾಗೆ ಅಂತ.

ಗುಂಡ: ಅದೇ ಅಜ್ಜಿ, 'ಗಮಾರನ ಕೈಗೆ ಮೊಬೈಲ್ ಸಿಕ್ರೆ ಅರ್ಧರಾತ್ರೀಲಿ ಸೆಲ್ಫಿ ತೆಗೊಂಡಂಗೆ'

ಗಂಗಜ್ಜಿ: ಅದ್ಸರೀನೋ ಗುಂಡ. ನಿನಗೆ ಇಪ್ಪತ್ತೆಂಟು ಆಗ್ತಾ ಬಂತು.. ಮದ್ವೆ ಯಾವಾಗ ಮಾಡ್ಕೋಳೋದು.. 'ಕೋಟೆ ಸೂರೆ ಹೋದ ಮೇಲೆ ಬಾಗಿಲು ಹಾಕಿದ್ರು' ಅನ್ನೋ ಹಾಂಗೆ ಆಗ್ಬಾರ್ದು ಅಲ್ವಾ?

ಗುಂಡ: (ನಗುತ್ತಾ) ಅದೇ 'ಥಿಯೇಟರ್‌ನಲ್ಲಿ ಸಿನಿಮಾ ಮುಗಿಯೋ ಹೊತ್ತಿಗೆ ಒಳಗೆ ಹೋದ್ರು' ಅಂದಂಗೆ ಅಂತೀಯಾ ಅಜ್ಜಿ..

ಗಂಗಜ್ಜಿ: ನಿಮ್ಮಮ್ಮಂಗೂ ಹೇಳ್ದೆ. ಇಷ್ಟು ದಿವ್ಸ ನಿಂಗೆ ಬೈದು ಬುದ್ಧಿ ಹೇಳ್ತೀನಿ ಅಂದವ್ಳು ಈಗ ಆವನಿಷ್ಟ ಅಂತಾ ಇದಾಳೆ. ನಿಮ್ಮಮ್ಮ 'ಆರು ಕಾಸು ಕೊಟ್ರೆ ಅತ್ತೆ ಕಡೆ ಮೂರು ಕಾಸು ಕೊಟ್ರೆ ಸೊಸೆ ಕಡೆ'.

ಗುಂಡ: ಓಹೋ.. 'ಆರು ಕೋಟಿ ಕೊಟ್ರೆ ಆ ಪಕ್ಷಕ್ಕೆ ಮೂರು ಕೋಟಿ ಕೊಟ್ರೆ ಈ ಪಕ್ಷಕ್ಕೆ' ಅಲ್ವಾ.

ಗಂಗಜ್ಜಿ: ಆದ್ರೆ ನಿನ್ನ ತಂಗೀಗೇ ಇನ್ನೂ ಕಾಲೇಜು ಮುಂದಿನ ವರ್ಷ ಮುಗಿಯೋದಿದೆ. ಆವಾಗ್ಲೇ ಅವ್ಳಿಗೆ ಮದ್ವೆ ಒಡವೆ ಮಾಡಿಸ್ಬೇಕು ಅಂತಾ ಇದ್ಲು.ನಿಮ್ಮಮ್ಮ. 'ಕೂಸು ಹುಟ್ಟೋಕ್ ಮುಂಚೆನೇ ಕುಲಾವಿ ಹೊಲಿದ್ರು ಅನ್ನೋಹಾಗೆ'.

ಗುಂಡ: ಅಯ್ಯೋ ಎಲ್ಲಿದ್ಯ ಅಜ್ಜಿ..ಅದು ಹಳೇದಾಯಿತು.. 'ಕೂಸು ಹುಟ್ಟೋಕ್ ಮುಂಚೆನೇ ಕಿಂಡರ್ಗಾರ್ಟನ್‌ಗೆ ಅಪ್ಲಿಕೇಶನ್ ಹಾಕಿದ್ರು' ಅನ್ನು

ಗಂಗಜ್ಜಿ: ಗುಂಡ, ಆ ಮೂಲೆಮನೆ ನಂಜಮ್ಮನ ಮಗನಿಗೆ ಸರಿಯಾಗಿ ಕೆಲಸ ಇಲ್ಲಾ ಕಾರ್ಯ ಇಲ್ಲ.. ಶೋಕಿಗೆ ಅವರಮ್ಮನ ಒಡವೆ ಅಡ ಇಟ್ಟು ಬೈಕ್ ತೆಗೊಂಡಿದಾನಂತೆ. ಅದೇನೋ ಹೇಳ್ತಾರಲ್ಲಾ 'ಹೊಟ್ಟೆಗೆ ಹಿಟ್ಟಿಲ್ಲ ಅಂದ್ರೂ ಜುಟ್ಟಿಗೆ ಮಲ್ಲಿಗೆ ಹೂವು' ಹಂಗೆ.

ಗುಂಡ: ಅಂದ್ರೆ 'ಫೀಜ್ ಕಟ್ಟಕ್ಕೆ ದುಡ್ಡಿಲ್ಲ. ಫೈ ಸ್ಟಾರ್ ಹೋಟೆಲಲ್ಲಿ ತಿನ್ನೋ ಶೋಕಿ' ಅನ್ನು.

ಅಷ್ಟು ಹೊತ್ತಿಗೆ ಗುಂಡನಿಗೆ ಹೊಟ್ಟೆ ಬಹಳ ಹಸಿವಾಗಿತ್ತು. ಅದಕ್ಕವನು ಅವನು "ಅಜ್ಜಿ, ಅವ್ರೂಇವ್ರೂ ವಿಷಯ ಮಾತಾಡಿದ್ದು ಸಾಕು. ಹೊಟ್ಟೆ ಹಸೀತಿದೆ. ಊಟ ಬಡಿಸು" ಎಂದ. ಗಂಗಜ್ಜಿ ತಟ್ಟೆ ತರಲು ಅಡುಗೆಮನೆಗೆ ಹೋದಳು...

ಗುಂಡ ಬಿಸಿ ಬಿಸಿ ಊಟವನ್ನು ಚಪ್ಪರಿಸುತ್ತಿರುವಾಗ ಗಂಗಜ್ಜಿ ಮತ್ತೆ ಮಾತಿಗಿಳಿದಳು.

ಗಂಗಜ್ಜಿ: ಅಲ್ವೋ ಗುಂಡ. ನಿಮ್ಮ ಬೆಂಗ್ಳೂರಿನಲ್ಲಿ ಐದಾರು ಅಂತಸ್ತು ಕಟ್ಟಡ ಅಕ್ರಮ ಅಂತ ಒಂದು ಗಂಟೇಲೇ ಕೆಡವಿದ್ರಂತೆ ನಿಜವಾ? ಅದೇನೋ ಹೇಳ್ತಾರಲ್ಲ..'ಕುಂಬಾರನ ಮಡಕೆಗೆ ಒಂದ್ ವರ್ಷ ದೊಣ್ಣೆಗೆ ಒಂದೇ ನಿಮಿಷ' ಅಂತ, ಹಂಗಾಯ್ತು..

ಗುಂಡ: ಹೌದಜ್ಜಿ. 'ಸಾಫ್ಟವೇರ್ ತಯಾರಿಸೋಕೆ ಒಂದ್ ವರ್ಷ ಡಿಲೀಟ್ ಮಾಡೊಕೆ ಒಂದೇ ಸೆಕೆಂಡ್ ಅಂದಂಗೆ'.

ಗಂಗಜ್ಜಿ: ಆದ್ರೂ ಈ ನಗರದೋರ್ಗೆ ಬುದ್ಧಿ ಬರಲ್ಲ.. 'ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗ್ಲಿಲ್ಲ' ಅಂದಂಗೆ.

ಗುಂಡ: ಮತ್ತಿನ್ನೇನು... 'ಮೊಬೈಲ್ ಕೆಳಗೆ ಬಿದ್ದು ಒಡೆದು ಹೋದ್ರೂ ಸಿಂ ಹಾಳಾಗ್ಲಿಲ್ಲ' ಅನ್ನೋ ವಾದ...

ಅಷ್ಟು ಹೊತ್ತಿಗೆ ಗುಂಡ ಊಟ ಮುಗಿಸಿ ಸ್ವಲ್ಪ ಮಲಗ್ತೀನಜ್ಜಿ ನೀನು ಊಟ ಮಾಡು ಎಂದು ಹೇಳಿ ಮಲಗಲು ಹೋದ.

***

ನೆನಪುಗಳೆ, ನೆನಪುಗಳೆ. . .

– ಮಾಲತಿ ಶ್ರೀನಿವಾಸನ್

ನೆನಪುಗಳೆ ನೆನಪುಗಳೆ
ಸಿಹಿ–ಕಹಿ ನೆನಪುಗಳೇ
ಸೆಳೆದೊಯ್ಯ್ಯುವಿರಿ ಮನ
ಚಿಂತನೆಗೆ.
ನಿನ್ನೆಯ ನೆನಪಿಸಿ ಇಂದನು
ಮರೆಸಿ, ನಾಳೆಯಲ್ಲಿ ಮನ ಭ್ರಮಿಸೆ,
ನೆನಪುಗಳೆ ನೆನಪುಗಳೆ
ಸೆಳೆದೊಯ್ಯುವಿರಿ ನನ್ನನು
ಎಲ್ಲಿಗೆ?

ಬಾಲ್ಯದ ತುಂಟಾಟ ಹರೆಯದ
ಹಾರಾಟ, ಮಧ್ಯಂತರದಲಿ ಬರಿ
ತಡಕಾಟ, ಮುಸ್ಸಂಜೆಯಲಿ
ಬೆದಕಾಟ ಬದುಕಲಿ, ಮರ್ಕ
ಮನದ ಚೆಲ್ಲಾಟ.
ನೆನಪುಗಳೆ ನೆನಪುಗಳೆ
ಸೆಳೆದೊಯ್ಯುವಿರಿ ನನ್ನನು
ಎಲ್ಲಿಗೆ?

ಕಾಲನ ತಿರುಗಣೆ ಮನದಾಳದಲ್ಲಿ
ಒಣಗಿದ್ದು ಚಿಗುರಿತು ಹೊಸ
ಹುರುಪಿನಲ್ಲಿ, ಸಂತಸದ ಸಿಹಿ
ನೆನಪಿಸೆ, ಇಂದಿನ ದುಗುಡ ದೂರಾಗಿಸೆ
ನೆನಪುಗಳೆ ನೆನಪುಗಳೆ
ಸೆಳೆದೊಯ್ಯುವಿರಿ ನನ್ನನು
ಎಲ್ಲಿಗೆ?

ಸಿಹಿಯೋ ಕಹಿಯೋ
ಗತವೋ ವಾಸ್ತವ, ದೂರಾಗದಿರಿ
ಮನದಾಳದಿಂದ, ದಾರಿದೀಪ ನಿಮ್ಮ
ಮೆಲುಕು ಮನಕೆ ಸದಾ,
ಶುಷ್ಕತೆಯಲಿ ಸರಿಯದಿರಿ.
ನೆನಪುಗಳೆ ನೆನಪುಗಳೆ
ಸೆಳೆದೊಯ್ಯುವಿರಿ ನನ್ನನು
ಎಲ್ಲಿಗೆ?

***

ಭಕ್ತಿಯ ಹಾದಿ

– ಮಾಲತಿ ಶ್ರೀನಿವಾಸನ್

ಈ ಬದುಕು ಸಾಗಿತ್ತು ಭಕ್ತಿಯ
ಹಾದಿಯಲಿ ಬಂದದೆಲ್ಲವ
ಸರಿಸುತ್ತ ಅತ್ತಿತ್ತ ಬದುವಿನಲಿ

ಅರಿವಾಗಲಿಲ್ಲ ದಶಕಗಳು
ಸರಿದುದರ ಬಿಸುಪು ಮನಕೆ
ಕಾಣದಾ ಕೈ ನಡೆಸಿತ್ತು ಸಂತೈಸಿ,
ಪ್ರತಿ ತಿರುವಿನಲು ಮುದಕೆ.

ರಾಮನೋ ಕೃಷ್ಣನೋ ಶಿವನೋ
ಷಣ್ಮುಖನೋ ಉಮೆ ಶಾರದೆ ಶ್ರೀಯರ
ಶ್ರೀರಕ್ಷೆಯೋ,ಅಂತಃಶಕ್ತಿಯ,ಚಿತ್ತಶುದ್ಧಿ
ಮಾರ್ಗದರ್ಶನವೋ ನಾನರಿಯೆ.
ನಂಬಿಕೆಯ ಶಕ್ತಿಯಲಿ ಪಯಣಿಸಿದೆ.

ಈ ಮುಸ್ಸಂಜೆಯಲಿ ನಿನ್ನ ದರ್ಬಾರಿನಲಿ
ಬೇಡಲೇನಿದೆ ಪ್ರಭು, ನೀ ಬಯಸಿದುದ
ನೀ ಕೊಡುವೆ, ಕಳೆಯೆ ನನ್ನ ಭವವಾ,
ಒಪ್ಪಿಕೊಳ್ಳುವುದೊಂದೆ ನನಗೆ ಆಯ್ಕೆ,
ಸಿದ್ಧಳಾಗಿಹೆ ನಾ ಕಾಯಕಕೆ ,ನೀ ಸೆಳೆದತ್ತ
ಮನವ ನೆಮ್ಮದಿಯ ಗಮ್ಯಕೆ.


***

ಕಥಾ ಪ್ರಪಂಚ

ಅಜ್ಜಿಯ ಕತೆಗಳು

.– ವಿಠ್ಠಲ್ ಇಜೇರಿ

ಸುಮಾರು ೫೦ ವರ್ಷಗಳ ಮೊದಲು. ಅಂದರೆ ನಾವು ಸ್ಕೂಲಿನಲ್ಲಿ ಓದುತ್ತಿರುವಾಗ ಆಗಾಗ *ಭಾರತ ಕೃಷಿ ಪ್ರಧಾನ ದೇಶ, ಪ್ರತೀಶತ ೮೦ರಷ್ಟು ಜನರು ಗ್ರಾಮವಾಸಿಗಳು ಎಂದು ಪ್ರಬಂಧ ಬರೆಯುತ್ತಿದ್ದೆವು. ಅಂದು ಇಷ್ಟೊಂದು ಹಣದ ಹರಿದಾಟ ಇರಲಿಲ್ಲ, ಆದರೆ ಜನರಲ್ಲಿ ಪರಸ್ಪರರಲ್ಲಿ ವಿಶ್ವಾಸ, ಪ್ರೀತಿ, ಸಹಾಯ ಸಹಕಾರಗಳು ಇರುತ್ತಿದ್ದವು. ಜನರು ಬಡವರಾಗಿದ್ದರೂ ಒಳ್ಳೆಯ ಗುಣಗಳಿಂದಾಗಿ ಬಡತನದ ನೆನಪು ಯಾರಿಗೂ ಇರುತ್ತಿರಲಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣ ಎಲ್ಲರೂ ಅಜ್ಜ, ಅಜ್ಜಿಯರ ಸಂಪರ್ಕದಲ್ಲಿ ಇರುತ್ತಿದ್ದರು, ಅಜ್ಜ, ಅಜ್ಜಿಯರು ಬೆಳೆಯುವ ಮಕ್ಕಳಿಗೆ ಸದಾಚಾರದ, ಪ್ರೇಮ, ವಿಶ್ವಾಸ, ಸಹಾಯ ಸಹಕಾರಗಳನ್ನು ಸರಳ ಸುಂದರ ಕತೆಗಳ ಮೂಲಕ ಹೇಳುತ್ತಿದ್ದರು. ಅಜ್ಜಿಯರ ಆತ್ಮೀಯತೆ ಮೊಮ್ಮಕ್ಕಳೊಡನೆ ಅವರನ್ನು ರಂಜಿಸುತ್ತ ಅವರ ಮಾನಸಿಕ ಸ್ಥೈರ್ಯ ಹೆಚ್ಚಿಸುತ್ತಿದ್ದರು. ಅವರು ಹೇಳುವ ರಮ್ಯ ಕತೆಗಳು ಎರಡು ಜನರೇಷನ್ನುಗಳ ಮಧ್ಯೆ ಇರುವ ಮಹಾಗೋಡೆಯನ್ನು ಒಡೆದುಹಾಕಿಬಿಡುತ್ತಿದ್ದವು.



ಆ ಸಮಯದಲ್ಲಿ ಕೂಡು ಕುಟುಂಬಗಳು ಸಾಮಾನ್ಯವಾಗಿದ್ದವು. ಬೇಸಿಗೆ ರಜೆ ಬಂದರೆ ಮಕ್ಕಳಿಗೆ ಅಜ್ಜಿಯ ಮನೆಗೆ ಹೋಗುವ ಸಂಭ್ರಮ. ಅಜ್ಜಿ ಮನೆಯಲ್ಲಿ ಕೈತುತ್ತು ಹಾಕುತ್ತ ರಾಮಾಯಣ, ಮಹಾಭಾರತ, ಪಂಚತಂತ್ರದ ಕತೆಗಳನ್ನು ಹೇಳುತ್ತಿದ್ದಳು. ತಾತ ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು. ಅವು ಮಕ್ಕಳಿಗೆ ಅರಿವಿಲ್ಲದಂತೆ ಸಂಸ್ಕಾರವನ್ನು ನೀಡುತ್ತಿದ್ದವು. ಯಾರಿಗೆ ಆಗಲಿ ಉಪದೇಶವನ್ನು ಕಥೆಗಳ ರೂಪದಲ್ಲಿ ಹೇಳಿದರೆ ಅವರು ಸ್ವೀಕರಿಸುವ ರೀತಿ ಹೆಚ್ಚು ಸಕಾರಾತ್ಮಕವಾಗಿರುತ್ತದೆ. ಕತೆಗಳ ಮೂಲಕ ಜೀವನ ಪಾಠಗಳನ್ನು ತಿಳಿಸಿದಾಗ ಅವರು ಅದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಬದುಕಿನ ಅನೇಕ ಹಂತಗಳಲ್ಲಿ ಆ ಕತೆಗಳು ನೆನಪಾಗುತ್ತವೆ. ಕಥೆಗಳ ಪ್ರಾಮುಖ್ಯತೆ ನಮ್ಮ ಜೀವನದಲ್ಲಿ ಬಹಳಷ್ಟು ಇದೆ ಮತ್ತು ಜೀವನದಲ್ಲಿ ಹಾಸು ಹೊಕ್ಕಾಗಿದೆ. ಮಕ್ಕಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ, ತಲೆಯ ಮೇಲೆ, ಬೆನ್ನಿನ ಮೂಲಕ ಸ್ಪರ್ಶ ಮಾಡುತ್ತಾ ಕತೆ ಹೇಳಿದಾಗ, ಆ ಮಾತು ಮನಸ್ಸಿಗೆ ತಾಗಿ ನೈತಿಕ ಮೌಲ್ಯಗಳಾಗಿ ನಮ್ಮ ಬಾಳಿನ ದಾರಿ ದೀವಿಗೆಗಳಾದವು.

ಮಕ್ಕಳ ಮನಸ್ಸು ಮಲ್ಲಿಗೆಯಂತೆ, ಎಳೆ ವಯಸಿನಲ್ಲಿ ಏನು ಹೇಳಿದರೂ ಗಟ್ಟಿಯಾಗಿ ನಿಲ್ಲುತ್ತದೆ. ಅಜ್ಜಿ ಹೇಳುವ ನೀತಿಯ ಕತೆಗಳು ಮಕ್ಕಳ ಮನಸ್ಸಿನಲ್ಲಿ ಗಟ್ಟಿಯಾದ ನೈತಿಕ ನೆಲೆಗಟ್ಟಿಗೆ ಕಾರಣವಾಗುವವು. ಈಗ ಸಮಾಜದ

ರಚನೆ ಬದಲಾಗಿದೆ. ಒಟ್ಟು ಕುಟುಂಬಗಳು ತುಂಬಾ ಕಡಿಮೆ. ಅದರೊಂದಿಗೆ ಕುಟುಂಬದಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ನೀಡುವ ಅಜ್ಜಿಯರೂ ಕಡಿಮೆ. ಮಕ್ಕಳು ಅಂತರ್ಜಾಲ, ಮೊಬೈಲ್‌ಗಳತ್ತ ಮುಖ ಮಾಡಿದ್ದಾರೆ. ಈ ಪರಿಸ್ಥಿತಿ ಬದಲಾಗಿ ಮುಂಚಿನ ಕೆಲವು ಉತ್ತಮ ಅಂಶಗಳನ್ನು ಕುಟುಂಬದಲ್ಲಿ ಅಳವಡಿಸಿಕೊಳ್ಳಬೇಕು.

ಈಗ ಒಂದು ಅಜ್ಜಿ ಹೇಳದ ಕತೆ:

ಪ್ರಶ್ನೆಗೆ ಪ್ರಶ್ನೆ

ಒಂದು ಊರು, ಅಲ್ಲಿ ರಂಗಣ್ಣ ಎಂಬ ಯುವಕ ಮಾರುಕಟ್ಟೆಯತ್ತ ಹೊರಟಿದ್ದ. ಎದುರು ಸಿಕ್ಕ ಅವನ ಗೆಳೆಯ ಸಿದ್ದಣ್ಣ, "ರಂಗಣ್ಣ. ಎಲ್ಲಿಗೆ ಹೊರಟಿರುವಿ?" ಅಂದ. ರಂಗಣ್ಣ "ಕಾಲು ಎಲ್ಲಿಗೆ ಕರೆದುಕೊಂಡು ಹೋಗುತ್ತದೆಯೋ ಅಲ್ಲಿಗೆ ಹೋಗುತ್ತೇನೆ" ಅಂದ. ಸಿದ್ದಣ್ಣನಿಗೆ ಈ ರೀತಿಯ ಉತ್ತರ ಸಮಾಧಾನ ಅನಿಸದಿದ್ದರೂ, ಏನೂ ಹೇಳಲು ತೋಚದೆ ಸುಮ್ಮನೆ ಬಂದು ಮನೆಯಲ್ಲಿಯ ಅಜ್ಜಿಯ ಬಳಿ ಈ ವಿಚಾರ ಹೇಳದ. ಅಜ್ಜಿ "ರಂಗಣ್ಣ ನಿನ್ನ ಕಾಲು ಇಲ್ಲ ಎಂದು ತಿಳಿದುಕೋ. ಈಗ ಹೇಳು. ಎಲ್ಲಿಗೆ ಹೋಗುತ್ತಿದ್ದೀಯಾ? ಹೀಗೆ ಮರುಪ್ರಶ್ನೆ ಹಾಕಬಹುದಾಗಿತ್ತು" ಎಂದಳು. ಮರುದಿನ ಸಿದ್ದಣ್ಣನಿಗೆ ಪುನಃ ರಂಗಣ್ಣ ಎದುರಾದ ಸಿದ್ದಣ್ಣ "ರಂಗಣ್ಣ, ಎತ್ತ ಹೊರಟಿರುವಿ?, ನನಗೆ ಗೊತ್ತು ನಿನ್ನ ಕಾಲು ಕರೆದುಕೊಂಡು ಹೋದಕಡೆಗೆ ಹೋಗುತ್ತೀದ್ದೀಯಾ," ಎಂದು ಪ್ರಶ್ನೆ ಮತ್ತು ಉತ್ತರ ತಾನೇ ಹೇಳದ. ರಂಗಣ್ಣ "ಇಲ್ಲಪ್ಪ, ನಾನು ಗಾಳಿ ಬೀಸಿದತ್ತ ಹೋಗ್ತಾ ಇದ್ದೇನೆ" ಎಂದು ರಂಗಣ್ಣ ಮಾತಿನ ವರಸೆ ಬದಲಿಸಿದ. ಸಿದ್ದಣ್ಣನಿಗೆ ಸಮಯೋಚಿತ ಮಾತು ಕಷ್ಟ, ಮತ್ತೆ ಅಜ್ಜಿಯ ಬಳಿ ಅಂದು ನಡೆದುದು ಹೇಳದ. ಅಜ್ಜಿ "ಲೋ ಸಿದ್ದಾ, ಅವನಿಗೆ ಗಾಳಿಯೇ ಬೀಸಿಲ್ಲ ಅಂದುಕೋ ಈಗ ಹೇಳು ಯಾವ ಕಡೆಗೆ ಹೋಗ್ತಾ ಇದ್ದೀ? ಎಂದು ಪ್ರಶ್ನೆ ಮಾಡಬೇಕಿತ್ತು" ಎಂದು ಕುಕ್ಕಿದಳು. ಸಿದ್ದಣ್ಣ ಈ ಸಲ ರಂಗಣ್ಣ ಸಿಕ್ಕಾಗ ಸರಿಯಾಗಿ ಪ್ರಶ್ನಿಸಬೇಕು ಅಂದುಕೊಂಡ. ಎರಡು ದಿನ ಕಳೆದಿರಲಿಲ್ಲ, ಸಿದ್ದಣ್ಣನಿಗೆ ರಂಗಣ್ಣ ಸಿಕ್ಕ. ಅವನಿಗೆ ಸಿದ್ದಣ್ಣ ಅದೇ ಪ್ರಶ್ನೆ "ರಂಗಣ್ಣ ಎಲ್ಲಿಗೆ ಹೊರಟಿರುವಿ?" ಎಂದು ಕೇಳಿ, "ಅದೇ ಕಾಲು ಕರೆದುಕೊಂಡ ಕಡೆಗೆ, ಇಲ್ಲವೇ ಗಾಳಿ ಬೀಸಿದತ್ತ, ಅಲ್ಲವೇ?" ಅಂದ. ರಂಗಣ್ಣ "ನಾನು ತರಕಾರಿ ತರಲು ಮಾರುಕಟ್ಟೆಗೆ ಹೋಗುತ್ತಿದ್ದೇನೆ" ಎಂದು ಹೇಳದ. ಸಿದ್ದಣ್ಣನಿಗೆ ತನ್ನ ಜಾಣತನ ತೋರಿಸುವ ಅವಕಾಶವೇ ಸಿಗಲಿಲ್ಲ.

ನಮಗೆ ನಮ್ಮದೇ ಆದ ಬುದ್ಧಿವಂತಿಕೆ ಇರಬೇಕು, ಬೇರೆಯವರು ಹೇಳಿಕೊಟ್ಟದ್ದು ನಮ್ಮ ಸಮಯಕ್ಕೆ ಆಗದು.

(ಚಿತ್ರ ಕೃಪೆ: ಅಂತರ್ಜಾಲ)

***

ಚಾಮುಂಡೇಶ್ವರಿ ಲಾವಣಿ

(ದಸರಾ ಉತ್ಸವದ ಪ್ರಯುಕ್ತ)

– ರತ್ನ

ಕನ್ನಡದೀ ನಾಡಿನ ವೈಭವವ ಹೇಳುತ್ತೀನಿ
ಕುಂತು ಕೇಳಿ ಮಂದಿ ನೀವು ಚಂದದಿಂದಲಿ
ಬೇಲೂರು ಹಳೆಬೀಡು ಕೊಲ್ಲೂರು ಶೃಂಗೇರಿ
ಗೊಮ್ಮಟನ ಬೆಟ್ಟ ಮತ್ತೆ ಹಾಸನಾಂಬೆಯು
ದೇವಿ ಮಂಗಳಾಂಬೆಯು (1)

ಕಡೆಗೋಲ ಕೃಷ್ಣನೂರು ಸತ್ಯಸಾಕ್ಷಿ ದೇವಸ್ಥಳ
ಇಡಗುಂಜಿ ಹೊರನಾಡು ಮಲ್ಲಿಕಾರ್ಜುನ
ಬಿಡದೆ ನೋಡಿ ರಂಗನಾಥ ಶ್ರೀಕಂಠೇಶ್ವರನ ಪಾದ
ಅಡ್ಡ ಬಿದ್ದು ಶರಣೆನ್ನಿ ಹರಿಹರಗೆ
ಬನಶಂಕರವ್ವಗೆ(2)

ಗೇರುಸೊಪ್ಪೆ ಭರಚುಕ್ಕಿ ಎಡಮುರಿ ಬಲಮುರಿ
ಮತ್ತದೆಷ್ಟೊ ಧಬಧಬೆ ಹೊಳೆಗಳನು
ಕನ್ನಡದ ಗಂಗವ್ವ ಕಾವೇರಿ ತುಂಗವ್ವರು
ಹೇಮಾವತಿ ಶರಾವತಿ ಕಪಿಲೆಯರ
ಲೋಕಪಾವನಿಯರ (3)

ಬಿಳಿಗಿರಿರಂಗನನ್ನು ಮಲೆಮಹದೇಶ್ವರನ
ಗೋಪಾಲಸ್ವಾಮಿ ಬೆಟ್ಟ ಕೊಡಚಾದ್ರಿಯ
ಶಿವಗಂಗೆ ನಂದಿಯದ್ರಿ ಸ್ಕಂದದೇವ ಪರ್ವತವ
ಮುಳ್ಳಯ್ಯನಗಿರಿ ನೋಡಿ ಮಹಿಷೂರನು
ನಾಡಹಬ್ಬದೂರನು (4)

ಮೈಸೂರಿನ ಒಡೆಯರ ಕುಲದೇವಿ ಚಾಮುಂಡಿ
ನಿಂತು ಹರಸುತಿಹಳಲ್ಲಿ ಯುಗದಿಂದಲಿ
ಯಾಕೆ ಹೇಗೆ ಬಂದಳಲ್ಲಿ ಯಾವ ಕಾರ್ಯಗೈದಳಲ್ಲಿ
ಕತೆಯ ಕೇಳಿ ಭಕುತಿಯಿಂದ ಶರಣೆನ್ನಿರಿ
ಅಮ್ಮಾ ಕಾಪಾಡೆನ್ನಿರಿ (5)

ಕೋಣನಂಥ ರಕ್ಕಸನು ಮಂದಮತಿ ಮಹಾಕೋಪಿ
ಬ್ರಹ್ಮನಿಂದ ವರವ ಪಡೆದು ಮೂರುಲೋಕವ
ಕಾಡಿಸುತ್ತ ಪೀಡಿಸುತ್ತ ಕಂಡವರ ಕೊಲ್ಲುತಿರೆ
ಮೊರೆಯಿಟ್ಟರೆಲ್ಲ ಅಳುತ ನಾರಾಯಣಗೆ
ಮತ್ತೆ ಶಂಕರನಿಗೆ (6)

ಲೋಕಪಾಲಕರಾದ ಪರಬ್ರಹ್ಮ ವಿಷ್ಣು ಪರಶಿವನ
ತೇಜವೊಂದು ದೇವಿಯಾಗೆ ಭಕುತಿಯಿಂದಲಿ
ತಮ್ಮ ಶಕ್ತಿಯಿತ್ತು ನಮಿಸಿ ಕಾಪಾಡೆಂದು ಬೇಡುತಿರೆ
ದೇವವೃಂದ ಹರುಷದಿಂದ ಪೂಜೆಗೈದರು
ತಾಯೆ ಪಾಲಿಸೆಂದರು (7)

ಕೋಣಾಸುರ ವಧೆಗಾಗಿ ಕೈದುಗಳನಿತ್ತರೆಲ್ಲ
ಘೋರಸಿಂಹವೊಂದನೇರಿ ದೇವಿ ನಿಲ್ಲಲು
ಮೀರಿದೊಂದು ಹರುಷದಿಂದ ದೇವದೇವ ದೇವರೆಲ್ಲ
ಉಘೇಉಘೇ ಎಂದೆನುತ ಘೋಷಗೈದರು
ಬಿಡದೆ ಸಲಹೆಂದರು (8)

ಎಂಥಾ ಚೆಲುವೆ ಕೋಮಲಾಂಗಿ ಸಮರವೊಂದು ಆಟವಲ್ಲ
ವರಿಸು ಎಮ್ಮ ಅರಸನನ್ನು ರಾಣಿಯಾಗುವೆ
ಸಗ್ಗಕ್ಕೆಲ್ಲ ಲಗ್ಗೆ ಹಾಕಿ ಕೊಳ್ಳೆ ಹೊಡೆದ ಸಂಪದವ
ನಿನ್ನ ಪಾದಕ್ಕಿಡುತ ಪಟ್ಟಮಹಿಷಿ ಮಾಡುವ
ನಿನಗೆ ದಾಸನಾಗುವ (9)

ಮಹಿಷಾಸುರನ ಸೇನಾನಿಯ ಮಾತು ಕೇಳಿ ಚಾಮುಂಡಿ
ಕೆರಳಿ ಸಿಡಿದು ರೋಷದಿಂದ ಅಬ್ಬರಿಸಲು
ನೆಗೆದು ಹಾರಿ ಚೀಕರದಿ ಘರ್ಜಿಸಲಾ ದೈತ್ಯಸಿಂಹ
ಭುವಿಯು ನಡುಗಿಹೋಯ್ತು ಗಗನ ಬಿರಿಕು ಬಿಟ್ಟಿತು
ಅಣೆಕಟ್ಟೆ ಒಡೆಯಿತು(10)

ಉಗ್ರನಾಗಿ ವ್ಯಗ್ರನಾಗಿ ನುಗ್ಗಿ ಬರುತ ರಕ್ಕಸನು
ಜಗ್ಗಿ ದೇವಿಯನ್ನು ನೆಲಕೆ ಕೆಡವಿಕೊಳ್ಳುವೆ
ಕೊರಳ ಮೆಟ್ಟಿ ಶಿರವ ಕಡಿದು ಮಾರಿ ಮಸಣಿಗೌತಣವ
ಕೊಡುವೆನೆನುತ ಕ್ರುದ್ಧನಾಗಿ ಖಡುಗ ಹಿರಿದನು
ದೇವಿ ಮೇಲೆ ಹಾಯ್ದನು (11)

ಮುಂದೆ ನಡೆದ ಘೋರ ಯುದ್ಧ ಹಿಂದೆ ಯಾರೂ ಕಂಡುದಿಲ್ಲ
ಬೆಟ್ಟಗಳ ಘಟ್ಟಣೆಯೊ ಸಿಡಿಲ ಸಿಡಿತವೊ
ಮಂದೆ ಮಂದೆ ರಕ್ಕಸರ ಕೊಂದುಕೊಂದು ಬಿಸುಟಿರೆ
ಮಹಿಷ ಕೆರಳಿ ಭಾರಿ ಸಲಗವಾಗಿ ಹಾಯ್ದನು
ಒಮ್ಮೆ ಸಿಂಹವಾದನು(12)

ಸಿಂಹವೇನು ಸಲಗವೇನು ದೇವಿಯೆದುರು ಮಶಕವಲ್ತೆ
ಶೂಲದಿಂದ ಕೊರಳನಿರಿದು ಜನ್ಮ ಕಳೆದಳು
ಪರಮ ಪಾಪಿಯಾದರೇನು ಮರಣ ದೇವಿಯಿಂದಲಾಗೆ
ತರಿದ ರುಂಡ ಪಾವನವಾಗಿ ಮುಕುತಿ ಪಡೆಯಿತು
ದುರ್ಗಿ ಕಂಠಕ್ಕಾಯಿತು(13)

ಮೇಲೆ ಮುಗಿಲಿನಲ್ಲಿ ಬಹಳ ತವಕದಿಂದ ಕಾಯುತಿದ್ದ
ಸುರರಗಡಣ ಹರುಷದಿಂದ ಹೂವ ಸುರಿಸಿತು
ತಿರೆಯ ಜನರೂ ಭಕುತಿಯಿಂದ ನಿಂತು ಕಾಪಾಡೆನುತಿರೆ
ಮಹಿಷೂರಲ್ಲೆ ನೆಲಸಿ ತಾಯೆ ಪೂಜೆಗೊಂಡಳು
ನಿರುತ ಕಾಯುತಿರುವಳು (14)

ವಧಿಸಿ ಅಸುರನ ಮುದವ ತಂದ ತಾಯಿ ಚಾಮುಂಡೇಶ್ವರಿಗೆ
ಶಿರವ ಬಾಗಿ ಹರುಷದಿಂದ ವರುಷ ವರುಷವು
ಉತ್ಸವವ ನಡೆಸುತಿರೆ ಸಂಭ್ರಮದ ಉಬ್ಬಿನಿಂದ
ವಿಶ್ವದೆಲ್ಲ ಮೂಲೆಯಿಂದ ಜನರು ಬರುವರು
ಬೆರಗು ತುಂಬಿಕೊಂಬರು (15)

ಆಹಾ ಜಂಬುಸವಾರಿಯ ವೈಭವವು ಒಂದೆ ಸಾಕು
ಮೆರುಗನೀವ ಸಂಗೀತ ನೃತ್ಯ ನಾಟಕ
ಕ್ರೀಡಾಕೂಟ ಕುಸ್ತಿಯಾಟ ವಸ್ತುಪ್ರದರ್ಶಿನಿ
ಒಂದೆ ಎರಡೆ ನೋಡಿ ಸವಿದು ಮನವು ತಣಿಯದು
ಜನುಮ ಸಾರ್ಥವೆನಿಪುದು (16)

***

'ನನ್ನಮ್ಮನ ಅಲ್ಮೇರಾ'

– ರಘುರಾಂ ಎಸ್.ವಿ.

ಎಲ್ಲರ ಮನೆಯಲ್ಲಿ ಇರುವಂತೆ ನನ್ನ ಅಮ್ಮನ ಹತ್ತಿರ ಕೂಡ ಗಾಡ್ರೆಜ್ ಅಲ್ಮೇರಾ ಇತ್ತು. ಬನ್ನಿ ನನ್ನಮ್ಮನ ಬೀರು ತೋರಿಸುತ್ತೇನೆ. ಈ ಬೀರು ನೋಡಲು ನೀವು ಕೆಳಗೆ ಕೂರಬೇಕು. ಏಕೆಂದರೆ ಆ ಬೀರುವಿನ ಎತ್ತರ ಬರೀ ನಾಲ್ಕು ಅಡಿ ಮಾತ್ರ. ಅಮ್ಮ ಕೂಡ ಸಾಕಷ್ಟು ಎತ್ತರವಿದ್ದರು. ಅವರೂ ಕೂತುಕೊಂಡೇ ಬೀರುವಿನ ಬಾಗಿಲು ತೆಗೆಯಬೇಕಿತ್ತು. ಅಮ್ಮನ ಬೀರುವಿನ ಕೀ ಅವರ ಸರದಲ್ಲೇ ಯಾವಾಗಲೂ ಇರುತ್ತಿತ್ತು. ಬೀರುವಿನ ಬಾಗಿಲು ತೆಗೆಯುವುದೂ ಅವರೇ, ಹಾಕುವುದೂ ಅವರೇ. ಏಕೆಂದರೆ ಅದರಲ್ಲಿರುವುದೆಲ್ಲಾ ಬೆಲೆಬಾಳುವ ವಸ್ತುಗಳೇ!

ನೋಡಿ, ಮೇಲುಗಡೆ ಖಾನಿಯಲ್ಲಿ ಮೊದಲಿಗೆ ಒಂದು ಸಣ್ಣ ಪರ್ಸ್ ಕಾಣುತ್ತಿದೆಯಲ್ಲ. ಆ ಪರ್ಸಿನಲ್ಲಿ ಒಂದು ಬಂಗಾರದ ಬಣ್ಣದ ಡಬ್ಬಿಯಿದೆ. ಈ ಡಬ್ಬಿ ನೋಡಿದ ತಕ್ಷಣ ನಿಮಗೆ ಗೊತ್ತಾಗುತ್ತದಲ್ಲ ಇದೊಂದು ವಾಚ್ ಇಡುವ ಡಬ್ಬಿಯೆಂದು. ಈ ಡಬ್ಬಿಯಲ್ಲಿ ಅಮ್ಮನ ಕೈಗಡಿಯಾರ ಯಾವಾಗಲೂ ಮಲಗಿರುತ್ತಿತ್ತು! ಅಮ್ಮ ಎಲ್ಲಾದರೂ ಹೊರಗಡೆ ಹೋಗುವಾಗ ಮಾತ್ರ ಹೊರಗೆ ಬರುತ್ತಿತ್ತು. ಈ ವಾಚೂ ಬಂಗಾರದ ಬಣ್ಣದ್ದೇ. ಅದಕ್ಕೆ ಕೀ ಕೊಟ್ಟು ಎಡಗೈಗೆ ಕಟ್ಟಿಕೊಳ್ಳುತ್ತಿದ್ದರು. ಆಗ ಎರಡೂ ಕೈಗಳಿಗೆ ಬಳೆ ಹಾಕುತ್ತಿದ್ದ ಕಾಲ. ಅವರು ಯಾವಾಗಲೂ ಧರಿಸಿರುತ್ತಿದ್ದ ಒಂದು ಡಜನ್ ಗಾಜಿನ ಬಳೆಗಳ ಮಧ್ಯೆ ಅದೂ ಒಂದು ಅಷ್ಟೆ. ಅದು ಅವರ ಮದುವೆಯಲ್ಲಿ ಅಪ್ಪ ಕೊಟ್ಟಿದ್ದಂತೆ. ಹಾಗಾಗಿ ಅದು ವಿಶೇಷ. 1942ರ ವಾಚು ರೀ ಅದು. ನನಗೆ ಗೊತ್ತು ಅದು ನಡೆಯುತ್ತಿತ್ತೇ? ಎಂದು ಪ್ರಶ್ನೆ ಕೇಳುತ್ತಿದ್ದೀರಿ, ಅಲ್ಲವಾ. ಅದಕ್ಕೆ ಕೀ ಕೊಟ್ಟು, ಆಗಿನ ಟೈಮಿಗೆ ಮುಳ್ಳು ತಿರುಗಿಸಿ ಕೈಗೆ ಕಟ್ಟಿಕೊಂಡರೆ ಅದರ ಕೆಲಸ ಮುಗೀತು. ಅಮ್ಮ ಯಾವಾಗಲೂ ಅದರಲ್ಲಿ ಟೈಂ ನೋಡುತ್ತಿರಲಿಲ್ಲ ಬಿಡಿ.

ಆ ಪರ್ಸ್ ಪಕ್ಕದಲ್ಲಿ ಇನ್ನೊಂದು ಪರ್ಸ್ ಇದೆಯಲ್ಲವೇ? ಇದು ನೋಡಿ ಸುಮಾರು ಆರಿಂಚು ಉದ್ದ, ಮೂರಿಂಚು ಅಗಲದ ಪರ್ಸ್. ಒಳಗಡೆ ಮಕಮಲ್ಲ ಬಟ್ಟೆಯ ಲೈನಿಂಗ್ ಕೂಡ ಇದೆ. ಈ ಪರ್ಸ್ನಲ್ಲಿ ಒಂದು ಸ್ವಲ್ಪ ಹಳೆಯ ನಾಣ್ಯ ಆಣೆ, ತಾಮ್ರದ ಕಾಸುಗಳು ಇವೆ. ಕೆಲವೊಮ್ಮೆ ಈ ತಾಮ್ರದ ಕಾಸುಗಳನ್ನು ಆಚಾರಿಗೆ ಕೊಟ್ಟು ಅಮ್ಮ ಗಂಡುಮಕ್ಕಳಿಗೆ ಉಂಗುರ ಮಾಡಿಸಿದ್ದುಂಟು. ಅಪ್ಪ ಪೇಟೆಯಿಂದ ಬಂದಮೇಲೆ ಶರ್ಟ್ ಅಥವಾ ಜುಬ್ಬವನ್ನು ಬೀರುವಿನ ಪಕ್ಕದಲ್ಲಿ ಗೋಡೆಯ ಮೇಲಿರುವ ಹುಕ್‌ನಲ್ಲಿ ತೂಗುಹಾಕುತ್ತಿದ್ದರು. ಆ ಶರ್ಟಿನಲ್ಲಿರುವ ಚಿಲ್ಲರೆ ಅಮ್ಮನ ಬೀರು ಸೇರುತ್ತಿತ್ತು. ಅಪ್ಪನಿಗೆ ಅದು ಗೊತ್ತಾಗುತ್ತಿರಲಿಲ್ಲವೋ ಅಥವಾ ಗೊತ್ತಾದರೂ ಸುಮ್ಮನೆ ಇರುತ್ತಿದ್ದರೋ ನನಗೆ ಗೊತ್ತಿಲ್ಲ! ಆದರೆ ಅಪ್ಪ ಆಗಿನ ಕಾಲದಲ್ಲೂ ಅಮ್ಮನನ್ನು ಬೈದಿದ್ದು ಒಂದು ದಿನವೂ ನಾನು ನೋಡಿಲ್ಲ ಬಿಡಿ. ಅಪ್ಪನ ಜೇಬಿನಲ್ಲಿ ಅಪರೂಪಕ್ಕೆ ಒಂದು ರೂಪಾಯಿ ಕಾಯಿನ್ ಸಿಕ್ಕರೆ ಮಾತ್ರ ಅಮ್ಮ ಬಿಡುತ್ತಿರಲಿಲ್ಲ. ಆ ಕಾಯಿನ್‌ಗಳು ದೀಪಾವಳಿಯಲ್ಲಿ ಲಕ್ಷ್ಮೀ ಪೂಜೆಯ ದಿನ ಹೊರಗೆ ಬರುತ್ತಿದ್ದವು. ನಂತರ ಮತ್ತೆ ಬೀರು ಒಳಗೆ ಹೋಗುತ್ತಿತ್ತು. ಆ ಒಂದು ರೂಪಾಯಿ ಕಾಯಿನ್ ತುಂಬ ದಪ್ಪ ಇತ್ತು. ಈ ಕಾಯಿನ್‌ಗಳನ್ನು ಜನ ಕರಗಿಸುತ್ತಿದ್ದಾರೆ ಎಂದು ವಿಷಯ ತಿಳಿದಾಗ, ಸರ್ಕಾರ ಇದನ್ನು ಹಿಂತೆಗೆಯಲು ನಿರ್ಧಾರ ಮಾಡಿತು! ಆಗ ಅಮ್ಮ ಮನಸ್ಸಿಲ್ಲದ ಮನಸ್ಸಿನಿಂದ ಹೊರಗೆ ತೆಗೆದುಕೊಟ್ಟರು. ಎಣಿಸಿದಾಗ ಸುಮಾರು 228 ರೂಪಾಯಿ ಇತ್ತು! ನಂತರ ಬಂದಿದ್ದೆ 20 ಪೈಸೆ ಬಂಗಾರದ ಬಣ್ಣದ ಕಾಯಿನ್. ಅದನ್ನೂ ಬಿಡುತ್ತಿರಲಿಲ್ಲ. ಅದರಲ್ಲೂ ಕಾಲುಗೆಜ್ಜೆ ಮಾಡಿಸಿ ಅಕ್ಕಂದಿರಿಗೆ ಕೊಟ್ಟಿದ್ದರು.

ನೋಡಿ ಅಲ್ಲೇ ಸ್ವಲ್ಪ ಬಲಗಡೆ. ಆ ಡಬ್ಬಿಯೇ ಅಮ್ಮನ ಮೇಕಪ್ ಬಾಕ್ಸ್. ಇದನ್ನು ನೋಡದೇ ಹೋಗುವುದು ಹೇಗೆ? ಅದೊಂದು ಸ್ಟೀಲ್ ಡಬ್ಬಿ. ಒಂದು ಅರ್ಥದಲ್ಲಿ ಇದೊಂದು ಪುಟಾಣಿ ಟ್ರಂಕ್ ಎಂದು ಹೇಳಬಹುದೇನೊ.

ನೋಡಿ ಈ ಕಡೆ ಇರುವುದೇ ಹಲ್ಲುಗಳು ಒತ್ತಾಗಿರುವ ಜೆಸ್ಸೂರ್ ಬಾಚಣಿಗೆ. ಅಮ್ಮ ಇದನ್ನು ಮಕ್ಕಳ ತಲೆ ಹೇನು ತೆಗೆಯಲು ಮಾತ್ರ ಉಪಯೋಗಿಸುತ್ತಿದ್ದರು! ಇನ್ನೊಂದು ಮರದ ಬಾಚಣಿಗೆ ಈ ಕಡೆಯಿದೆಯಲ್ಲ. ಅದನ್ನು ಉಪಯೋಗಿಸಿದ್ದನ್ನು ನಾನಂತೂ ನೋಡಿಲ್ಲ. ಸ್ವರ್ಣಗೌರಿ ಪೂಜೆಯಲ್ಲಿ ಈ ತರಹದ ಬಾಚಣಿಗೆಯಿದೆ. ಇದು ನೋಡಿ, ದಿನನಿತ್ಯ ಉಪಯೋಗಿಸುವ ಉದ್ದದ ಬಾಚಣಿಗೆ. ಅದರ ಪಕ್ಕದಲ್ಲಿ ಒಂದು ಅಂಗೈ ಅಗಲದ ಚಿತ್ತಾರ ಮಾಡಿರುವ ರಟ್ಟಿನ ಬಾಕ್ಸ್ ಇದೆಯಲ್ಲವೇ? ಅದರಲ್ಲೇ ಇರುವುದು ಒಂದು ಕನ್ನಡಿ. ಅದನ್ನು ಬೇಕಾದಾಗ ನೆಲದ ಮೇಲೆ ಕೂರಿಸಬಹುದಾಗಿತ್ತು. ಅಮ್ಮ ಮೊದಲು ಅಫ್ಗನ್ ಕೋಲ್ಡ್ ಕ್ರೀಮ್ ಹಚ್ಚಿ ಕೊಳ್ಳುತ್ತಿದ್ದರು. ನಂತರ ವ್ಯಾಸಲೀನ್ ಕ್ರೀಮ್ ಇರುವ ಡಬ್ಬಿ ಹೊರ ತೆಗೆಯುತ್ತಿದ್ದರು. ಒಂದು ಚೂರು ವ್ಯಾಸಲೀನ್ ತೆಗೆದುಕೊಂಡು ಹಣೆಯ ಮಧ್ಯದಲ್ಲಿ ಇಟ್ಟುಕೊಳ್ಳುತ್ತಿದ್ದರು. ನಂತರ ಪುಡಿ ಕುಂಕುಮದ ಸಣ್ಣ ಡಬ್ಬಿ ಹೊರತೆಗೆದು ಆ ವ್ಯಾಸಲೀನ್ ಹಚ್ಚಿರುವ ಜಾಗದ ಮೇಲೆ ಸುಮಾರು ಒಂದು ಕಾಸಿನಷ್ಟು ಅಗಲದ ಕುಂಕುಮ ಇಟ್ಟುಕೊಳ್ಳುತ್ತಿದ್ದರು. ಹೊರಗಡೆ ಹೋಗುವುದಾದರೆ ಮಾತ್ರ ಪಾಂಡ್ಸ್ ಪೌಡರ್ ಹಚ್ಚುತ್ತಿದ್ದರು. ಸಣ್ಣ ಪೌಡರ್ ಡಬ್ಬಿಯಿಂದ ಪೌಡರನ್ನು ಇಲ್ಲಿರುವ ಇನ್ನೊಂದು ಸಣ್ಣ ಸ್ಟೀಲ್ ಡಬ್ಬಿಗೆ ಒಂದೆರಡು ಬಾರಿ ಚಿಮುಕಿಸಿ ನಂತರ ಪಫ್‌ನಿಂದ ಪೌಡರ್ ಹಚ್ಚಿಕೊಳ್ಳುತ್ತಿದ್ದರು. ಪಫ್ ಮತ್ತೆ ಸ್ಟೀಲ್ ಡಬ್ಬಿಯಲ್ಲಿ ಬಂದಿಯಾಗುತ್ತಿತ್ತು. ಈ ಕಡೆ ಇನ್ನೊಂದು ಸಣ್ಣ ಡಬ್ಬಿ ಇದೆಯಲ್ಲ, ಅದರಲ್ಲಿ ಮನೆಯಲ್ಲಿ ಮಾಡಿದ ಕಣ್ಣಿನ ಕಪ್ಪು ಇರುತ್ತಿತ್ತು. ಹಿತ್ತಲಲ್ಲಿ ಬಿಟ್ಟ ನಂಜಬಟ್ಟಲ ಹೂವಿನ ರಸವನ್ನು ತಟ್ಟೆಗೆ ಹಚ್ಚಿ, ಅದನ್ನು ಹರಳೆಣ್ಣೆ ದೀಪದ ಮೇಲೆ ಲೋಟಗಳ ಮೇಲೆ ಕೂರಿಸಿ, ಕಪ್ಪು ಹಿಡಿಸಿ ಮಾಡುತ್ತಿದ್ದರು. ಕಣ್ಣಿನ ಕಾಡಿಗೆ ಮನೆಯಲ್ಲೇ ತಯಾರಾಗುತ್ತಿತ್ತು. ಒಮ್ಮೆ ಅಪ್ಪ ಬೆಂಗಳೂರಿನಿಂದ ಬರುವಾಗ ಸಣ್ಣ ಡಬ್ಬಿಯಲ್ಲಿ ಮಡಿಸಿ ಇಡುವಂತಹ ಕನ್ನಡಿ ಮತ್ತು ಅದರ ಇನ್ನೊಂದು ಕಡೆ ಸ್ವಲ್ಪ ಗುಲಾಲ್ ಕಲರ್ ಇರುವ ಪೌಡರ್ ಮತ್ತು ಅದರಲ್ಲೇ ಸಣ್ಣ ಪಫ್ ಇರುವಂತ ಪೌಡರ್ ಬಾಕ್ಸ್ ತಂದುಕೊಟ್ಟಿದ್ದರು. ಅದನ್ನು ನಮ್ಮಮ್ಮ ಉಪಯೋಗಿಸಿ ಬದಲು ಚೆನ್ನಾಗಿದೆ ಎಂದು ಜೋಪಾನವಾಗಿ ತೆಗೆದಿಟ್ಟುಕೊಂಡಿದ್ದರು. ಈಗ ಹೇಳಿ ಒಟ್ಟು ಎಷ್ಟು ಡಬ್ಬಿಗಳು ಇದ್ದವೆಂದು?

ಇನ್ನು ಮುಗಿದಿಲ್ಲ ಸ್ವಲ್ಪ ತಡೆಯಿರಿ. ಅಮ್ಮ ತಲೆಗೆ ಸಾಮಾನ್ಯವಾಗಿ ಕೊಬ್ರಿ ಎಣ್ಣೆಯನ್ನು ತೆಳುವಾಗಿ ಹಚ್ಚಿ ತಲೆ ಬಾಚಿಕೊಳ್ಳುತ್ತಿದ್ದರು. ಹೊರಗಡೆ ಹೋಗುವಾಗ ತಲೆಗೆ ತುರುಬು ಬರುತ್ತಿತ್ತು. ಈ ಕಡೆ ಇದೆಯಲ್ಲ ಒಂದು ಸಣ್ಣ ಸಿಂಬೆ (bun), ಅದಕ್ಕೆ ಕೂದಲು ಸುತ್ತಿ ಉದ್ದನೆಯ ಬೆಳ್ಳಿ ಬಣ್ಣದ ಪಿನ್ನುಗಳಿಂದ ಚುಚ್ಚಿಕೊಂಡು ಅದರ ಮೇಲೆ ಒಂದು ಕಪ್ಪು ಬಣ್ಣದ ನೆಟ್ ಸುತ್ತಲೂ ಹಾಕಿ ಕಟ್ಟಿದರೆ ಮುಗಿಯಿತು, ಅವರು ತಯ್ಯಾರಾಗಿದ್ದಾರೆ ಎಂದರ್ಥ.

ಬೀರು ಎಂದ ಮೇಲೆ ಸೀರೆ ಇರಲೇಬೇಕಲ್ಲ. ಮೂರನೇಯ ಖಾನಿಯಲ್ಲಿ ದಿನನಿತ್ಯದ ಸೀರೆಗಳು ನಿಮಗೆ ಕಾಣುತ್ತಿದೆಯಲ್ಲ. ಆಗ ಎಲ್ಲರಿಗೂ ತರುವಂತೆ ಇವರಿಗೂ ವರ್ಷಕ್ಕೆ ಮೂರು ಸೀರೆ ತರುತ್ತಿದ್ದರು. ಹಳೆಯದು, ಹೊಸದು ಎಲ್ಲಾ ದಿನನಿತ್ಯ ಉಡುವ ಸೀರೆಗಳು ಮೂರನೇಯ ಖಾನಿಯಲ್ಲಿ ಕುಳಿತಿರುತ್ತಿದ್ದವು. ಆಗೆಲ್ಲಾ ಪ್ರತಿ ಹಬ್ಬಕ್ಕೆ ಸೀರೆ ತೆಗೆದುಕೊಳ್ಳುವ ಪದ್ಧತಿ ಇರಲಿಲ್ಲ. ಬಹುಶಃ ಪದ್ಧತಿಗಿಂತ ಏನು ತಂದರೂ ಮನೆಯಲ್ಲಿರುವ ಡಜನ್ ಜನಕ್ಕೆ ತರಬೇಕಾಗಿದ್ದರಿಂದ ದುಡ್ಡು ಇರುತ್ತಿರಲಿಲ್ಲವೇನೊ, ನನಗೆ ಗೊತ್ತಿಲ್ಲ ಬಿಡಿ.

ಈಗ ಕೆಳಗಡೆ ಇರುವ ನಾಲ್ಕನೆಯ ಖಾನಿ ನೋಡಿ. ಇಲ್ಲಿ ಇರುವುದೇ ಅಮ್ಮನ ರೇಷ್ಮೆ ಸೀರೆಗಳು. ಸೀರೆಗಳು ಎಂದರೆ ಬೇಕಾದಷ್ಟು ಇವೆ ಅಂದುಕೊಳ್ಳಬೇಡಿ. ನಿಮಗೇ ಕಾಣುತ್ತಿದೆಯಲ್ಲ, ಒಂದು ಕಡೆ ಮೂರು ಸೀರೆಗಳಿವೆ. ಮೇಲುಗಡೆ ಇರುವ ಕೆಂಪು ಸೀರೆ ನೋಡಿದ ತಕ್ಷಣ ನೀವೆಲ್ಲಾ ಹೇಳುತ್ತೀರಿ ಇದು ಬಂಗಾರದ ಮನುಷ್ಯ ಸಿನಿಮಾದ ಸೀರೆಯೆಂದು. ನನ್ನ ಅಕ್ಕ ಬಹುಶಃ ಊರಿನಲ್ಲಿಯೇ ಕನ್ನಡದಲ್ಲಿ ಮೊದಲ ಬಿ.ಎ. ಓದಿದ ಮಹಿಳೆ. ನಂತರ ಧಾರವಾಡದಲ್ಲಿ ಹೊರ ವಿಧ್ಯಾರ್ಥಿನಿಯಾಗಿ ಕನ್ನಡದಲ್ಲಿ ಎಂ.ಎ. ಕೂಡ ಓದಿದರು. ಅವರು ಓದು

ಮುಗಿಸಿದಾಗ ಊರಿನ ತಾಲ್ಲೂಕು ಬೋರ್ಡ್‌ನವರು ಮನೆಗೆ ಬಂದು ಅವರಿಂದ ಅಪ್ಲಿಕೇಶನ್ ಬರೆಸಿಕೊಂಡು ಅವರು ನಡೆಸುತ್ತಿದ್ದ ಹೆಣ್ಣು ಮಕ್ಕಳ ಹೈಸ್ಕೂಲಿನಲ್ಲಿ ಕನ್ನಡ ಟೀಚರ್ ಕೆಲಸದ ನೇಮಕಾತಿ ಪತ್ರವನ್ನು ಮನೆಗೆ ತಂದುಕೊಟ್ಟು ಹೋಗಿದ್ದರು! ನನ್ನ ಅಕ್ಕ ತನ್ನ ಮೊದಲ ಸಂಬಳದಲ್ಲಿ ರೂ 40/- ಕೊಟ್ಟು ಆಗಿನ ಲೇಟೆಸ್ಟ್ ಫ್ಯಾಶನ್ ಬಂಗಾರದ ಮನುಷ್ಯ ಸಿನಿಮಾದಲ್ಲಿ ನಾಯಕಿ ಭಾರತಿ ಉಟ್ಟ ಕೆಂಪು ಬುಟ್ಟವಿರುವ ಸೀರೆ ತಂದು ಕೊಟ್ಟಿದ್ದರು. ಅದರ ಕೆಳಗೆ ಇದ್ದ ಕ್ರೀಮ್ ಕಲರ್ ಮೈತುಂಬ ಬುಟ್ಟ ಮತ್ತು ಜರಿ ಇದ್ದ ಸೀರೆ ನನ್ನ ಮೊದಲ ಅಣ್ಣ ಕೆಲಸಕ್ಕೆ ಸೇರಿದಾಗ ಅವರ ಮೊದಲ ಸಂಬಳದಲ್ಲಿ ತಂದುಕೊಟ್ಟ ಸೀರೆ. ಇದು 1966ರಲ್ಲಿ ಅಂದರೆ ಕಪ್ಪು ಬಿಳುಪು ಸಿನಿಮಾದ ಕಾಲದಲ್ಲಿ ತಂದಿದ್ದಿದ್ದು. ಹಾಗಾಗಿ ಯಾವ ನಾಯಕಿ ಉಟ್ಟುಕೊಂಡಿದ್ದೆಂದು ಗೊತ್ತಿಲ್ಲ. ಅಮ್ಮ ಈ ಸೀರೆಗಳನ್ನು ಉಟ್ಟಿರುವುದಕ್ಕಿಂತ ಅವರ ಕಾಲುಗಳ ಮೇಲೆ ಹರಡಿಕೊಂಡು ಮೆಲ್ಲಗೆ ಅದರ ಮೇಲೆ ಕೈಯಿಂದ ನಿಧಾನವಾಗಿ ಸವರಿ ಮತ್ತೆ ಸೀರೆಯನ್ನು ಬೀರುವಿನಲ್ಲಿ ಜೋಪಾನವಾಗಿ ಎತ್ತಿಟ್ಟಿದ್ದೇ ಜಾಸ್ತಿ! ಮೂರನೇಯ ಸೀರೆಯೇ ಅವರ ಮದುವೆಯ ಸೀರೆ. ಬಿಳಿ ಬಣ್ಣದ ಈ ಸೀರೆ ಸ್ವಲ್ಪ ಮಸುಕಾಗಿದ್ದರೂ ಸಾಕಷ್ಟು ಗಟ್ಟಿಯಾಗಿತ್ತು. ಇದು 1942ರಲ್ಲಿ ಮದುವೆಗೆ ಅಪ್ಪ ತಂದಿದ್ದ 15 ರೂ. ಸೀರೆಯಂತೆ!

ಈ ಕಡೆ ಇನ್ನೊಂದು ಪಕ್ಕದಲ್ಲಿ ಇರುವ ಸೀರೆಗಳು ಬೇರೆ ನೆಂಟರ ಮದುವೆಯಲ್ಲಿ ನನ್ನ ಅಮ್ಮ ದೊಡ್ಡವರೆಂದು ಕೊಟ್ಟ ಸೀರೆಗಳು. ಇದೆಲ್ಲಾ ನನ್ನ ಅಕ್ಕಂದಿರಿಗೆ ಹಬ್ಬಗಳ ದಿನಗಳಲ್ಲಿ ಉಡಲು ಕೊಡುತ್ತಿದ್ದರು. ಅದರಲ್ಲಿ ಹೊಸದಾಗಿ ಆಗತಾನೆ ಬಂದಿದ್ದ ಪಾಲಿಯಸ್ಟರ್ ಸೀರೆ ರೇಷ್ಮೆ ಸೀರೆಯ ಜೊತೆ ಕೂರುವ ಭಾಗ್ಯ ಪಡೆದಿತ್ತು.

ಅರೆ, ಲಾಕರ್‌ನಲ್ಲಿ ಏನಿದೆ? ಕೇಳುವುದೋ ಬಿಡುವುದೋ ಯೋಚಿಸುತ್ತಿದ್ದೀರಾ? ಅದರಲ್ಲಿ ಏನೇನಿದೆ ನೋಡೋಣ ಬನ್ನಿ.

ಮೇಲೆ ಒಂದು ದಪ್ಪಗೆ ಇರುವ ನೀಲಿ ಬಣ್ಣದ ಫೈಲ್ ಕಾಣುತ್ತಿದೆಯಲ್ಲ, ಇದೊಂದು ವಿಶೇಷವಾದ ಫೈಲ್. ನೋಡಿ ಈ ಫೈಲಲ್ಲಿ ಒಂದರ ಮೇಲೊಂದು ನೀಟಾಗಿ ಜೋಡಿಸಿರುವ ಏರೋಗ್ರಾಂ ಲೆಟರ್‌ಗಳು ಕಾಣುತ್ತಿವೆಯಲ್ಲ. ನನ್ನ ದೊಡ್ಡ ಅಣ್ಣ ದಕ್ಷಿಣ ಭಾರತದಿಂದ ಪ್ರಥಮಬಾರಿಗೆ ಕಾಮನ್‌ವೆಲ್ತ್ ದೇಶಗಳ ವಿಧ್ಯಾರ್ಥಿ ಗಳಿಗೆ ಕೊಡುತ್ತಿದ್ದ ವಿಧ್ಯಾರ್ಥಿವೇತನಕ್ಕೆ ಆಯ್ಕೆಯಾಗಿ ಇಂಗ್ಲೆಂಡಿನಲ್ಲಿ ಏರೋನಾಟಿಕಲ್ ಇಂಜನಿಯರಿಂಗ್‌ನಲ್ಲಿ ಡಾಕ್ಟರೇಟ್ ಪದವಿ ಪಡೆಯಲು 1970ರಲ್ಲಿ ಮೂರು ವರ್ಷಗಳ ಕಾಲ ಅವರ ಕಛೇರಿಯಿಂದ ನಿಯೋಜನೆ ಗೊಂಡು ಹೋಗಿದ್ದರು. ಆಗ ಅವರು ಅಲ್ಲಿಂದ ಪ್ರತಿವಾರವೂ ತಪ್ಪದೆ ಕನ್ನಡದಲ್ಲಿ ಅಲ್ಲಿಯ ವಿಷಯಗಳ ಬಗ್ಗೆ ಪತ್ರ ಬರೆಯುತ್ತಿದ್ದರು. ಆ ಎಲ್ಲಾ ಪತ್ರಗಳನ್ನೂ ಅಮ್ಮ ಜೋಪಾನವಾಗಿ ತೆಗೆದಿಟ್ಟುಕೊಂಡು ಅವರಿಗೆ ಮನಸ್ಸಾದಗಲೆಲ್ಲಾ ಓದಿದ್ದನ್ನೇ ಓದುತ್ತಿದ್ದರು. ಅಮ್ಮ ಮದುವೆಗೆ ಮುಂಚೆ ಎಲ್.ಎಸ್.ವರೆಗೆ ಓದಿದ್ದರಂತೆ. ಮನೆಗೆ ಬರುತ್ತಿದ್ದ ಪ್ರಜಾವಾಣಿ ದಿನಪತ್ರಿಕೆ ತಪ್ಪದೆ ಓದುತ್ತಿದ್ದರು. ಸುಧಾ, ಕರ್ಮವೀರಗಳನ್ನು ಆಗಾಗ ನೋಡುತ್ತಿದ್ದರು. ಈಗ ನೋಡಿ, ಆ ಫೈಲಿನ ಪಕ್ಕದಲ್ಲಿ ವಿವಿಧ ರೀತಿಯ ಪುಸ್ತಕಗಳು ಇವೆಯಲ್ಲ. ಇವೆಲ್ಲಾ ಕಾಶಿಯಿಂದ ರಾಮೇಶ್ವರದತನಕ ಇರುವ ಎಲ್ಲಾ ದೇವರ ಸ್ತುತಿ, ಹಾಡು, ಅಷ್ಟೋತ್ತರ, ಇತ್ಯಾದಿಗಳು ಇರುವ ಪುಸ್ತಕಗಳು. ಅಪ್ಪ ಬೆಂಗಳೂರಿಗೆ ಹೋದಾಗಲೆಲ್ಲಾ ಇತರರಿಗೆಲ್ಲಾ ಗೀತಾ ಬುಕ್ ಹೌಸ್‌ನಿಂದ ಒಂದೆರಡು ಕಾದಂಬರಿಗಳು ಮತ್ತು ಅಮ್ಮನಿಗೆ ಕೃಷ್ಣಯ್ಯ ಶೆಟ್ಟಿ ಪ್ರಕಾಶನದಿಂದ ಪ್ರಕಟಿತವಾದ ದೇವರ ಸ್ತುತಿಗಳನ್ನು ತಂದುಕೊಡುತ್ತಿದ್ದರು. ಅದರ ಕೆಳಗಡೆ ಎಲ್ಲದರ ಅಡಿಪಾಯದ ತರಹ ಇರುವುದೇ ಅಮ್ಮನಿಗೆ ಅವರ ಅತ್ತೆಯಿಂದ (ನನ್ನ ಅಜ್ಜಿ) ಬಳುವಳಿಯಾಗಿ ಬಂದ ಪಾಕಶಾಸ್ತ್ರದ ಪುಸ್ತಕ. ಇದರಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರ್ ಬಹುದ್ದೂರ್‌ರವರ ಆಜ್ಞೆಯಂತೆ ಅರಮನೆಯ ವಿದ್ವಾಂಸರಾದ ಶ್ರೀ ಜಯರಾಯಾಚಾರ್ಯರಿಂದ ರಚಿಸಲ್ಪಟ್ಟಿದ್ದು, ರಿವೈಸೈಡ್ ಬೈ ಆರ್.ಕೃಷ್ಣಪ್ಪ ಎಂ.ಎ. ಎಂದಿದೆ. ಇದು 1931ರಲ್ಲಿ ಪ್ರಕಟವಾದ ಹನ್ನೊಂದನೇ ಆವೃತ್ತಿ-500 ಪ್ರತಿಗಳು ಎಂದಿದೆ. ಇದರ ಬೆಲೆ ನೋಡಿ, 0-14-0 ಎಂದಿದೆ.

ಈ ಲಾಕರ್ ಒಳಗೆ ಎಡಗಡೆ ಮೂಲೆಯಲ್ಲಿ ಇನ್ನೊಂದು ಸಣ್ಣ ಲಾಕರ್ ಇದೆಯಲ್ಲ. ಇದರಲ್ಲಿ ಒಂದು ತಿರುಪಿನ ಮುಚ್ಚಲ ಇರುವ ನೋಡಲು ಆಟದ ರೈಲುತಂಬಿಗೆ ತರಹ ಕಾಣುವ ಒಂದು ಸಣ್ಣ ಬೆಳ್ಳಿ ಡಬ್ಬಿಯಿದೆ. ಆ ಡಬ್ಬಿಯಲ್ಲಿ ಮಂತ್ರಾಲಯದಿಂದ ತಂದ ಮೃತ್ತಿಕೆಯಿತ್ತು. ಅಮ್ಮ ಆ ಡಬ್ಬಿಯನ್ನು ಜೋಪಾನವಾಗಿ ಇಟ್ಟುಕೊಂಡು ದಿನವೂ ಅದನ್ನು ಹಚ್ಚಿಕೊಳ್ಳುತ್ತಿದ್ದರು. ಅದರಿಂದ ಅಮ್ಮ ಸಂಪಾದಿಸಿದ ಪುಣ್ಯ ನಮ್ಮ ಮನೆಯ ಎಲ್ಲರನ್ನೂ ಅವರ ಕಾಲ ಮೇಲೆ ಅವರು ನಿಂತುಕೊಂಡು ಜೀವನ ನಡೆಸುವಂತೆ ಮಾಡಿದೆ.

ಸಮಯವಾಯಿತಲ್ಲ. ಮುಂದಿನ ದಾಸೋಹದಲ್ಲಿ ಅಪ್ಪನ ಅಲ್ಮೇರಾ ನೋಡೋಣವಂತೆ!

***

ಭಕ್ತಿ ಗೀತೆ

– ಮಂಗಳಾ ನಾಡಿಗ್

ರಂಗಾ ಬಾರೋ। ಕೃಷ್ಣ ಬಾರೋ
ರಂಗಯ್ಯ ಬಾರೋ। ಪಾಂಡುರಂಗ ಬಾರೋ॥ಪ॥

ದ್ವಾರಕಾ ಪುರಿಯಲ್ಲಿ ನೀ ನೆಲೆಸಿರುವೆ ।
ಪಂಡರಾಪುರದಲ್ಲಿ ನೀ ನಿಂತಿರುವೆ॥
ಉಡುಪಿಲಿ ಕೃಷ್ಣನಾಗಿ ದರುಷನವೀವೆ
ಶ್ರೀರಂಗಪಟ್ಟಣದಿ ರಂಗನಾಗಿ ಪವಡಿಸಿರುವೆ। ॥ 2 ॥

ಪೂತನಿಯ ಮೊಲೆಯನುಂಡು ಸಂಹರಿಸಿದೆ ಅವಳ
ಕಾಳಿಂದಿ ಮಡುವ ಧುಮುಕಿ ಕಾಳಿಂಗನ ಮರ್ಧಿಸಿದೆ॥
ಮಾವ ಕಂಸನ ಕೊಂದು ಮಾತಾಪಿತರ ಬಿಡಿಸಿದೆ
ಯಶೋದೆ ನಂದರ ಮುದ್ದಿನ ಕಣ್ಮಣಿಯಾದೆ ॥ 2 ॥

ಗುರುವಾಯೂರಲಿ ನಾರಾಯಣನಾದೆ
ಬೇಲೂರಿನಲ್ಲಿ ಚೆನ್ನಕೇಶವನೆನಿಸಿದೆ॥
ತಿರುಮಲೆ ಯಲ್ಲಿ ತಿಮ್ಮಪ್ಪ ನೆನಿಸಿದೆ
ಮೆಲುಕೋಟೆಯಲ್ಲಿ ಚೆಲುವ ಚೆನ್ನಿಗನಾದೆ ॥3॥

ರಂಗಾ ಬಾರೋ ಕೃಷ್ಣ ಬಾರೋ
ರಂಗಯ್ಯ ಬಾರೋ ಪಾಂಡುರಂಗ ಬಾರೋ।

***

ಸಂಜೆವಾಣಿಯ ಸಂಭಾವನೆ

– ಕೆ.ಎನ್. ಭಗವಾನ್

ಅಂಚೆಯಾತ ಮನೆ ಬಾಗಿಲಿಗೆ ಬಂದು ಕರೆಗಂಟೆಯ ದನಿ ಮಾಡಿದ. ನಾನು ಹೊರಬಂದೆ. ಆತ 'ನಿಮಗೊಂದು ರಿಜಿಸ್ಟರ್ಡ್ ಪೋಸ್ಟ್ ಇದೆ, ಇಲ್ಲಿ ಸೈನು ಮಾಡಿ' ಅಂತ ಇಂಟೂ ಮಾರ್ಕಿನ ಜಾಗ ತೋರಿಸಿದ. ನಾನು ಸಹಿ ಮಾಡಿ ಲಕೋಟೆಯನ್ನು ತಗೊಂಡೆ. ಅದರ ಹಿಂಬದಿಯಲ್ಲಿ 'ಫ್ರಮ್ ದಿ ಎಡಿಟರ್, ಸಂಜೆವಾಣಿ ಡೈಲಿ' ಎಂಬ ಮೊಹರು ಇತ್ತು. ಮತ್ತಾರಿಗೋ ಕಳಿಸಬೇಕಾಗಿದ್ದನ್ನು ತಪ್ಪಾಗಿ ನನಗೆ ಕಳಿಸಿರಬಹುದೇ! ಇಲ್ಲ, ಹೆಸರು, ವಿಳಾಸ ಸರಿಯಾಗೇ ಇದೆ. ಲಕೋಟೆಯಲ್ಲಿ ಇರೋದು ಒಂದು ಸಾವಿರ ರೂ.ಗಳ ಚೆಕ್ಕು! ಸಂಜೆವಾಣಿಗೂ ನನಗೂ ಯಾವುದೇ ಅಕ್ಷರ ಸಂಬಂಧವಿಲ್ಲ. ಆ ದಿನಪತ್ರಿಕೆ ಕಥೆ, ಕವನ, ಪ್ರಬಂಧ ಇತ್ಯಾದಿಗಳನ್ನು ಪ್ರಕಟಿಸೋದೂ ಇಲ್ಲ. ಚೆಕ್ ಜೊತೆಗಿರುವ ಸೂಚನಾ ಪತ್ರದಲ್ಲಿ 'ನಿಮ್ಮದೊಂದು ಕಥೆಯನ್ನು ಸಂಜೆವಾಣಿಯ ದೀಪಾವಳಿ ವಿಶೇಷ ಪುರವಣಿಯಲ್ಲಿ ಬಳಸಿ ಕೊಳ್ಳಲಾಗಿದೆ. ಅದಕ್ಕಾಗಿ ಈ ಸಂಭಾವನೆ. ದಯವಿಟ್ಟು ಸ್ವೀಕರಿಸಿ. ಇತಿ' ಎಂಬ ವಿನಂತಿ!

ನಿಜಕ್ಕೂ ಈ ಪತ್ರಿಕೆಯ ಕಚೇರಿ ಎಲ್ಲಿದೆ? ಸಂಪಾದಕರಾರು? ತಿಳಿಯದು. ಕನ್ನಡ ಚಳವಳಿಯ ಗೆಳೆಯನೊಬ್ಬನಿಂದ ಆ ಪತ್ರಿಕಾ ಕಚೇರಿ ಹಲಸೂರಿನಲ್ಲಿದೆ, ಅದರ ಸಂಪಾದಕ ಶಿವಸುಬ್ರಹ್ಮಣ್ಯ ಎಂದೂ ತಿಳಿದುಬಂತು. ಹೆಚ್ಚಿನ ವಿವರ ಆತನಿಗೂ ತಿಳಿಯದು. ಅದೇ ಸಂಜೆ ಆ ಪತ್ರಿಕೆಯನ್ನು ಕೊಂಡು, ಅದರಿಂದ ಕಚೇರಿಯ ಫೋನ್ ನಂಬರ್ ತಿಳಿದು ಸಂಪರ್ಕಿಸಿದಾಗ ಒಬ್ಬ ಮಹಿಳೆ ಸ್ಪಂದಿಸಿದಳು. 'ಸಂಪಾದಕರು ಇನ್ನೂ ಎರಡು ದಿನ ಸಿಗೋಲ್ಲ, ಏನಾಗಬೇಕಿತ್ತು?' ಎಂಬ ಪ್ರಶ್ನೆಯೊಂದಿಗೆ!

'ನಿಮ್ಮ ಕಚೇರಿಯಿಂದ ನನ್ನ ಹೆಸರಿಗೊಂದು ಚೆಕ್ ಬಂದಿದೆ. ಇದರ ಜೊತೆಗೆ ದೀಪಾವಳಿ ವಿಶೇಷ ಪುರವಣಿಯ ಒಂದು ಗೌರವ ಪ್ರತಿ ಬರಬೇಕಿತ್ತು, ಅವರಿಗೆ ಜ್ಞಾಪಿಸಿ' ಎಂದೆ. ಆ ಕಡೆಯ ಧ್ವನಿ 'ಓಕೆ ಸರ್' ಎಂದಿತು.

ನಾನಂತೂ ಈ ಪತ್ರಿಕೆಗೆ ಯಾವ ಲೇಖನವನ್ನೂ ಕಳಿಸಿರಲಿಲ್ಲ. ನನಗೆ ತಿಳಿದ ನನ್ನ ಹೆಸರಿನ ಆ ಮೂರು ವ್ಯಕ್ತಿಗಳು ನನ್ನಂತೆ ಕತೆಗಾರರಲ್ಲ. ಹಾಗಿರುವಾಗ ಅಯಾಚಿತವಾಗಿ ಬಂದಿರುವ ಚೆಕ್ ಅಪಾತ್ರದಾನವಲ್ಲ ಎಂಬ ಸಮಾಧಾನ. ಈಗಾಗಲೇ ಪ್ರಕಟವಾಗಿರುವ ಮೂರು ಕಥಾ ಸಂಕಲನಗಳಿಂದ ಯಾವುದೋ ಪತ್ರಿಕೆಯ ಸಂಪಾದಕರು ಒಂದನ್ನು ಅನಾಮತ್ತಾಗಿ ಎತ್ತಿಕೊಂಡಿದ್ದಾರು! ಸಂಭಾವನೆಯಂತೂ ಬಂದಿದೆಯಲ್ಲಾ ಅಂತ ನನ್ನ ಬ್ಯಾಂಕ್ ಉಳಿತಾಯ ಖಾತೆಗೆ ಜಮಾ ಮಾಡಿದೆ. ಆದರೆ ಅದರ ಜೊತೆಗೆ ಬಂದಿರಬಹುದಾದ ಆ ವಿಶೇಷ ಪುರವಣಿ ಎಲ್ಲಿ? ಅಂತ ಕೊಂಚ ತಲೆ ಕೆಡಿಸಿಕೊಂಡೆ. ನಮ್ಮ ಮನೆಗೆ ಪತ್ರಿಕೆ ಹಾಕುವ ಹುಡುಗನನ್ನ ವಿಚಾರಿಸಿದರೂ ಸುಳಿವು ಸಿಗಲಿಲ್ಲ.

ಇದಾಗಿ ಒಂದು ತಿಂಗಳನಂತರ ಸಾಹಿತ್ಯ ಪರಿಷತ್ತಿನ ಒಂದು ಸಮಾರಂಭದಲ್ಲಿ ವಿಕ್ರಮ ಪತ್ರಿಕೆಯ ಮಾಜಿ ಸಂಪಾದಕ ಲಕ್ಷ್ಮೀಶ ಕಾಟುಕುಕ್ಕೆ ಸಿಕ್ಕಿದರು. ವಿಜಯದಶಮಿ ವಿಶೇಷಾಂಕದ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ತಗೊಂಡ ಮೇಲೆ ನೀವು ಆಫೀಸು ಕಡೇನೇ ಬರಲಿಲ್ಲ? ಅಂತ ವಿಚಾರಿಸಿದರು. .'ನೀವೂ ಪತ್ರಿಕೆ ಬಿಟ್ರಲ್ಲಾ. ಹಿಂದಿನ ತಿಂಗಳು ಯಾವ ಸ್ಪರ್ಧೆಗೂ ಕಥೆ ಕಳಿಸದೆ ಸಾವಿರ ರೂಪಾಯಿ ಅನಾಯಾಸವಾಗಿ ಬಂತು' ಒಣಪ್ರತಿಷ್ಠೆಯಿಂದ ಬೀಗಿದೆ. .ಅವರು ಹುಬ್ಬೇರಿದರು. ನಾನು ಸಂಜೆವಾಣಿಯ ಚೆಕ್ ವಿಷಯ ತಿಳಿಸಿದೆ.

ಆತ 'ಓ ಅದಾ? ನಾನು ವಿಕ್ರಮಕ್ಕೆ ಬರೋಕೆ ಮುಂಚೆ ಸಂಜೆವಾಣಿಗೆ ಸಂಪಾದಕ ಆಗಿದ್ದೆ. ಈಗ ನನ್ನ ಫ್ರೆಂಡು ಶಿವಸುಬ್ರಹ್ಮಣ್ಯ ಇದ್ದಾರೆ. ಆತ ಈ ವರ್ಷ ಮೊದಲಬಾರಿಗೆ ದೀಪಾವಳಿ ವಿಶೇಷಾಂಕ ತರ್ತಾ ಇದ್ದೀವಿ. ನಿಮ್ಮಲ್ಲಿ ಇನ್ನೂ ಪ್ರಕಟ ಆಗದೇ ಇರೋ ಕಥೆಗಳಿದ್ರೆ ಕಳಿಸಿಕೊಡಿ ಅಂತ ಕೇಳಿಕೊಂಡರು. ನೀವು ವಿಕ್ರಮಕ್ಕೆ ಎರಡು ಕಥೆ ಕಳಿಸಿದ್ದಿರಿ.

ಅದರಲ್ಲಿ ಕೇಸರಿ ಮತ್ತು ಬಿಳಿಗೆ ಬಹುಮಾನ ಬಂತಲ್ವಾ, ಇನ್ನೊಂದು ಕಥೇನ ಮುಂದೆ ಯಾವಾಗಲಾದರೂ ಉಪಯೋಗಿಸೋಣ ಅಂತ ಇಟ್ಕೊಂಡಿದ್ದೆ.ಅದನ್ನೇ ಅವರಿಗೆ ಕಳಿಸಿದೆ, ನಿಮ್ಮ ಅನುಮತಿ ಇಲ್ಲದೆ!' ಎಂದರು.ನಿಜಕ್ಕೂ ನನ್ನ ಆ ಇನ್ನೊಂದು ಕಥೆಯ ವಿಷಯ ನನಗೇ ಮರೆತುಹೋಗಿತ್ತು.

ಅಚಾತುರ್ಯವೆಂದರೆ ಸಂಜೆವಾಣಿಯ ವಿಶೇಷ ಪುರವಣಿ ಪ್ರತಿ ಲಕ್ಷ್ಮೀಶ ಅವರಿಗೂ, ಚೆಕ್ಕು ನನಗೂ ಬಂದಿರೋದು!

ಆ ಮುಂದಿನ ವಾರವೇ ವಿಕ್ರಮ ಕಚೇರಿಗೆ ಹೋಗಿ ಆ ಪುರವಣಿಯನ್ನು ಪಡೆದುಕೊಂಡೆ. ಸುಂದರ ರೇಖಾ ಚಿತ್ರದೊಂದಿಗೆ 'ಬಾಡಿಗೆ ಮಂದಿ' ಪ್ರಕಟವಾಗಿದ್ದನ್ನು ಕಣ್ತುಂಬಿಕೊಂಡೆ.

ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ಪ್ರಸಂಗ. ಅದೊಂದು ಭಾನುವಾರ ಕಬ್ಬನ್ ಪಾರ್ಕಿನಲ್ಲಿರೋ ಪ್ರೆಸ್ ಕ್ಲಬ್ಬಿನಲ್ಲಿ ಡಾ.ಎಂ.ಚಿದಾನಂದಮೂರ್ತಿ ಅವರದೊಂದು ಪತ್ರಿಕಾಗೋಷ್ಠಿಯಿತ್ತು. ಉಪಾಹಾರದ ನಂತರ ಗೆಳೆಯರೊಬ್ಬರು ವಾರ್ತಾಭಾರತಿ ಓದುತ್ತಿರುವಾಗ, 'ಭಗವಾನ್ ಜೀ, ಇಲ್ಲಿ ನೋಡಿ ನಿಮ್ಮದೊಂದು ಕಥೆ ಪ್ರಕಟವಾಗಿದೆ' ಅಂತ ತೋರಿಸಿದರು. ಹೌದು, ವೇದಿಕೆ ಎಂಬ ಕತೆ.ಇದು – ನನ್ನ ಮೊದಲ ಕಥಾ ಸಂಕಲನದಲ್ಲಿರೋದು.! ಮೊದಲ ನೋಟಕ್ಕೆ ಹೆಮ್ಮೆ ಆಯಿತಾದರೂ, ಇದನ್ನು ಪ್ರಕಟಿಸೋ ಮುಂಚೆ ನನಗೊಂದು ಮಾತು ತಿಳಿಸಬೇಕಿತ್ತಲ್ವೆ? ಸಂಪಾದಕ ಎಷ್ಟೇ ದೊಡ್ಡವನಾಗಿರಲಿ, ಲೇಖಕನ ಅನುಮತಿ ಕೇಳೋದು ಒಂದು ಸೌಜನ್ಯ. ಮೊದಲೇ ತಿಳಿಸಿದರೆ ಸಂಭಾವನೆ ಕೊಡಬೇಕಿತ್ತೆಂದು ಹಾಗೆ ಮಾಡಿದರೇನೋ! ಆಗಿದ್ದಾಯ್ತು, ನಾನು ಆ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ/ ಬದಲಿಗೆ ಪತ್ರಿಕೆಯ ಮೂಲಕ ಒಂದಷ್ಟು ಸಾವಿರ ಓದುಗರಿಗೆ ನನ್ನ ಕಥೆ ಮುಟ್ಟಿತಲ್ಲಾ ಎಂಬ ಸಮಾಧಾನವಂತೂ ಆಯಿತು.

***

ಭವಾನಿ ಕಾಫಿ

– ಬಾಲಸುಬ್ರಹ್ಮಣ್ಯಂ

ಕೈ ಬೀಸಿ ಕರೆಯುತಿದೆ ನಮ್ಮ ಭವಾನೀ ಕಾಫಿ
ಹೊಸ ಮಳಿಗೆ ತೆರೆದಿದೆ ಮಲ್ಲೇಶ್ವರಕೆ ಬನ್ನಿ
ನಿಮಗಾಗಿ ಕಾಫಿ ರೆಡಿ ಸವಿಯಲೊಮ್ಮೆ ಬನ್ನಿ
ಘಮಘಮಿಸೊ ಕಾಫಿ ಕಾದಿದೆ ಹೀರ ಬನ್ನಿ

ಗೆಳೆಯರೊಡನೆ ಬನ್ನಿ ನಗುನಗುತ ಬನ್ನಿ
ಕಾಫಿ ರುಚಿಯ ಆಸ್ವಾದಿಸುವಿರಂತೆ ನೀವು
ನಿಮ್ಮ ಕಂಗಳಲಿ ನಗೆ ಮಿಂಚು ನೋಡಲು
ಭವಾನಿ ಕಾಫಿ ಉತ್ಸುಕತೆಯಿಂದ ಕಾಯುತಿದೆ

ಅಂತಿಂಥ ಕಾಫಿ ನಮದಲ್ಲ ಇನ್ನಂಥ ಕಾಫಿ ಸಿಗದಲ್ಲ
ಸಿಪ್ಪುಸಿಪ್ಪಿನಲಿ ನವಚೇತನವು ಚಿಗುರೊಡೆವುದಲ್ಲ
ಗೆಳೆಯ ವಿನಯಾನಂದರ ಕನಸಿನ ಕಾಫಿ ಭವಾನಿ
ಹೊಸತನಕೆ ಹೊಸರುಚಿಗೆ ಹೆಸರುವಾಸಿ ಈ ಕಾಫಿ

***

ದಿಢೀರ್ ಕವನ

– ಬಾಲಸುಬ್ರಹ್ಮಣ್ಯಂ

ದಿಢೀರ್ ಕವನ ಬರೆಯಲು ಅದೇನು ಸುಲಿದ ಬಾಳೇಹಣ್ಣೇ
ಕರೆದಾಗ ಬರಲು ಅವಳೇನು ಮಾವನಾ ಮಗಳೇ
ಪದಕೋಶ ಎದುರಿಗಿದೆ ಬೇಕಿರುವ ಪದ ಮರೆಯಾಗಿದೆ
ಅಸಹಾಯಕನಾಗಿ ಕೈ ಚೆಲ್ಲಿ ಲೇಖಣಿಯೊಡನೆ ಕೂತಿರುವೆ.

ಬೊಮ್ಮ ಬರಬೇಕು ತೆರೆಯ ಸರಿಸಲು ಬೇಕು
ವೀಣಾ ಪಾಣಿ ಕೃಪಾಕಟಾಕ್ಷ ಪಡೆದಿರಬೇಕು
ಕಡೆಯಬೇಕು ಕಾಯಬೇಕು ಬೆಣ್ಣೆ ತಾನಾಗಿ ತೇಲಲು
ಮಥಿಸಬೇಕು ಮಂಥನ ನಡೆಸಬೇಕು ಅಮೃತ ಹೊಮ್ಮಲು

ಕುರುಬನಿಗೊಲಿದಳಾಕಾಳಿ ಜಿಹ್ವೆಯಲಿ ಓಂಕಾರ
ನನ್ನ ಕಡೆ ನೋಡವ್ವ ತಾಯಿ ಕಾಯುತಿಹೆ ನಿನಗಾಗಿ
ಇಂದು ಸಾಹಿತ್ಯ ದಾಸೋಹಕೆ ಪ್ರಸ್ತುತಪಡಿಸಲು
ಒಂದು ಕವನ ರಚಿಸಲು ಅನುವು ಮಾಡಿಕೊಡು ತಾಯಿ.

***

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ

– ಟಿ.ಎಸ್. ಶ್ರವಣಕುಮಾರಿ

ಅದ್ಯಾಕೋ ಇವತ್ತು ಬೆಳಬೆಳಗ್ಗೆ ಏಳ್ತಿರೋವಾಗ್ಲೇ 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ' ಅನ್ನೋ ಜಾನಪದ ಹಾಡಿನ ಹುಳ ತಲೆಗೆ ಬಂದ್ಬಿಡ್ತು. ಬಂದಿದ್ದ ಹುಳು ತೆಪ್ಪಗೆ ಕೂತ್ಕೊಳಲ್ವಲ್ಲ, ಕೂತ್ಕೊಂಡ್ರೆ ಅದ್ಯಾಕ್ ಹುಳು ಆದಾತು. ಒಂದ್ ಸ್ವಲ್ಪ ಹೊತ್ತಾದ್ಮೇಲೆ ತಲೇಲಿದ್ದಿದ್ದು ನಾಲಗೆ ಮೇಲೆ ಬಂದು, ದನಿಯಾಗಿ ಹೊರಬಂತಾ, ಕೇಳಸ್ಕೊಂಡ ಮನೆಯವರು, "ಯಾರನ್ಯಾಕೆ ಪ್ರೇಮನ್ನ (ಅಂದ್ರೆ ನಮ್ಮನೆ ಕೆಲಸದವಳನ್ನ) ನೆನಪಿಸ್ಕೋ; ಗಂಟೆ ಏಳೂಮುಕ್ಕಾಲಾಯ್ತು ಇಷ್ಟು ಹೊತ್ತಾದ್ರೂ ಬಂದಿಲ್ಲ. ಎಂಟು ಗಂಟೆ ಮೇಲೆ ಮನೆ ಬಾಗ್ಲಿಗೆ ನೀರು ಹಾಕಿದ್ರೆ ನೋಡಿದ್ ಜನ ನಗ್ತಾರೆ. ಅವ್ಳಿಗೆ ನೀನು ಕೊಟ್ಟ ಸದರ ಜಾಸ್ತಿಯಾಯ್ತು. ಬಂದದ್ದೇ ಟೈಮು ಅಂದ್ಕೊಂಡ್ಬಿಟ್ಟಿದಾಳೆ" ಅಂತ ನನ್ನ ಮೇಲೆ ಆವಾಜ್ ಹಾಕಿದ್ರು. ನನ್ಮೇಲೆ ಆವಾಜ್ ಹಾಕ್ಬೋದು ಬಿಡಿ; ಅವ್ಳ ಮೇಲೆ ಹಾಕಿ 'ನಾನು ನಾಳೆಯಿಂದ ಬರೋದಿಲ್ಲ' ಅಂತ ಹೊರಟೇಬಿಟ್ರೆ; ಅಥವಾ ಅವತ್ತು ಮೂರ್ತಿಗಳ ಮನೆ ನಿಂಗಿ, "ನೀವು ಬಾಯಿಗ್ಬಂದಂಗೆ ಮಾತಾಡಕ್ಕೆ ನಾನೇನು ನಿಮ್ ಎಂಡ್ರಾ.ವಸಿ ಮರ್‍ವಾದೆ ಕೊಟ್ಟು ಮಾತಾಡಿ" ಅಂದಿದ್ನ ಮೂರ್ತಿಗಳ ಹೆಂಡತಿ ಸುಮಿತ್ರ ನನ್ನ ಬಳಿ ಹೇಳ್ಕೊಂಡು "ನಮ್ಮ ಸ್ಥಾನ ಎಲ್ಲಿಗ್ಬಂದ್ಹೋಯ್ತು ನೋಡಿ" ಅಂತ ಅತ್ತಿದ್ದಿದ್ದು ಹಳೇ ಸುದ್ದಿ ಬಿಡಿ. ಆದ್ರೂ ಅವತ್ನಿಂದ ಇವ್ರು ಪ್ರೇಮನ ಹತ್ರ ಮಾತಾಡ್ಬೇಕಾದ್ರೆ ಸ್ವಲ್ಪ ಹುಷಾರಾಗಿರ್ತಾರೆ ಅನ್ನೋದನ್ನ ನಾನು ಕಂಡ್ಕೊಂಡಿದೀನಿ.

ಎಲ್ಲೋ ವಿಷಯಾಂತರವಾಗ್ಹೋಯ್ತು. ಈಗ ಮತ್ತೆ ಇನ್ನೂ ಬಂದಿಲ್ಲದ ಪ್ರೇಮನ ವಿಷಯಕ್ಕೆ ಬರೋಣ. ಅವ್ಳೇನಾದ್ರೂ ನಿನ್ನೆ ಲೇಟಾಗಿ ಬರ್ತೀನೀಂತ ಹೇಳಿ ಹೋಗಿದ್ಲಾಂತ ತಲೆ ಕೆರ್ಕೊಂಡೆ, ತಲೇಲಿದ್ದ 'ಯಾರ್ಯಾರ ನೆನೆಯಾಲಿ' ಅನ್ನೋ ಹುಳ ಮತ್ತೆ ನಾಲಗೆ ಮೇಲೆ ಬರ್‍ಬೇಕಾ ಇವ್ರ ಪಿತ್ತ ಕೆರಳಸಕ್ಕೆ. ಅವ್ರು ಬಾಯ್ಬಿಡಕ್ಕೆ ಮುಂಚೇನೆ "ನಿನ್ನೆ ಲೇಟಾಗಿ ಬರ್ತೀನೀಂತ ನಿಮ್ಹತ್ರ ಏನಾದ್ರೂ ಹೇಳಿ ಹೋಗಿದ್ಲಾ. ನಂಗೇನೂ ನೆನಪಿಗೆ ಬರ್‍ದೇ ಇದ್ದಿದ್ರಿಂದ ಕೇಳ್ದೆ"..ಗುರುಗುಟ್ಟಿ ನೋಡಿದ್ರು ಮಾತು ಹೊರಬರ್‍ಲಿಲ್ಲ. "ನೋಡಿ, ಇದೇ ಸಮಸ್ಯೆ. ಡಾಕ್ಟ್ರ ಹತ್ರ "ಈ ಬಿ ಪಿ, ಶುಗರ್ರು, ಆರ್ಥ್‌ರೈಟಿಸ್ ಅಂತ ಮಾತ್ರೆಗಳ್ನ ನುಂಗೀ ನುಂಗೀ ನನ್ನ ನೆನಪಿನ ಶಕ್ತೀನೇ ಕಮ್ಮಿಯಾಗಿ ಹೋಗ್ತಿದೆ ಡಾಕ್ಟ್ರೆ" ಅಂತ ಅಳಲನ್ನ ತೋಡಿಕೊಂಡಿದ್ದಾಗ ಅವರೇನನ್ಬೇಕು? "ನಿಜಾನಮ್ಮ; ನಿಮಗೆ ವಯಸ್ಸೂ ಆಗ್ತಿದೆ ಅನ್ನೋದನ್ನೂ ಮರೆತುಬಿಟ್ರೆ ಹೇಗೆ. ಇದೆಲ್ಲಾ ವಯೋಸಹಜ" ಅಂತ್ಹೇಳಿ ನಾನು ಸದಾ ಮರೀಬೇಕು ಅಂದ್ಕೊಳೋ ನನ್ನ ವಯಸ್ಸನ್ನ ಜ್ಞಾಪಿಸೋದಾ! ಮತ್ತೆ ನೋಡಿ ಹೀಗೇ ಇನ್ನೆಲ್ಲೋ ಸುತ್ತಾಡ್ತಾ ಬಂದ್ಬಿಟ್ಟೆ.

ಅವತ್ತು ಯಾವ್ದೋ ಕೆಲ್ಸದಲ್ಲಿ ಮುಳ್ಗಿರೋವಾಗ ಅವ್ಳು "ಇದು ನನ್ಮಗ್ಳ ಫೋನ್ ನಂಬರಕ್ಕ. ಮಡಿಕ್ಕೊಂಡಿರಿ ಯಾವ್ದುಕ್ಕೂ" ಅಂತ ಮಾಡಿದ್ದ ಒಂದು ಪುಣ್ಯದ ಕೆಲಸ ನೆನಪಿಗೆ ಬಂದರೂ, ಎಲ್ಲಿ ಬರೆದಿಟ್ಟಿದ್ದೆ ಅನ್ನೋದನ್ನ ನೆನಪಿಸಿಕೊಳ್ತಿರೋವಾಗ ಮತ್ತೆ 'ಬೆಳಗಾಗಿ ನಾನೆದ್ದು_' ನಾಲಗೆ ಮೇಲೆ ನಲಿಯಬೇಕೆ ನನ್ನವರನ್ನು ಕೆರಳಸಕ್ಕೆ. ಅವ್ರು ಮಾತಾಡಕ್ಕೆ ಮುಂಚೇನೆ "ಒಂದ್ನಿಮ್ಷ ಇರಿ, ಅವ್ಳ ಫೋನ್ ನಂಬರ್ ಹುಡುಕ್ತಿದೀನಿ" ಎಂದು ಪರ್ಸಿನಲ್ಲಿದ್ದ ನೂರೆಂಟು ಚೀಟಿಗಳಲ್ಲಿ ಅಂತೂ ಅವಳ ನಂಬರ್ ಇದ್ದ ಚೀಟಿಯನ್ನು ತೆಗೆದು ಫೋನಾಯಿಸಿದೆ. ಅತ್ತಲಿಂದ ಅವಳ ಮಗಳು "ಆಂಟಿ, ಸರೋಜಕ್ಕನ್ ಮನೇವ್ರು ಇವತ್ತು ಬೆಳ್ಗೇನೇ ಊರಿಗೋಗ್ತವ್ರಂತೆ. ಅದ್ಕೇ ಮದ್ಲು ನಮ್ಮನೇ ಕೆಲ್ಸ ಮಾಡ್ಕೊಟ್ಹೋಗು ಅಂದಿದ್ರಂತೆ, ನಿನ್ನೆ. ಅವ್ರ ಮನೇಗೆ ಪಸ್ಟು ಓಗ್ಯೈತೆ. ನೀವು ಫೋನ್ ಮಾಡಿದ್ರೆ ಏಳು ಅಂತೇಳ್ಯೆತೆ" ಅಂದಳು. ನನಗೂ ಕೋಪ ಬಂದು "ಫೋನ್ ಮಾಡಿ ಹೇಳಕ್ಕೇನು ಧಾಡಿ" ಅಂತ ರೇಕ್ಕೊಂಡ್ರೆ "ಕರೆನ್ಸಿ ಖಾಲಿಯಾಗ್ಬುಟ್ಟೈತೆ ಆಂಟಿ" ಎಂದು ಕರೆಯನ್ನು ಕತ್ತರಿಸಿದಳು. ನಮ್ಮನೆಯ ಗೇಟು ಕಿರಿಕಿರ ಅಂತು. ಇಬ್ರೂ ಒಬ್ರ ಮುಖ ಇನ್ನೊಬ್ರು ನೋಡ್ಕೊಂಡು ನಿಟ್ಟುಸಿರು ಬಿಟ್ಟು ಸುಮ್ನಾದ್ವಿ. ಸಧ್ಯ! ನಾನೊಂದು ಪೊರಕೆ ಹಿಡ್ಕೊಳೋದು, ಅವ್ರು ವಾಷ್‌ಬೇಸಿನ್ನಲ್ಲಿ ಪಾತ್ರೆ ಗುಡ್ಡೆ ಹಾಕ್ಕೊಳೋ ಕೆಲ್ಸ ತಪ್ತಲ್ಲಾಂತ. ಅಂತೂ ಬೆಳಗಾಗೆದ್ದು ನಾವು ನೆನೆಯೋದು ಎಳ್ಳು

ಜೀರಿಗೆ ಬೆಳೆಯೋಳ್ನಲ್ಲ; ನಮ್ಮ ಮನೆ, ಪಾತ್ರೆ, ಬಟ್ಟೆ ಎಲ್ಲವನ್ನೂ ಸ್ವಚ್ಛಮಾಡಿ ಹೋಗೋ ಪ್ರೇಮನ್ನ ಅಂತ ಸಿದ್ಧವಾಯಿತು.

ತಿಂಡಿಗೆಂದು ನೀರು ದೋಸೆಗೆ ನೆನೆಸಿದ್ದೆ. ಇನ್ನೇನು ಪ್ರೇಮ ಬಂದಾಯ್ತಲ್ಲ; ಬೇಗ ಬೇಗ ರುಬ್ಬಿಕೊಂಡ್ಬಿಡೋಣ ಅಂದ್ಕೊಂಡು "ಕಲ್ಲವ್ವ ಮಾತಾಯೇ ಮೆಲ್ಲವ್ವ ರಾಗೀಯ ಝಲ್ಲಝಲ್ಲೆಂದು ಉದುರವ್ವಾ" ಎಂದು ಹಾಡುತ್ತಲೇ ಅವಸರದಿಂದ ಅಡುಗೆಮನೆಗೆ ಹೋಗಿ ಮಿಕ್ಸರ್ ಜಾರಿಗೆ ಅಕ್ಕಿ, ತೆಂಗಿನ ತುರಿ, ನೀರು ಹಾಕಿ ಅದರ ಸ್ಥಂಭದ ಮೇಲೆ ಕೂರಿಸಿ ಸ್ವಿಚ್ ಹಾಕಿದ್ನಾ; ನಮ್ಮನೆ ಇನ್‌ವರ್ಟರ್ ಕರೆಂಟ್ ಹೋಯ್ತು ಅನ್ನೋ ಸೂಚನೆ ಕೊಡಕ್ಕೆ ಕೂಗಕ್ಕೆ ಶುರು ಮಾಡ್ತು. ಝಲ್ಲುಝಲ್ಲೆಂದು ಉದುರೋದು ಏನು? ನನ್ನ ಕಣ್ಣಲ್ಲಿ ನೀರು ಉದುರಬೇಕು ಅಷ್ಟೇ. ಪ್ರಪಂಚದಲ್ಲಿ ಏನುಬೇಕಾದ್ರೂ ಆಗೋಲ್ಗಿ ಒಂಭತ್ತರಿಂದ ಒಂಭತ್ತೂವರೆಯೊಳಗೆ ತಿಂಡಿ ತಟ್ಟೆಗೆ, ತಟ್ಟೆಯಿಂದ ಹೊಟ್ಟೆಗೆ ಬಿದ್ದಿರ್ಬೇಕು ಅನ್ನೋ ಸಿದ್ಧಾಂತವನ್ನು ಕಟ್ಟುನಿಟ್ಟಾಗಿ ಪಾಲಿಸ್ತಿರೋವ್ರು ನಾವಿಬ್ರು. ಈಗ ಅದು ಬಿಟ್ಟು ಇನ್ನೇನು ಮಾಡಕ್ಕಾಗತ್ತೆ ಅಂತ ಯೋಚಿಸ್ತಾ, ಕೆಇಬಿ ಯವನಿಗೆ ಒಳ್ಳೆಯ ಬುದ್ಧಿ ಬಂದು ಬೇಗ ಕರೆಂಟು ಬರ್ಲಿಪ್ಪಾ, ಬೇಕಾದ್ರೆ ಚಟ್ನಿಪುಡಿ ಜೊತೆ ತಿನ್ನೋ ಬದ್ಲು ಚಟ್ನೀನು ಜೊತೆಗೆ ಮಾಡ್ಬಿಡ್ತೀನಿ ಅಂತ ಬೀಸೋಕಲ್ಲಿಗೆ 'ನಾನಿನಗೆ ಬೆಲ್ಲದಾರತಿಯ ಬೆಳಗೇನು' ಎಂದು ಆ ಗರತಿ ಹರಸಿಕೊಂಡಂತೆ ಹರಸಿಕೊಂಡೆ. ಹರಕೇಗೆ ಅದೇನು ಶಕ್ತೀನೋ ಕಣ್ರೀ ಠಕ್ ಅಂತ ಕರೆಂಟು ಬಂದೇಬಿಡೋದಾ! ಹರಸಿಕೊಂಡ್ಹಾಗೆ ಚಟ್ನೀನೂ ಮಾಡ್ದೆ ಅನ್ನಿ.

ರುಬ್ಬೋ ಕೆಲ್ಸ ಆದ್ಮೇಲೆ ಜಾರ್ ತೊಳೆದು, ಮಿಕ್ಸರ್ ಒರೆಸಿ ಇಡುವಾಗ ಫಳಫಳಾಂತಿರೋ ಅದರ ಮೇಲೆ ಇದ್ದಕ್ಕಿದ್ದಂತೆ ಮಮತೆ ಉಕ್ಕಿ ಹರೀತು. ಅದನ್ನ ನಮ್ಮಮ್ಮ ನಮ್ಮ ಹತ್ತನೇ ವರ್ಷದ ವಿವಾಹ ವಾರ್ಷಿಕೋತ್ಸವಕ್ಕೆ ಕೊಡಿಸಿದ್ದಿದ್ದು. ಇಷ್ಟು ವರ್ಷಗಳಾದ್ರೂ ಇನ್ನೂ ಚೆನ್ನಾಗೇ ಓಡ್ತಾ ಇದೆ. ಆಗೀಗ ಸಣ್ಣ ಪುಟ್ಟ ರಿಪೇರಿ ಮಾಡಿಸಿರೋದು ಬಿಟ್ರೆ ಅದು 'ಬಂಗಾರ' ಅಂತ ಹೊಗಳಿಸಿಕೊಳ್ಳೋ ಹಾಗೇ ಇದೆ. ಅದೇ ಭಾವದಲ್ಲಿ ತೇಲುತ್ತಾ ಗೀತೆಯ ಕಡೆಯ ಪದ್ಯವನ್ನೂ ಮನದಲ್ಲೇ ಅಲ್ಲ, ಸ್ವಲ್ಪ ಕೆಳದನಿಯಲ್ಲಿ ಗುನುಗುತ್ತಾ ಹಾಡಿಕೊಂಡೆ. 'ಕಲ್ಲು ಕೊಟ್ಟವ್ವಗೆ ಎಲ್ಲಾ ಭಾಗ್ಯವೂ ಬರಲಿ' ಮಿಕ್ಸರ್ ಕೊಡಿಸಿದಮ್ಮನಿಗೆ ಆರೋಗ್ಯ ಭಾಗ್ಯವಿರಲಿ; 'ಪಲ್ಲಕ್ಕಿ ಮ್ಯಾಲ ಮಗ ಬರಲಿ' ತಮ್ಮ ಕಾರ್ ತೊಗೋಬೇಕು ಅಂತಿದಾನಲ್ಲ; ಬೇಗ ಬ್ಯಾಂಕ್ ಸಾಲ ಸಿಕ್ಕು, ಕಾರು ಕೊಂಡು ಅಮ್ಮನ್ನೂ ಕರ್ಕೊಂಡು ನಮ್ಮನೆಗೆ ಬರ್ಲಿ. 'ಮಲ್ಲಿಗೆ ಹೂ ಮುಡಿಯೋ ಸೊಸೆ ಬರಲಿ' ಅವ್ನೊಬ್ನ ಮದ್ವೆಯಾದ್ರೆ, ಅಲ್ಲಿಗೆ ನಮ್ಮ ಮನೆಯ ಎಲ್ಲರ ಮದುವೇನೂ ಮುಗೀತು. ಮಲ್ಲಿಗೆ ಮುಡೀತಾಳೋ ಇಲ್ವೋ ಗೊತ್ತಿಲ್ಲ; ಮಲ್ಲಿಗೆ ಹಾಗೆ ನಗನಗ್ತಾ ಮನೆ ಬೆಳಗೋ ನಾದಿನಿ ಖಂಡಿತವಾಗ್ಲೂ ಬೇಗನೇ ಬರಲಿ.

ಇನ್ನೂ ಏನೇನು ಯೋಚ್ನೆ ಮಾಡ್ತಿದ್ನೋ ಗೊತ್ತಿಲ್ಲ; ಅಷ್ಟ್ರಲ್ಲಿ ಇವರ ದನಿ "ಒಂಭತ್ತು ಗಂಟೆ ಆಯ್ತು; ತಿಂಡಿ ರೆಡೀನಾ?" "ಓ ಆಗ್ಲೇ ರೆಡಿಯಾಯ್ತು ಬನ್ನಿ" ಎಂದು ದೋಸೆ, ಚಟ್ನಿಯ ತಟ್ಟೆಯನ್ನು ಕೈಗಿತ್ತೆ. "ಬೆಳಗಾಗೆದ್ದು ಯಾರ್ಯಾರನ್ನೆಲ್ಲಾ ನೆನಪಿಸಿಕೊಂಡಿದ್ದೆಲ್ಲಾ ಮುಗೀತಾ" ಅಂತ ಕೇಳಿದಾಗ "ಓಹೋ ಭೇಷಾಗಿ" ಎಂದೆ ಖುಷಿಯಿಂದ.

***

ಮನೆಯೇ ಶಾಲೆ

– ಜಗನ್ನಾಥ ಜೆ.ಎಸ್.

ಹುಚ್ಚರಿಗೆ ಕೊಂಬಿರುವುದಿಲ್ಲ – ನಾವು ತಪ್ಪು ಮಾಡಿದಾಗ ನಮ್ಮನ್ನು ಹಿರಿಯರು ಸರಿದಾರಿಗೆ ತರುವುದು ವಾಡಿಕೆ.

ಕೆಲವರು ಬೈಯುವುದು, ಕೆಲವರು ಹೊಡೆಯುವುದು, ಕೆಲವರು ತಿಳಿಹೇಳುವುದು. ಕೆಲವರು ಉದಾಹರಣೆ ಕೊಟ್ಟು ತಿಳಿಸಿದರೆ, ಮತ್ತೆ ಕೆಲವರು ಲಗ್ನಪತ್ರಿಕೆ ಚಿತ್ರದ ನರಸಿಂಹ ರಾಜುವಿನಂತೆ ಗಾದೆ ಉದಾಹರಿಸುವುದು, ಕೆಲವರು ಒಂದು ಕಥೆ ಹೇಳಿ ಅದರಿಂದಲೇ ನಮ್ಮ ತಪ್ಪು ತೋರಿಸುವುದು. ನಮ್ಮಮ್ಮ ಅನೇಕ ವೇಳೆ ವಿಕ್ರಂ ಬೇತಾಳ, ವಿಷ್ಣು ಶರ್ಮನ ಪಂಚತಂತ್ರ, ಮಯೂರದ ಕಥೆ ಹೇಳಿ ತಿಳಿ ಹೇಳುವುದಿತ್ತು.

ನಾವು ನಾಲ್ವರು ಅಣ್ಣ ತಮ್ಮಂದಿರು. ನಮಗೆ ಹೊಡೆದರೆ ಅಮ್ಮನಿಗೇ ನೋವಾಗುತ್ತಿತ್ತು. ಜಗಳ, ಹೊಡೆದಾಟ ನಮ್ಮ ಬಾಲ್ಯದ ಆಟ. ಅನೇಕ ವೇಳೆ ಬಿದ್ದು ಪೆಟ್ಟು ಮಾಡಿಕೊಳ್ಳುತ್ತಿದೆವು. ಅಮ್ಮ ಅಳುತಿದ್ದಳು. ಗಾಯ ಮಾಗಿದಾಗ ಕಲೆ ಅಥವಾ ಗುರುತು ಬಹಳ ದಿನ ಉಳಿದುಬಿಡುತ್ತಿತ್ತು. ನಮ್ಮಪ್ಪ ಒಮ್ಮೆ, ಏನೋ ಇಷ್ಟೊಂದು ಆಭರಣ ನಿನ್ನ ಮೈಮೇಲೆ ಎನ್ನುತ್ತಿದ್ದರು. ಗಾಯದ ಗುರುತು ಆಭರಣ!

ನಾವು ಹುಡುಗಾಟದಲ್ಲಿ ಒಮ್ಮೆಮ್ಮೆ ಹುಚ್ಚು ಹುಚ್ಚಾಗಿ ಬೈಸಿಕಲ್ ಓಡಿಸುತ್ತಿದ್ದೆವು. ಒಮ್ಮೆ ನನ್ನಮ್ಮ, 'ಹುಚ್ಚರಿಗೆ ಕೊಂಬು ಇರುವುದಿಲ್ಲ. ಹೀಗೆಲ್ಲ ಆಡಿದರೆ ಹುಚ್ಚ ಎನ್ನುತ್ತಾರೆ, ನೋಡಿದರೆ ಇವನು ಹುಚ್ಚ ಎಂದು ಗುರುತಿಸಲಾಗಲ್ಲ, ನಾವಿರುವ ರೀತಿ, ನಮ್ಮ ನಡೆ ನುಡಿ ನೋಡಿ ಜನ ಹುಚ್ಚ ಎನ್ನುತ್ತಾರೆ' ಎಂದು ತಿಳಿಸಿದಳು.

ನಾನು ಯೋಚಿಸಿದೆ. ಹೌದು. ಮೆಳ್ಳುಗಣ್ಣ,ಕುಂಟ, ಇವೆಲ್ಲ ನೋಡಿದರೆ ಗೊತ್ತಾಗುತ್ತೆ. ರಾ.ಶಿ.ಯವರು ತಿಳಿಸಿದ ಅನೇಕ ರೀತಿಯ ಹುಚ್ಚರಲ್ಲಿ, ತ್ರಿವೇಣಿ ಚಿತ್ರಿಸಿರುವ ಮನೋರೋಗಿಗಳು ಯಾರನ್ನೂ ನೋಡಿದರೆ ಗೊತ್ತಾಗುವುದಿಲ್ಲ.

ಹುಚ್ಚರಿಗೆ ಕೊಂಬಿರುವುದಿಲ್ಲ. ನೋಡಿದ ತಕ್ಷಣ ಗುರುತಿಸಲು ಆಗುವುದಿಲ್ಲ. ಈಗಲೂ ನಾನು ಅನೇಕ ಬಾರಿ ನನ್ನಮ್ಮನ ಮಾತು ನೆನಪಿಸಿಕೊಳ್ಳುತ್ತೇನೆ. ತಪ್ಪು ಮಾಡಿದಾಗ ಮನದಟ್ಟು ಮಾಡುವುದು, ತಿದ್ದುವುದು ಒಂದು ಕಲೆ. ಅದು ಮನ ಮುಟ್ಟಬೇಕು, ಮನ ಕದಡಬೇಕು, ಮನ ಪರಿವರ್ತಿಸಬೇಕು. ಅದಕ್ಕೆ ಪ್ರಾಮಾಣಿಕ ಸಲಹೆ, ಸಮಯೋಚಿತ ನುಡಿ, ಅರ್ಥಪೂರ್ಣ ಉದಾಹರಣೆ ಮುಖ್ಯ.

ನಾನು ಐ ಐ ಎಂ ನಲ್ಲಿ ಕಲಿಯದಿದ್ದದ್ದು ಮನೆಯಲ್ಲಿ ಕಲಿತೆ. ಮನೆಯೇ ಮೊದಲ ಪಾಠಶಾಲೆ. ಅಮ್ಮನೇ ಮೊದಲ ಗುರು.

***

ಪತ್ತೇದಾರಿ ಸಾಹಿತ್ಯಕ್ಕೆ ಹೊಸ ದಿಕ್ಕು ತೋರಿದ

ಸಾಹಿತ್ಯಲೋಕದ "ಬಂಗಾರದ ಮನುಷ್ಯ" ಟಿ ಕೆ ರಾಮರಾವ್

– ಮಹಾಬಲ

1985ರಲ್ಲಿ ನಾನು ನಮ್ಮ ಬನಶಂಕರಿ ಎರಡನೇ ಹಂತದ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ದಿನ ಶಶಿಧರ್ ಅವರು "ಓ ರಾಮರಾವ್ ಬಂದ್ರು" ಎನ್ನುತ್ತ, ಖಾತೆ ಸಂಖ್ಯೆ ಇದ್ದ ಹಾಳೆ ತೆಗೆದು ಸಿದ್ಧವಾದರು. ನಾನು ಯಾರು ಎನ್ನುವಂತೆ ಅವರತ್ತ ನೋಡಿದೆ. ಅದಕ್ಕೆ ಅವರು "ಪತ್ತೇದಾರಿ" ಎಂದರು.

ನಾನೂ ಅವರು ಬರುತ್ತಿದ್ದ ಹಾದಿಯತ್ತ ಕಣ್ಣಾಡಿಸಿದೆ.ಸುಮಾರು ಆರು ಅಡಿ ಎತ್ತರದ ಆಕರ್ಷಕ ಸುಪುಷ್ಟ ಆಳು. ನೀಟಾಗಿ ಬಾಚಿದ್ದ ಕ್ರಾಫು. ಸರಸರ ಬಂದೊಡನೆ "ಶಶಿ ಹೇಗಿದ್ದೀರಿ?" ಎಂದು ಕುಶಲ ವಿಚಾರಿಸಿದರು. ಅಷ್ಟೇ ಅಲ್ಲ ವ್ಯವಸ್ಥಾಪಕದಿಂದ ಹಿಡಿದು ಅಧೀನ ಸಿಬ್ಬಂದಿವರೆಗೆ ಎಲ್ಲರನ್ನೂ ವಂದಿಸಿದರು. ನನ್ನತ್ತ ನೋಡಿ "ಯಾರಿವರು? ಹೊಸಬರಂತೆ ಕಾಣುತ್ತಾರೆ."ಎಂದು ವಿಚಾರಿಸಿದಾಗ ಶಶಿಧರ್ ನನ್ನ ಪೂರ್ಣ ಪ್ರವರ ಒಪ್ಪಿಸಿದರು. ರಾಮರಾಯರು ನನ್ನೊಡನೆ ಸಂತಸದಿಂದ ಮಾತನಾಡಿದರು. ಅವರು ತಾವೊಬ್ಬ ಪ್ರಸಿದ್ಧ ಸಾಹಿತಿ ಎಂಬ ಹಮ್ಮನ್ನು ಒಂದಿಷ್ಟೂ ತೋರಿಸಲೇ ಇಲ್ಲ.

ಆ ಶಾಖೆಗೆ ಅವರೊಬ್ಬ ಪ್ರತಿಷ್ಠಿತ ಗ್ರಾಹಕರೆಂದು ತಿಳಿಯಿತು. ನಮ್ಮ ಶಾಖೆಯ ಸೇವೆಯ ಬಗ್ಗೆ ಹತ್ತು ಜನರ ಹತ್ತಿರ ಒಳ್ಳೆಯ ಮಾತುಗಳನ್ನಾಡಿ ಅವರೆಲ್ಲ ನಮ್ಮ ಬ್ಯಾಂಕಿನಲ್ಲಿ ಖಾತೆ ತೆರೆಯುವಂತೆ ಮಾಡಿದ್ದರು. ಗ್ರಾಹಕ ಸಭೆಗಳಲ್ಲಿ ಭಾಗವಹಿಸಿ ಶಾಖೆಯ ಬಗ್ಗೆ ಪ್ರೋತ್ಸಾಹಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು.

ಪ್ರತಿಬಾರಿ ಶಾಖೆಗೆ ಬಂದಾಗ ಸಾಹಿತ್ಯ ಲೋಕದ ಒಳತುಕೆಡುಕುಗಳನ್ನು ಕುರಿತು ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಸಾಹಿತಿಗಳೆನ್ನಿಸಿಕೊಂಡವರ ರಾಜಕೀಯ, ಜಾತಿವಾದ, ಗುಂಪುಗಾರಿಕೆಗಳನ್ನು ನಿರ್ಭೀತವಾಗಿ ಖಂಡಿಸುತ್ತಿದ್ದರು.

ಒಮ್ಮೆ ಅವರು ಎಲ್ಐಸಿ ಪ್ರೀಮಿಯಂಗಾಗಿ ಕೊಟ್ಟ ಚೆಕ್ಕಿಗೆ ಸಹಿ ಹಾಕಿರಲಿಲ್ಲ. ಸಾಮಾನ್ಯವಾಗಿ ಅಂತಹ ಚೆಕ್ಕುಗಳನ್ನು ಪಾವತಿ ಮಾಡದೆ ವಾಪಸು ಮಾಡುವುದು ವಾಡಿಕೆ. ಚೆಕ್ಕು ರಾಮರಾಯರದೆಂದು ಗೊತ್ತಾಯಿತು. ನಾನು ಅವರಿಗೆ ಪೋನ್ ಮಾಡಿ "ರಾಯರೆ, ನೀವು ಎಲ್ಐಸಿಗೆ ನೀಡಿದ್ದ ಚೆಕ್ಕಿಗೆ ಸಹಿ ಇಲ್ಲ, ವಾಪಸು ಮಾಡಬೇಕೆ?"ಎಂದು ತಮಾಷೆ ಮಾಡಿದೆ. ಅದಕ್ಕೆ ಅವರು "ಅಯ್ಯಯ್ಯೋ ಹಾಗೆ ಮಾಡಬೇಡಿ, ಈಗ ಬಂದೆ" ಎನ್ನುತ್ತ ಐದು ನಿಮಿಷಗಳಲ್ಲಿ ಬ್ಯಾಂಕಿಗೆ ಬಂದರು. ಚೆಕ್ಕಿಗೆ ಸಹಿ ಮಾಡುತ್ತ ಎಲ್ಐಸಿಯವರು ಈ ಚೆಕ್ಕನ್ನು ತಿರುಗಿಸಿ ಮುರುಗಿಸಿ ಪರಿಶೀಲಿಸಿ ನೋಡಿ ತೆಗೆದುಕೊಂಡ್ರು. ಸಹಿ ಇಲ್ಲ ಅಂತ ನೋಡಲೇ ಇಲ್ಲ. ನೀವು ಬ್ಯಾಂಕಿನವರು ಕಿಲಾಡಿಗಳು" ಎಂದು ತಮಾಷೆ ಮಾಡಿದರು.

ಹೀಗೆ ಅವರೊಮ್ಮೆ ಬ್ಯಾಂಕಿನೊಳಗೆ ಬಂದರೆಂದರೆ ಸಂತೋಷದ ಅಲೆ ತಾನೇತಾನಾಗಿ ಉಕ್ಕಿ ಹರಿಯುತ್ತಿತ್ತು. ಅವರು ಶಾಖೆಯಿಂದ ಹೋದ ಮೇಲೂ ಬಹಳ ಹೊತ್ತು ಅದೇ ಭಾವ ಇರುತ್ತಿತ್ತು.

ಒಮ್ಮೆ ದೇವಣಿ ಸಂಗ್ರಹಕ್ಕಾಗಿ ಬಡಾವಣೆಯಲ್ಲಿ ಮನೆಮನೆಗೂ ಅಲೆಯುತ್ತಾ ಅವರ ಮನೆಗೂ ಭೇಟಿ ನೀಡಿ ಬಂದ ಉದ್ದೇಶ ತಿಳಿಸಿದೆವು. ಅದಕ್ಕೆ ಅವರು"ನಾನು ಅಷ್ಟೊಂದು ಶ್ರೀಮಂತನಲ್ಲ,.ವರಮಾನ ತರುವ ಉದ್ಯೋಗವಿಲ್ಲ. ಪೆನ್ಷನ್ ಮೊದಲೇ ಇಲ್ಲ. ಪುಸ್ತಕಗಳ ಸಂಭಾವನೆಯಿಂದ ಬಂದ ಹಣವನ್ನು ನಿಮಗಿಂತ ಹೆಚ್ಚು ಬಡ್ಡಿಕೊಡುವ ಬಿಇಎಲ್,

ಬಿಎಚ್‌ಇಎಲ್ ಅಂಥ ಕಡೆ ಠೇವಣಿ ಇಡುತ್ತೇನೆ. ಸಂಸಾರ ನಡೀಬೇಕಲ್ಲಪ್ಪ" ಎಂದು ಸ್ಪಷ್ಟವಾಗಿ ತಿಳಿಸಿದರು. ಅವರು ನಮಗೆ ಕಾಫಿಗೆ ಉಪಚರಿಸಿದಾಗ ನಾವು ಬೇಡವೆಂದೆವು. ಅದಕ್ಕೆ ಅವರು "ದಯವಿಟ್ಟು ಬೇಡ ಅನ್ನಬೇಡಿ ನಿಮ್ಮ ನೆಪದಲ್ಲಿ ನನಗೂ ಅರ್ಧ ಕಪ್ ಕಾಫಿ ಸಿಗುತ್ತೆ. ನಾನು ಹಾರ್ಟ್ ಪೇಷಂಟ್ ಅಂತ ಕಾಫಿ ಡೋಸ್ ಕಡಿಮೆ ಮಾಡಿದ್ದಾಳೆ ಮಡದಿ"ಎಂದು ಚಟಾಕಿ ಹಾರಿಸಿದರು.

ಆ ಸಂದರ್ಭದಲ್ಲಿ ಅವರು ಪ್ರತಿಷ್ಠಿತ ನಿಯತಕಾಲಿಕೆಗಳಿಗೆ ಬರೆದು ಕಳಿಸಿದ್ದ ಕತೆ, ಕಾದಂಬರಿಗಳ ಕಡತಗಳನ್ನು ತೋರಿಸಿದರು. ಸ್ಫುಟವಾದ ಸ್ವಲ್ಪ ದಪ್ಪ ಎನ್ನಬಹುದಾದ ಕೈಬರಹ, ಕಡತದ ಅಚ್ಚುಕಟ್ಟು ಎಲ್ಲ ಬೇರೆ ಲೇಖಕರಿಗೆ ಮಾದರಿ ಎನ್ನಿಸುವಂತಿತ್ತು. ಆಗ ನನ್ನನ್ನು ಆಕರ್ಷಿಸಿದುದು ಅವರ ಮನೆಯ ಕೋಣೆಯ ಅಟ್ಟವನ್ನು ಕಪಾಟುಗಳಂತೆ ಮಾರ್ಪಡಿಸಿದ್ದುದು. "ಯಾಕೆ ಗೊತ್ತೆ? ಸಾಹಿತಿಗಳ ಮನೆಯ ಪುಸ್ತಕಗಳನ್ನು ಕಂಡವರ ಕಣ್ಣಿಗೆ ರಾಚದಂತೆ ಇಟ್ಟು ಬಾಗಿಲು ಹಾಕಿಬಿಡಬಹುದು. ನೀವೂ ಮನೆ ಕಟ್ಟುವಾಗ ಹಾಗೇ ಮಾಡಿ" ಎಂದು ಸಲಹೆ ನೀಡಿದರು.

ಒಂದು ಕಾಲದಲ್ಲಿ ತಮ್ಮ ಲೇಖನಗಳನ್ನು ಮುದ್ರಿಸದೆ ವಾಪಸು ಮಾಡುತ್ತಿದ್ದ ಪತ್ರಿಕೆಯವರೇ ತಾವು ಜನಪ್ರಿಯರಾದಾಗ ಮುಂಗಡ ಹಣ ನೀಡಿ ಕಾದಂಬರಿ ಬರೆದುಕೊಡಲು ವಿನಂತಿಸಿದ ಸ್ವಾರಸ್ಯಕರ ವಿಷಯವನ್ನೂ ತಿಳಿಸಿದ್ದರು.

ಅಂದು ತಮ್ಮ "ಕೊನೆಯ ಸಾಕ್ಷಿ" ಎಂಬ ಕಥಾಸಂಕಲನವನ್ನು ಹಸ್ತಾಕ್ಷರ ಹಾಕಿ ಕೊಡುಗೆಯಾಗಿ ನೀಡಿದ್ದು ನನ್ನ ಸಂಗ್ರಹದ ಮರೆಯಲಾಗದ ಮಾಣಿಕ್ಯವಾಗಿದೆ. ಅವರ ಸ್ನೇಹ ವಿಶ್ವಾಸದ ನೆನಪುಗಳ ಕೊನೆಯ ಸಾಕ್ಷಿಯಾಗಿದೆ.

ನಮ್ಮ ಬ್ಯಾಂಕಿನ ಬೆಂಗಳೂರು ನಗರ ಶಾಖೆಯ ಕನ್ನಡ ಸಂಘ ಹೊರತರುತ್ತಿದ್ದ ವಾರ್ಷಿಕ ಸಾಹಿತ್ಯ ಸಂಚಿಕೆ "ಮಂದಾರ"ದ 1986ನೆಯ ವರ್ಷದ ಪ್ರತಿಯೊಂದನ್ನು ಅವರಿಗೆ ನೀಡಿದ್ದೆ. ಅದನ್ನು ಅವರು ಒಂದು ವಾರದಲ್ಲಿ ಓದಿ ತಮ್ಮ ಮೆಚ್ಚುಗೆಯನ್ನು ವಿವರವಾಗಿ ಬರೆದುಕೊಟ್ಟಿದ್ದರು. ಅಂಥ ಸಾಹಿತ್ಯ ಪ್ರೋತ್ಸಾಹಕರು ಅವರು.

ಒಮ್ಮೆ ಅದೇ "ಮಂದಾರ" ಸಂಚಿಕೆಗೆ ಅವರ ಒಂದು ಸಂದರ್ಶನ ಕೋರಿದಾಗ ಸಂತೋಷದಿಂದ ಒಪ್ಪಿಕೊಂಡಿದ್ದರು. ನಾನು ಮತ್ತು ಜಿ.ಎನ್.ನರಸಿಂಹಮೂರ್ತಿ ಪತ್ತೇದಾರಿ ಸಾಹಿತ್ಯದ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಮತ್ತು ವಿವರವಾಗಿ ಉತ್ತರ ನೀಡಿದ್ದರು. ನೀವು ಮೆಚ್ಚುವ ಇತರ ಪತ್ತೇದಾರಿ ಲೇಖಕರು ಯಾರು ಎಂದು ನಾವು ಕೇಳಿದಾಗ ಬಿ.ಪ.ಕಾಳೆ, ಸಾಸ್ಕಾ ಮೂರ್ತಿ ಎಂದು ಕೆಲವು ಪತ್ತೇದಾರಿ ಸಾಹಿತ್ಯದ ಸಹಲೇಖಕರ ಹೆಸರುಗಳನ್ನು ನಿರ್ಮತ್ಸರದಿಂದ ಉಲ್ಲೇಖಿಸಿದ್ದರು.

ಅಂದಿನ ಮೈಸೂರು ಬ್ಯಾಂಕ್ ಕನ್ನಡ ಬಳಗ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಜಂಟಿಯಾಗಿ ಆಯೋಜಿಸಿದ್ದ "ಕಥಾಶಿಬಿರ"ದಲ್ಲಿ ಭಾಗವಹಿಸಿ ಜನಪ್ರಿಯ ಸಾಹಿತ್ಯದ ಬಗ್ಗೆ ಸೊಗಸಾಗಿ ಮಾತನಾಡಿ ಶಿಬಿರಾರ್ಥಿಗಳ ಮನಗೆದ್ದಿದ್ದರು. ಸಾಹಿತ್ಯದ ಮೌಲ್ಯಗಳನ್ನು ಬಿಟ್ಟುಕೊಡದೆ ಓದುಗರ ಅರಿವನ್ನು ವಿಸ್ತರಿಸುವುದು ಲೇಖಕನ ಗುರಿಯಾಗಬೇಕು ಎಂದು ಪ್ರತಿಪಾದಿಸಿದ್ದು ಅವರ ಪ್ರಾಮಾಣಿಕ ಮಾತುಗಳಿಗೆ ಸಾಕ್ಷಿಯಾಗಿತ್ತು.

ವೈಯಕ್ತಿಕವಾಗಿ ಹೇಳುವುದಾದರೆ ನಮ್ಮ ಮನೆಯ ಗೃಹಪ್ರವೇಶಕ್ಕೆ ಹಾಗೂ ನನ್ನ ಮದುವೆಗೆ ಬಂದು ಹರಸಿದ್ದರು. ಮದುವೆಗೆ ಬಂದಾಗ "ಏನಪ್ಪ ಮನೆ ಕಟ್ಟಿ ನೋಡು ಮದುವೆ ಮಾಡಿ ನೋಡು ಎನ್ನುತ್ತಾರೆ. ನೀವು ಎರಡನ್ನೂ ಒಟ್ಟಿಗೆ ಸಾಧಿಸಿಬಿಟ್ಟರಲ್ಲ" ಎಂದು ತಮ್ಮ ಎಂದಿನ ವಿನೋದದ ಶೈಲಿಯಲ್ಲಿ ಉದ್ಗರಿಸಿದ್ದರು.

ಇಂಥ ಹೃದಯ ಶ್ರೀಮಂತ ಟಿ ಕೆ ಆರ್ 1988ರ ನವೆಂಬರ್ 11 ರಂದು ಬಿಎಚ್ಇಎಲ್‌ನಲ್ಲಿನ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಹೋದಾಗ ತೀವ್ರ ಹೃದಯಾಘಾತವಾಗಿ ಅಲ್ಲೇ ನಿಧನರಾದರು. ವಿಷಯ ತಿಳಿದು ಮಾರನೆಯ ದಿನ ಅವರ ಮನೆಗೆ ಹೋದಾಗ ರಾಯರು ಸಮಾರಂಭದಲ್ಲಿ ನೀಡಿದ್ದ ಶಾಲನ್ನೇ ಹೊದ್ದು ನಿಶ್ಚಲರಾಗಿದ್ದರು. ಮೌನ ಹಾಗೂ ಕಂಬನಿ ಬಿಟ್ಟರೆ ಮತ್ತಾವ ಆಡಂಬರಕ್ಕೂ ಅಲ್ಲಿ ಅವಕಾಶವಿರಲಿಲ್ಲ.

ಇಂದೂ ಬನಶಂಕರಿ ಎರಡನೇ ಹಂತದ ನಾಗಲಕ್ಷ್ಮಿ ಕಲ್ಯಾಣ ಮಂಟಪದ ಹತ್ತಿರವಿದ್ದ ಅವರ ಮನೆಯತ್ತ ಸುಳಿದಾಗ ಅವರ ನೆನಪುಗಳು ತಂತಾನೇ ಅನಾವರಣಗೊಳ್ಳುತ್ತದೆ.

***

ಬಯಕೆ

– ಬಿ.ಎಸ್. ಶ್ರೀನಿವಾಸ್

ಇರಬೇಕು ಇದ್ದೂ ಇಲ್ಲದಂತೆ
ಹರಿವ ನದಿಯ ನಿರ್ಮಲ ನೀರಿನಂತೆ
ಉಲಿದು ನಲಿಸುವ
ಮಧುರ ಕಂಠದ ಪುಟ್ಟ ಹಕ್ಕಿಯಂತೆ

ಇರಬೇಕು ಇದ್ದೂ ಇಲ್ಲದಂತೆ
ಹೊಳೆವ ಇಬ್ಬನಿಯ ಮುತ್ತಿನಂತೆ
ಹಾಲುಗಲ್ಲದ ಹಸುಳೆಯ
ಸ್ನಿಗ್ಧ ಸುಂದರ ನಗುವಿನಂತೆ

ಇರಬೇಕು ಇದ್ದೂ ಇಲ್ಲದಂತೆ
ಉರಿದುರಿದು ಜೀವ ತೊರೆದು
ಬೆಳಕ ನೀಡುವ
ದೇಗುಲದ ಹಣತೆಯಂತೆ

ಇರಬೇಕು ಇದ್ದೂ ಇಲ್ಲದಂತೆ
ಕಸವ ಭುಜಿಸಿ ರಸವ ಕೊಡುತ
ನಿಶ್ಚಲವಾಗಿ ನಿಂತ
ಭವ್ಯ ವನರಾಜಿಯಂತೆ

ಇರಬೇಕು ಇದ್ದೂ ಇಲ್ಲದಂತೆ
ತಮ್ಮದೆಲ್ಲವ ನೀಡಿ
ತಮಗಾಗಿ ಏನನ್ನೂ ಬಯಸದ
ಅಕ್ಕರೆಯ ಅಮ್ಮಂದಿರಂತೆ

***

ಪ್ರವಾಸ ಕಥನ

ಅದ್ವೈತ ಆಶ್ರಮ ಮಾಯಾವತಿ

– ಗುರುರಾಜ ಶಾಸ್ತ್ರಿ



ಜುಲೈ 2022, ನನ್ನ ಅಣ್ಣ ಒಂದು ಗೂಗಲ್ ಕೊಂಡಿ ವಾಟ್ಸಾಪ್ ಮೂಲಕ ಕಳಿಸಿದ. ಅದ್ವೈತ ಆಶ್ರಮದಲ್ಲಿ "ಅದ್ವೈತಾಮೃತಮ್" ಎಂಬ 6 ದಿನದ ತರಗತಿಗಳು ಇದ್ದು, ಸೆಪ್ಟೆಂಬರ್ ಹಾಗೂ ನವೆಂಬರ್‌ನಲ್ಲಿ ಆಂಗ್ಲ ಭಾಷೆಯಲ್ಲಿ ಹಾಗೂ ಅಕ್ಟೋಬರ್ ತಿಂಗಳನಲ್ಲಿ ಹಿಂದಿ ಭಾಷೆಯ ತರಗತಿಗಳು ಎಂದು ತಿಳಿಸಿದ. ಅಧ್ಯಯನಕ್ಕೆ ಆಯ್ದುಕೊಂಡಿದ್ದ ವಿಷಯ ಶ್ರೀ ಶಂಕರಾಚಾರ್ಯ ವಿರಚಿತ "ವಿವೇಕ ಚೂಡಾಮಣಿ".

ಅದ್ವೈತ ಆಶ್ರಮವು ಹಿಮಾಲಯದ ನಡುವೆ ಇದೆ ಎಂದು ತಿಳಿದೊಡನೆ ಬೇರೆ ಏನೂ ಯೋಚಿಸದೆ ಹಣ ಪಾವತಿ ಮಾಡಿ ಸೆಪ್ಟೆಂಬರ್ ತಿಂಗಳ ತರಗತಿಗೆ ನನ್ನ ಹಾಜರಿ ಕಾಯ್ದಿರಿಸಿದೆ. ಇದಾದ ನಂತರವೇ ನನಗೆ ತಿಳಿದದ್ದು ಅಣ್ಣ ಮತ್ತು ಅವನ ಸ್ನೇಹಿತರು ನವೆಂಬರ್ ತರಗತಿಗೆ ಬುಕ್ ಮಾಡಿದ್ದಾರೆಂದು. ಬೆಂಗಳೂರಿನಿಂದ ದೆಹಲಿಗೆ ವಿಮಾನ, ದೆಹಲಿಯಿಂದ ಹಲ್ದವಾನಿಗೆ ರೈಲು ಹಾಗೂ ಹಲ್ದವಾನಿಯಿಂದ ಅದ್ವೈತಾಶ್ರಮಕ್ಕೆ ಕಾರು ಎಂದು ನಿಶ್ಚಯವಾಯಿತು. ಒಬ್ಬನೇ ಹೋಗುತ್ತಿದ್ದರಿಂದ ಮನದ ಮೂಲೆಯಲ್ಲಿ ಸ್ವಲ್ಪ ಅಂಜಿಕೆಯೂ ಇತ್ತು. ಒಂದು ದಿನ ನನ್ನ ಕಾಲೇಜು ಗೆಳೆಯ



ಚೇತನ್ ಮನೆಗೆ ಬಂದಿದ್ದಾಗ ಈ ತರಗತಿಯ ವಿಷಯ ತಿಳಿಸಿದೆ. ವೇದಾಧ್ಯಯನ ಮಾಡುತ್ತಿರುವ ಅವನೂ ಈ ತರಗತಿಗೆ ಸೇರಲು ಆಸಕ್ತಿ ತೋರಿದ. ಕೂಡಲೇ ಅವನಿಗೂ ತರಗತಿಗೆ ಬುಕ್ ಮಾಡಿ ನಮ್ಮ ಬೇರೆ ಎಲ್ಲಾ ಪ್ರಯಾಣ

ವ್ಯವಸ್ಥೆಗಳನ್ನು ಮಾಡಿಕೊಂಡೆವು. ಚೇತನ್ ನನ್ನ ಜೊತೆ ಬರುತ್ತಿದ್ದಾನೆ ಎಂಬುದು ಖಾತ್ರಿಯಾದ ಮೇಲೆ ಮನಸ್ಸಿನಲ್ಲಿದ್ದ ಅಂಜಿಕೆ ಮಾಯವಾಯಿತು.




ಅದ್ವೈತ ಆಶ್ರಮದ ಬಗ್ಗೆ 1899ರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ವಿದೇಶಿ ಶಿಷ್ಯರಾದ ಸೆವಿಯರ್ ದಂಪತಿಗಳಲ್ಲಿ ಹಿಮಾಲಯದ ನಡುವಿನಲ್ಲಿ ಅದ್ವೈತ ಸಾಧಕರಿಗೇ ಮೀಸಲಾದ ಒಂದು ಆಶ್ರಮ ನಿರ್ಮಿಸಬೇಕೆಂಬ ಬಯಕೆಯನ್ನು ತೋಡಿಕೊಂಡರಂತೆ. ಈ ಬಯಕೆಯನ್ನು ನೆರವೇರಿಸಲು ಹೊರಟ ಸೆವಿಯರ್ ದಂಪತಿಗಳಿಗೆ ಚಂಪಾವತ್ ಊರಿನ ಮಾಯಾಪತ್ ಎಂಬಲ್ಲಿ ಒಂದು ಟೀ ಎಸ್ಟೇಟ್ ವ್ಯಾಪಾರಕ್ಕಿರುವುದು ತಿಳಿದು ಅದನ್ನು ಕೊಂಡು ಆಶ್ರಮವನ್ನು ನಿರ್ಮಿಸಿದರು. ಈ ಮಾಯಾಪತ್ ಜಾಗವೇ ಈಗ ಮಾಯಾವತಿ ಎಂದು ಕರೆಯಲ್ಪಟ್ಟಿದೆ. ಮೇಲ್ನೋಟಕ್ಕೆ ಇದು ರಾಮಕೃಷ್ಣ ಆಶ್ರಮದ ಒಂದು ಅಂಗವಾಗಿದ್ದರೂ, ಕಾರ್ಯವೈಖರಿಯಲ್ಲಿ ಇದು ಸಂಪೂರ್ಣ ಅದ್ವೈತ ಸಿದ್ಧಾಂತಕ್ಕೆ ಮೀಸಲಾಗಿದೆ. ಯಾವುದೇ ಮೂರ್ತಿ ಪೂಜೆ ಇಲ್ಲದೆ ಕೇವಲ ಓಂಕಾರ, ಜೀವಾತ್ಮ, ಪರಮಾತ್ಮ, ಮಾಯೆಗಳೆಂಬ ಆಧ್ಯಾತ್ಮಿಕ ವಿಚಾರಗಳ ಚರ್ಚೆ ಮತ್ತು ಉಪನ್ಯಾಸಗಳೇ ಇಲ್ಲಿನ ಮುಖ್ಯ ವಿಷಯಗಳು.

ಈ ಉದ್ದೇಶಗಳಿಂದ ನಿರ್ಮಿಸಿದ ಈ ಆಶ್ರಮದಲ್ಲಿ ಒಮ್ಮೆ ಆಶ್ರಮದ ಸಂನ್ಯಾಸಿಗಳೊಬ್ಬರು ರಾಮಕೃಷ್ಣರ ಫೋಟೋ ಇಟ್ಟು ಪೂಜೆ ಮಾಡಲಾರಂಭಿಸಿದರು. ಇದನ್ನು ಗಮನಿಸಿದ ವಿವೇಕಾನಂದರು ಕೋಪಗೊಂಡು, ಕೂಡಲೇ ಆ ಫೋಟೋ ತೆಗೆಯಬೇಕೆಂದು ಆಜ್ಞೆ ಮಾಡಿದರು. ಆ ಸಂತರು ಬೇಸರಗೊಂಡು ಮಾತೆ ಶಾರದ ದೇವಿಗೆ ಇದರ ಬಗ್ಗೆ ಪತ್ರ ಬರೆದರು. ವಿವೇಕಾನಂದರು ಹೇಳುತ್ತಿರುವುದು ಸರಿಯಾಗಿಯೇ ಇದೆ, ಅಲ್ಲಿ ಯಾರ ಪೂಜೆಯೂ ಬೇಡ ಮತ್ತು ಈ ಅದ್ವೈತ ಸಿದ್ಧಾಂತದಲ್ಲಿ ರಾಮಕೃಷ್ಣರು ಸಂಪೂರ್ಣವಾಗಿ ನಂಬಿಕೆ ಇಟ್ಟು ಆಚರಿಸುತ್ತಿದ್ದರಿಂದ ಅವರ ಅನುಯಾಯಿಗಳೂ ಇದನ್ನೇ ಆಚರಿಸಬೇಕು ಎಂದು ಪತ್ರಕ್ಕೆ ಉತ್ತರ ಕೊಟ್ಟರು.

ಆಶ್ರಮದ ಸುತ್ತ ಮುತ್ತ

ಲೋಹಾಘಾಟ್ ಎಂಬುವ ಹಳ್ಳಿಯಿಂದ, ಸುಮಾರು 7 ಕಿಲೋಮೀಟರ್ ದಟ್ಟ ಕಾಡಿನಲ್ಲಿ ಪ್ರಯಾಣಿಸಿದರೆ ಸಿಗುವುದೇ ಅದ್ವೈತ ಆಶ್ರಮ. ಡಾಂಬರು ರಸ್ತೆ ಆಶ್ರಮದವರೆಗೂ ಇದೆ. ಆಶ್ರಮದ ಮುಖ್ಯ ಕಟ್ಟಡದಲ್ಲಿ ಛಾಯಾಗ್ರಹಣ ನಿಷೇಧ. ಸುಮಾರು ನೂರಿಪ್ಪತ್ತು ವರ್ಷಕ್ಕೂ ಹಳೆಯದಾದ ಕಟ್ಟಡವನ್ನು ಟಾಟಾ ಹಾಗೂ ಇನಫೋಸಿಸ್ ಫೌಂಡೇಶನ್ ಸಹಾಯದಿಂದ ರಿಪೇರಿ ಮಾಡಲಾಗಿದೆ. 1901ರಲ್ಲಿ ಸ್ವಾಮಿ ವಿವೇಕಾನಂದರು ಈ ಆಶ್ರಮದಲ್ಲಿ 15 ದಿನ ಉಳಿದುಕೊಂಡಿದ್ದು ಅವರು ವಾಸಿಸಿದ್ದ ಕೊಠಡಿಗಳನ್ನು ಈಗ ಧ್ಯಾನ ಮಂದಿರವಾಗಿ ಪರಿವರ್ತಿಸಲಾಗಿದೆ.



ಆಶ್ರಮದ ಯಾವ ಕಡೆ ನೋಡಿದರೂ ಕಿಲೋಮೀಟರುಗಳಷ್ಟು ದೂರ ಎಲ್ಲಿ ನೋಡಿದರೂ ಹಿಮಾಲಯ ಶಿಖರ ಗಳು ಕಾಣಿಸುತ್ತವೆ. ಆಶ್ರಮದ ಪಕ್ಕದ ಬೆಟ್ಟ ಹತ್ತುತ್ತಾ ಸುಮಾರು ಮೂರು ಕಿಲೋ ಮೀಟರ್ ಕಾಡಿನ ರಸ್ತೆಯಲ್ಲಿ ನಡೆದರೆ ನಮಗೆ ವಿವೇಕಾನಂದರು ಧ್ಯಾನ ಮಾಡಿದ ಧರ್ಮಘಡ್ ಎಂಬ ಜಾಗ ಸಿಗುತ್ತದೆ. ಮಳೆ ಇರುವ ಸಮಯದಲ್ಲಿ ಇಲ್ಲಿಗೆ ಹೋಗುವುದು ಅಸಾಧ್ಯ. ಜಾರಿಕೆ ಹಾಗೂ ಜಿಗಣೆ ಗಳ ಕಾಟ ಹೆಚ್ಚು.

ಆಶ್ರಮದ ಮತ್ತೊಂದು ಬದಿಯಲ್ಲಿರುವ ಬೆಟ್ಟ ಹತ್ತಿದರೆ ನಮಗೆ ವಿವೇಕ ಸರೋವರ ಸಿಗುತ್ತದೆ. ಇದು ಮಳೆನೀರಿನಿಂದ ಆಗಿರುವ ಒಂದು ಪುಟ್ಟ ಕೆರೆ ಎನ್ನಬಹುದು. ಇದರ ಅಕ್ಕಪಕ್ಕದಲ್ಲಿ ಆಶ್ರಮಕ್ಕೆ ಬೇಕಾದ ತರಕಾರಿ, ಜೋಳ, ಗೋಧಿ ಎಲ್ಲವನ್ನೂ ಬೆಳೆಯುತ್ತಾರೆ. ಈ ಕೆಲಸಕ್ಕಾಗಿ ಸುಮಾರು 30 ಜನ ಸ್ಥಳೀಯರಿಗೆ ಆಶ್ರಮ ಉದ್ಯೋಗ ನೀಡಿದೆ.

ಆಶ್ರಮದ ಮತ್ತೊಂದು ಬದಿಯಲ್ಲಿ ಆಸ್ಪತ್ರೆ ಇದೆ. ಇದು ಕೂಡ ಆಶ್ರಮದವರೇ ನಡೆಸುತ್ತಿದ್ದು ಸುತ್ತಮುತ್ತಲಿನ ಸುಮಾರು 20 ಹಳ್ಳಿಗಳ ಜನ ಇದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಬೆಳಗ್ಗೆ 7 ಗಂಟೆಗೆ ಆಶ್ರಮದ ಬಸ್ಸು ಹಳ್ಳಿಗಳಿಗೆ ಹೋಗಿ ಅನಾರೋಗ್ಯದಿಂದ ಬಳಲುತ್ತಿರುವವರನ್ನು ಕರೆದುತಂದು ಅವರನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸಿ ಸೂಕ್ತವಾದ ಔಷಧವನ್ನು ನೀಡಿ ಮಧ್ಯಾಹ್ನದ ಊಟವನ್ನು ಕೊಟ್ಟು ಮತ್ತೆ ಅದೇ ಬಸ್ಸಿನಲ್ಲಿ ಅವರನ್ನು ಹಳ್ಳಿಗಳಿಗೆ ಬಿಡಲಾಗುತ್ತದೆ. ಆಸ್ಪತ್ರೆಯಲ್ಲಿ ಸೇವೆ ಸಂಪೂರ್ಣ ಉಚಿತ.

ಆಶ್ರಮದಲ್ಲಿ ಅತಿಥಿಗಳಿಗೆ ಉಳಿದುಕೊಳ್ಳುವ ವ್ಯವಸ್ಥೆ

ಮೂರು ಬೆಡ್‌ಗಳಿರುವ ಸುಮಾರು 50ಕ್ಕೂ ಹೆಚ್ಚು ಕೊಠಡಿಗಳು ಆಶ್ರಮದಿಂದ ಸುಮಾರು 500 ಮೀಟರ್ ದೂರದಲ್ಲಿದೆ. ಅತಿಥಿಗಳು 3 ರಾತ್ರಿಗಳು ಮಾತ್ರ ತಂಗಲು ಇಲ್ಲಿ ಅವಕಾಶವಿದೆ. ಮುಂಗಡವಾಗಿ ಈಮೈಲ್ ಕಳಿಸಿ ಕೊಠಡಿ ಕಾಯ್ದಿರಿಸಬೇಕಾಗುತ್ತದೆ. ಊಟ ತಿಂಡಿಗೆ ಆಶ್ರಮಕ್ಕೇ ಬರಬೇಕು, ಬೇರೆ ಎಲ್ಲೂ ಹೋಗಲು ಸಾಧ್ಯವಿಲ್ಲ. ಊಟ ತಿಂಡಿಗೆ ಉಪಯೋಗಿಸುವ ಸಾಕಷ್ಟು ಪದಾರ್ಥಗಳು ಅಂದರೆ ತರಕಾರಿ, ಗೋದಿ, ಜೋಳ ಎಲ್ಲವೂ ಆಶ್ರಮ ದವರೇ ಬೆಳೆದದ್ದು. ಭಾಗಶಃ ಎಲ್ಲಾ ಆಹಾರದಲ್ಲೂ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಮತ್ತು ಹೂಕೋಸು ಇದ್ದೇ ಇರುತ್ತದೆ. ಉಳಿದುಕೊಳ್ಳುವುದು, ಊಟ ಇವೆಲ್ಲವೂ ಉಚಿತ.



ಆಧ್ಯಾತ್ಮ ವಿಷಯದಲ್ಲಿ ಗಂಭೀರವಾದ ಚಿಂತನೆ ಮಾಡುವವರಿದ್ದರೆ ಮಾತ್ರ ಈ ಪರಿಸರವನ್ನು ಅನುಭವಿಸಲು ಸಾಧ್ಯ. ಕೇವಲ ಪ್ರವಾಸಕ್ಕೆಂದು ಹೋದರೆ ಏನೂ ಪ್ರಯೋಜನವಿಲ್ಲ, ಒಂದೇ ದಿನಕ್ಕೆ ಸಾಕೆನಿಸಿಬಿಡಬಹುದು.

ವರ್ಷದಲ್ಲಿ 6 ತಿಂಗಳು ಮಾತ್ರ ಆಶ್ರಮವು ಅತಿಥಿಗಳಿಗೆ ಲಭ್ಯವಿರುತ್ತದೆ. ಅಂದರೆ ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಮತ್ತು ಏಪ್ರಿಲ್ ನಿಂದ ಜೂನ್‌ವರೆಗೆ.

ಆಶ್ರಮ ತಲುಪುವುದು ಹೇಗೆ

1. ಬೆಂಗಳೂರಿನಿಂದ ದೆಹಲಿಗೆ ವಿಮಾನ ಅಥವಾ ರೈಲು, ಅಲ್ಲಿಂದ ಹಲ್ದವಾನಿಗೆ ಎಂಟು ಗಂಟೆಗಳ ರೈಲು ಪ್ರಯಾಣ, ಮತ್ತೆ ಅಲ್ಲಿಂದ ಐದು ಗಂಟೆ ಕಾಲ ಕಾರು ಪ್ರಯಾಣ.

2. ಬೆಂಗಳೂರಿನಿಂದ ಬರೇಲಿಗೆ ವಿಮಾನ ಮತ್ತು ಅಲ್ಲಿಂದ 8 ಗಂಟೆಗಳ ಕಾರು ಪ್ರಯಾಣ

3. ಬೆಂಗಳೂರಿನಿಂದ ದೆಹಲಿಗೆ ವಿಮಾನ ಅಥವಾ ರೈಲು, ನಂತರ ದೆಹಲಿಯಿಂದ ಲೋಹಾಘಾಟ್‌ಗೆ ಬಸ್ಸಿನಲ್ಲಿ ಸುಮಾರು 16 ಗಂಟೆ ಪ್ರಯಾಣ, ಲೋಹಾಘಾಟಿನಿಂದ ಮಾಯಾವತಿ ಅದ್ವೈತಾಶ್ರಮಕ್ಕೆ 15 ನಿಮಿಷಗಳ ಆಟೋ ಅಥವಾ ಕಾರು ಪ್ರಯಾಣ.

ಶ್ರವಣ, ಮನನ ಮತ್ತು ನಿದಿಧ್ಯಾಸನವನ್ನೆಲ್ಲಾ ಕೂಡಿಸಿ ನಮಗೆ ಶ್ರೀ ಶುದ್ಧಿದಾನಂದ ಸ್ವಾಮಿಗಳು ಹೇಳಿಕೊಟ್ಟ ವಿವೇಕ ಚೂಡಾಮಣಿ ಪಾಠ ಜೀವನಕ್ಕೆ ಹೊಸ ಆಯಾಮವನ್ನೇ ಸೂಚಿಸಿತು. ಮಧ್ಯೆ ಮಧ್ಯೆ ಸಮಯ ಸಿಕ್ಕಾಗ ಕಾಡಿನಲ್ಲಿ ನಡೆದಾಡಿದ್ದಂತೂ ಎಂದೂ ಮರೆಯಲಾಗದ ಅನುಭವ.

ಇದು ಪ್ರವಾಸ ಕಥನವಾದ್ದರಿಂದ, ಪಾಠದ ಬಗ್ಗೆ ಹೆಚ್ಚು ಹಂಚಿಕೊಳ್ಳಲು ನಾನು ಇಷ್ಟಪಡುವುದಿಲ್ಲ.

ಸಾಮಾನ್ಯವಾಗಿ ಆಶ್ರಮದ ಸಾಧುಗಳಿಂದ ಮಂತ್ರದೀಕ್ಷೆ ಪಡೆದುಕೊಂಡಿದ್ದವರಿಗೇ ಮೀಸಲಾಗಿದ್ದ ಈ "ಅದ್ವೈತಾಮೃತಮ್" ಇದೇ ಮೊದಲ ಬಾರಿಗೆ ಹೊರಗಿನವರಿಗೂ ಅವಕಾಶ ನೀಡಿದ್ದು ಮತ್ತು ಅದರ ಮೊದಲ ಆವೃತ್ತಿಯಲ್ಲಿ ನಾನು ಒಬ್ಬನಾಗಿದ್ದು ಯಾವುದೋ ಜನ್ಮದಲ್ಲಿ ಮಾಡಿದ ಪುಣ್ಯವೇ ಸರಿ ಎಂದು ಭಾವಿಸುತ್ತೇನೆ.

ಹೆಚ್ಚಿನ ವಿಷಯಗಳಿಗೆ www.advaithaashrama.org ಗೆ ಭೇಟಿಕೊಡಿ

***

ಪುಸ್ತಕ ವಿಮರ್ಶೆ

'ನೀರಿನೊಳಗಿನ ಮಂಜು '

(ಕಾದಂಬರಿ: ಲೇಖಕರು: ಡಾ.ನಾ. ಮೊಗಸಾಲೆ – ಪ್ರಕಾಶಕರು: ಅಂಕಿತ ಪುಸ್ತಕ, ಬೆಂಗಳೂರು)

– ಮಾಧುರಿಕೃಷ್ಣ

ಮಾನವನ ಮನಸ್ಸಿನ ರಹಸ್ಯವನ್ನು ಬೇಧಿಸಲು ತತ್ವಜ್ಞಾನಿಗಳು, ವೈದ್ಯರು, ಧರ್ಮ ಪ್ರವರ್ತಕರು ಯುಗ ಯುಗಗಳಿಂದ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ವೀಕ್ಷಣೆಗೆ ನಿಲುಕದ ಈ ಮಾನವ ವರ್ತನೆಯನ್ನು ಹಲವರು ಅಧ್ಯಯನಶೀಲ ವಸ್ತುವಾಗಿ ಕಂಡರೆ, ಇನ್ನು ಕೆಲವರು ಸ್ವಭಾವದಲ್ಲಿ ಸುಪ್ತವಾಗಿರುವ ಕೆಲವು ಭಾವನೆಗಳನ್ನು ತಮ್ಮನುಭವಗಳಿಂದ ದುಡಿಸಿಕೊಂಡು ಬರಹರೂಪದಲ್ಲಿ ಕಾದಂಬರಿಯಾಗಿ ರೂಪಿಸುವುದೂ ಉಂಟು. ಅಂಥಹ ಒಂದು ವಂಶವಾಹೀ ವರ್ತನಾ ಸಮಸ್ಯೆಯನ್ನು ಒಳಗಿಂದೊಳಗೇ ಗುರುತಿಸಿ, ಗಮನಿಸಿ, ಶೋಧಿಸುತ್ತ, ಹಂತ ಹಂತವಾಗಿ ವಿಶ್ಲೇಷಣೆಗೊಡ್ಡುತ್ತ, ಮಾನವನ ಚಿತ್ತ ವೈಶಿಷ್ಟ್ಯವನ್ನೂ, ಚಿತ್ತ ವೈಕಲ್ಯವನ್ನೂ, ಜತೆಜತೆಯಾಗಿಯೇ ತಂದು ಓದುಗರ ಮುಂದೆ ನಿಲ್ಲಿಸುತ್ತಾರೆ ಕೆಲವು ಅಪರೂಪದ ಬರಹಗಾರರು!

ಅಮೋಘ ಸಂಘಟಕರೂ, ವೈದ್ಯರೂ, ಸಾಹಿತಿಗಳೂ ಆಗಿರುವ ಡಾ. ನಾ.ಮೊಗಸಾಲೆಯವರು ಇದೇ 2022ರ ಕಾಲಘಟ್ಟದಲ್ಲಿ ಬಿಡುಗಡೆಗೊಳಿಸಿದ 'ನೀರಿನೊಳಗಿನ ಮಂಜು' ವಿಶಿಷ್ಟ ಕೃತಿಯಲ್ಲಿ ಮನುಷ್ಯನ ಗೂಢ-ನಿಗೂಢ ಸ್ವಭಾವದಲ್ಲಡಗಿರುವ ಅವ್ಯಕ್ತ ಭಾವಸ್ವರೂಪದ ಸೂಕ್ಷ್ಮ ವಿಶ್ಲೇಷಣೆಯನ್ನು ಸಮರ್ಥವಾಗಿ ಪ್ರಕಟಿಸಿದ್ದಾರೆನ್ನಬಹುದು. ಇಲ್ಲಿ ಘಟನೆಗಳು ಅಲ್ಲಲ್ಲಿ ಆಗಾಗ್ಗೆ ಹಿಂದುಮುಂದಾದರೂ, ಅಷ್ಟಷ್ಟು ತೆರೆದುಕೊಳ್ಳುತ್ತ ಮತ್ತೆ ಕೂಡಿ ಹೆಣೆದುಕೊಳ್ಳುತ್ತ, ವರ್ತಮಾನದ ಪ್ರಸಕ್ತತೆಗನುಸಾರವಾಗಿ ಕಾದಂಬರಿಯ ಸಾರೂಪ್ಯವನ್ನು ಪಡೆದುಕೊಳ್ಳುವುದು ಗಮನಾರ್ಹವಾಗುತ್ತದೆ.

ಶ್ರೀನಿವಾಸರಾಯ ಎಂಬ ಸುಸಂಸ್ಕೃತ ಬುದ್ಧಿಜೀವಿಯೊಬ್ಬರು ತನ್ನ ನಿವೃತ್ತಿಯ ನಂತರ ಪಟ್ಟಣ ವಾಸವನ್ನು ತೊರೆದು ಹಳ್ಳಿಯಲ್ಲಿ ವಾಸಿಸಲು ತೆರಳುತ್ತಾರೆ. ಇದಕ್ಕೆ ನೆಪವಾಗಿ ಹೆಂಡತಿ ಸರೋಜಾರ ದೀರ್ಘಕಾಲಿಕ ಅಸ್ತಮಾ ಕಾಯಿಲೆ ಕಾರಣವೊಂದೆಡೆಯಾದರೆ, ಇನ್ನೊಂದು ಕಾರಣ ಅನೇಕ ವರ್ಷಗಳಿಂದ ಗೆಳೆಯನೊಂದಿಗೆ ಉಳಿಸಿಕೊಂಡು ಬಂದಿದ್ದ ಆತ್ಮೀಯ ಸ್ನೇಹಭಾವ!

ಆದರೆ ಪ್ರಜ್ಞಾವಂತ ಲೇಖಕರೂ, ಪ್ರಸಿದ್ಧ ವಾಗ್ಮಿಯೂ ಆದ ರಾಯರು ಜೀವನೋತ್ಸಾಹದಿಂದ ವೃದ್ಧಾಪ್ಯದಲ್ಲೂ ಚಟುವಟಿಕೆಗಳ ಮೂಲಕ ಉಲ್ಲಸಿತ ಜೀವನವನ್ನು ಕಳೆಯಬಲ್ಲೆ ಎಂಬ ವಿಶ್ವಾಸದಲ್ಲಿರುವಾಗಲೇ ಎರಡೇ ವರ್ಷಗಳಲ್ಲಿ ಅಪ್ರತಿಮ ಸನ್ನಿವೇಶವೊಂದು ಉದ್ಭವಿಸಿ ರಾಯರಿಗೆ ಜೀವ ಬೆದರಿಕೆ ಹಾಕಲ್ಪಡುತ್ತದೆ. ಹೆದರಿಬಿಟ್ಟ ಪತ್ನಿಯಿಂದ ಊರು ತೊರೆಯುವ ಒತ್ತಾಯ ಬಂದರೂ ದಿಟ್ಟ ಹೃದಯದ ರಾಯರು ಗೆಳೆಯನೊಂದಿಗೆ ಪೋಲೀಸ್ ಸ್ಟೇಶನ್ನಿಗೆ ಹೋಗಿ ದೂರು ಸಲ್ಲಿಸುತ್ತಾರೆ.

ಕಾದಂಬರಿಯ ಆರಂಭದ ಪುಟಗಳಲ್ಲೇ ತೆರೆದುಕೊಳ್ಳುವ ಈ ಘಟನೆಯು ವಿಚಕ್ಷಣ ವಿಚಾರವಾದಿ ಡಾ. ಮೊಗಸಾಲೆಯವರ ಅನುಭವ ಮಂಟಪದಲ್ಲಿ ಸಂಭವಗೊಂಡು ನೀರಿನೊಳಗಿನ ಮಂಜಾಗಿ, ಓದುಗರ ವಿಚಾರ ವಿಮರ್ಶೆಗೆ ಬರುವ ಮೌಲ್ವಿಕ ಸಾಹಿತ್ಯವಾಗುತ್ತದೆ. ಕಾದಂಬರಿಕಾರರ ಈ ಬರಹ ವೈಶೇಷಿಕವು ಹಲವು ಮಜಲುಗಳಲ್ಲಿ ಪುರುಷ-ಸ್ತ್ರೀ ಸಂಬಂಧದ ದೀರ್ಘಕಾಲಿಕ ಒಡನಾಟದಲ್ಲಿ ಅನ್ಯೋನ್ಯವಾಗಿದ್ದರೂ ಕೂಡಾ ವಂಶವಾಹೀ ಜೀನ್ಸುಗಳ ದುಷ್ಪಭಾವಕ್ಕೊಳಗಾಗುವುದನ್ನು ಕಾಣುತ್ತೇವೆ. ಜಾತಿ ಬೇರೆ ಬೇರೆಯಾಗಿದ್ದರೂ ಮೇಲ್ಜಾತಿಯ ಬ್ರಾಹ್ಮಣ ಶ್ರೀನಿವಾಸ ರಾಯ ಮತ್ತು ಸರೋಜರದ್ದು ಪ್ರೇಮವಿವಾಹ. ಆದ್ದರಿಂದಲೇ ಇರಬೇಕು, ಸರೋಜಾರಿಗೆ ತಾನು ಅತಿಯಾಗಿ ಪ್ರೀತಿಸುವ ಗಂಡನ ಮೇಲೆ ಸರ್ವದಾ ಅನುಮಾನ ಹಾಗೂ ಸುರಕ್ಷಾಪೂರ್ಣ ಧ್ಯಾನ! ತನ್ನ ಸಾವಧಾನದ ನಡೆ ನುಡಿಯಿಂದ ಎಲ್ಲರಿಂದಲೂ ಮೆಚ್ಚಲ್ಪಡುತ್ತಿದ್ದ ರಾಯರು, ಎಳೆಯ ಸಹೋದ್ಯೋಗಿಯೊಬ್ಬರ ಮದುವೆಯಲ್ಲಿ

ಹಿರಿಯರಾಗಿ ನಿಂತು ವಧುವಿನ ಧಾರೆ ಎರೆಸಿಕೊಳ್ಳುತ್ತಾರೆ. ಆದರೆ ವಿಧಿಚಿತ್ತಕ್ಕೀಡಾಗಿ ಆತ ಬೇಗನೇ ಮರಣಿಸಿದಾಗ ಮಾನವೀಯ ಸದ್ವರ್ತನೆಯಿಂದ ಆತನ ವಿಧವೆ ಹೆಂಡತಿಗೆ ಬದ್ಧರಾಗಿ ಸಹಾಯ ನೀಡಬೇಕಾಗುತ್ತದೆ.

ಈ ಕಾರಣ ಮೂಲವಾಗಿ ಒಳಗಿಂದೊಳಗೇ ಅವ್ಯಕ್ತ ಅಸುರಕ್ಷತೆಯ ಭಾವಪೀಡಿತಳಾಗಿ ಗಂಡನ ನಡೆನುಡಿಗಳನ್ನು ಅನುಮಾನದ ತಕ್ಕಡಿಯಲ್ಲಿ ನಿರಂತರ ತೂಗುತ್ತ ಸರೋಜಾ ನಿರಂತರ ಅಸ್ತಮಾ ಪೀಡೆಗೊಳಗಾಗುತ್ತಾಳೆ. ಪತ್ನಿಯ ಅನುಮಾನ, ಸಂದೇಹಗಳ ಅರಿವಿದ್ದರೂ ಸಮಚಿತ್ತದಿದಲೇ ಇದ್ದ ರಾಯರಿಗೆ ಅಷ್ಟು ಸುಲಭವಾಗಿ ವಿಧವೆ ಜಯಂತಿಯ ಕೈ ಬಿಡಲಾಗುವುದಿಲ್ಲ. ಆದರೂ ಡಾಕ್ಟರ್ ಸಲಹೆಯಂತೆ ಈ ಜಂಜಾಟದಿಂದ ಮುಕ್ತವಾಗಲು ನಿವೃತ್ತಿಯ ನಂತರ ಗೆಳೆಯನೊಂದಿಗೆ ಹಳ್ಳಿ ಸೇರುವ ನಿರ್ಧಾರ ಮಾಡುತ್ತಾರೆ. ತನ್ನ ನಿರ್ಧಾರಕ್ಕೆ ಪತ್ನಿಯ ಆರೋಗ್ಯವೇ ಕಾರಣವೆಂದು ತನ್ನನ್ನು ತಾನೇ ಮೆಚ್ಚಿಕೊಳ್ಳುತ್ತಲೇ ಇರುವಾಗ ಜೀವಬೆದರಿಕೆಯ ಪ್ರಸಂಗ ಉದ್ಭವಿಸಿ ಬರುತ್ತದೆ ಹಾಗೂ ಜತೆಯಲ್ಲೇ ಜಯಂತಿ ಕುಲಕರ್ಣಿಯ ತುರ್ತು ಸಂದೇಶ ಕೂಡಾ ಬಂದು ರಾಯರು ಬಿಟ್ಟುಬಂದ ಪಟ್ಟಣಕ್ಕೆ ತಿರುಗಿ ವಾಸಕ್ಕೆ ಹೋಗುವ ಪರಿಶೀಲನೆಗೆ ಪತ್ನಿಯ ಅನುಮತಿ ದೊರಕಿಸಿಕೊಳ್ಳುತ್ತಾರೆ.

ಪ್ರಬುದ್ಧ ಕಾದಂಬರಿಕಾರ ಮೊಗಸಾಲೆಯವರು ಕೇಂದ್ರ ವಸ್ತುತಂತ್ರದಲ್ಲಿ ಅನೇಕ ಒಳಸುಳಿಗಳನ್ನು ಅಳವಡಿಸಿ ಓದುಗರಿಗೆ ಅಚ್ಚರಿ ಆಶ್ಚರ್ಯಗಳನ್ನು ಮೂಡಿಸುತ್ತಾರೆ. ನೀರಿನ ಮೇಲೆ ತೇಲುವ ಮಂಜಿನ ಒಂದು ಭಾಗ ಹೇಗೆ ಗುಟ್ಟು ಬಿಟ್ಟುಕೊಡದೆ ರಹಸ್ಯಗಳನ್ನು ಅಡಗಿಸಿಟ್ಟುಕೊಂಡು ಅದರಲ್ಲಿ ರಾಯರ ಜನನ ಕೌಟಿಲ್ಯವೂ ಸೇರಿಕೊಂಡಿದ್ದು, ತನಗರಿವಿಲ್ಲದೆಯೇ ಮಾನಸಿಕ ರೋಗಸೂಚಕ ಹಾನಿಯಲ್ಲಿ ಬಳಲುತ್ತಿದ್ದ ರಾಯರು ಸೌಖ್ಯೋದ್ದೇಶಿತ ಆಶಯ ಗಳಂದಾಗಿ ಬದುಕಿಗೆ ದಕ್ಕಿ ಬಂದ ಬಾಳನ್ನು ಸಾವಧಾನತೆಯಿಂದ ಕಳೆಯುವ ಇಚ್ಛೆಯಿಂದ ಖುದ್ದು ಮನೋ ರಾಜಿಯಲ್ಲಿ ಒಗ್ಗಿಕೊಳ್ಳುವ ಅಸಾಧಾರಣತೆ ತೋರುತ್ತಲೇ ನಿವೃತ್ತಿಗೆ ಬಂದು ತಲುಪಿದ್ದರು. ಬರಹಗಾರರ ಕೌಶಲ್ಯವೋ, ಇಲ್ಲ ವಿಧಿಯ ಆಟವೋ, ವಿಧವೆ ಜಯಂತಿ ಕುಲಕರ್ಣಿಯ ಮಗಳು-ಅಳಿಯನ ಮನಸ್ತಾಪಗಳು ಬಗೆಹರಿದು, ಜಯಂತಿ ತೀರ ಭಾವುಕಳಾಗಿ ರಾಯರಲ್ಲಿ ಹೃತ್ಪೂರ್ವಕವಾಗಿ ಅವರ ಸಹಾಯಕ್ಕೆ ಕೃತಜ್ಞತೆ ಸಲ್ಲಿಸುವಾಗ ಭಾವಪೂರ್ಣವಾಗಿ ಮಾತನಾಡುತ್ತಾಳೆ ಹಾಗೂ ಅದು ಈವರೆಗೂ ರಾಯರ ಹೃದಯದಲ್ಲಿ ಸುಪ್ತವಾಗಿ ಕುಳಿತಿದ್ದ ಕಾಮಭಾವನೆಯನ್ನು ಥಟ್ಟನೆ ಉದ್ರೇಕಗೊಳಿಸಿ ತನ್ನ ಸಹಾಯಕ್ಕೆ ಪ್ರತಿಯಾಗಿ ಅವಳ ಸಂಗಸೌಖ್ಯವನ್ನು ಬಯಸುತ್ತದೆ. ಬೆಚ್ಚಿದ ಹೆಣ್ಣು ಜಯಂತಿ ತೋರಿದ ಸಂಯಮ, ತಿರಸ್ಕಾರ, ಅಸಹ್ಯ – ಬುದ್ಧಿಜೀವಿ ಎಂದು ಕರೆಸಿಕೊಳ್ಳುತ್ತಿದ್ದ ರಾಯರ ಸ್ವತಹ ಅಹಂಕಾರವನ್ನು ಮುರಿದು ಅವಮಾನಗೊಳಿಸುತ್ತದೆ. ಮಡದಿ ಸರೋಜಾ ಎಂದೆಂದಿನಿಂದಲೂ ತನ್ನ ಬಗ್ಗೆ ಅನುಮಾನಿಸುತ್ತಿದ್ದ ಕೀಳುವಾಸನೆಗಳು ಅವ್ಯಕ್ತವಾಗಿ ತನ್ನಲ್ಲಿ ಇದ್ದೇ ಇದ್ದಿದ್ದುವೇ ಎಂಬ ಮನೋಘಾತದಲ್ಲಿ ರಾಯರಿಗೆ ತೀವ್ರ ಅವಮಾನದಿಂದ ನಾಚುವಂತಾದರೆ, ಹೆಣ್ಣು ಜಯಂತಿ ಕುಲಕರ್ಣಿ ತನ್ನ ಮನಸ್ಥಿತಿಯ ಸ್ಥಿಮಿತಥೆಯನ್ನು ಬಿಡಿಸಿ ರಾಯರಿಗೆ ಮನದಟ್ಟು ಮಾಡಿ ಉನ್ನತ ದರ್ಜೆಗೇರಿದರೆ, ಸಮಾಜದಲ್ಲಿ ಸದಾ ತನ್ನ ಅದ್ಭುತ ವಿಚಾರಧಾರೆ, ಸದ್ವಿವೇಕದಿಂದ ಈವರೆಗೂ ಗಳಿಸಿದ ಸ್ಥಾನಮಾನಗಳನ್ನು ಕೈಯಾರೆ ಹಾಳುಗೆಡವಿದ ಯಾತನೆಯ ಭಾರ ಶ್ರೀನಿವಾಸರಾಯರಲ್ಲಿ ಎಂದೆಂದಿಗೂ ಉಳಿದುಕೊಳ್ಳುವಂಥಾದ್ದು ವಿಧಿಯ ಅಣಕವಾಗುತ್ತದೆ. ಆದರೂ ಕಾದಂಬರಿಕಾರರ ಕೈತಪ್ಪಿಗೆ ಸಾಂತ್ವನವೋ ಎಂಬಂತೆ ರಾಯರಿಗೆ ಬಂದಿದ್ದ ಜೀವ ಬೆದರಿಕೆಗೆ ಅವರ ಗೆಳೆಯನ ಅಣ್ಣನ ಆಸ್ತಿ ಸಂಬಂಧದ ಕುಹಕ ಕಾರಣವಾಗಿ ರಾಯರು ಇದ್ದ ಹಳ್ಳಿಯಲ್ಲೇ ನಿರ್ವಿಘ್ನವಾಗಿ ಉಳಿದು ಕೊಳ್ಳುವಂತಾಗುತ್ತದೆ

ಒಟ್ಟಿನಲ್ಲಿ ಇಂದಿನ ಸಮರ್ಥ ಕಥೆಗಾರ ಹಾಗೂ ಪ್ರಬುದ್ಧ ಕಾದಂಬರಿಕಾರ ಮೊಗಸಾಲೆಯವರು ಮತ್ತೊಮ್ಮೆ ಮಗುದೊಮ್ಮೆ ತನ್ನನ್ನು ತಾನೇ ಪ್ರತಿಪಾದಿಸಿಕೊಳ್ಳುವ ರೀತಿ ಅಪಾರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಒಂದು ಉತ್ತಮ ಮನೋವಿಶ್ಲೇಷಣಾತ್ಮಕ ಕಾದಂಬರಿಗಾಗಿ ಸಾಹಿತಿ ಡಾ.ನಾ.ಮೊಗಸಾಲೆಯವರಿಗೆ ಹಾರ್ದಿಕ ಅಭಿನಂದನೆಗಳು.

***

"ಅಜ್ಜಿ ಮನೆ ಕಾಯಂಗಿಲ್ಲಾ"

– ಅನುರಾಧಾ ನಟರಾಜ್

ಸುಮಾರು 25 ವರ್ಷದ ಹಿಂದೆ ಹಳ್ಳಿ, ನಗರಗಳೆರಡರಲ್ಲೂ ಎಲ್ಲ ಮಕ್ಕಳೂ ಆಡುತ್ತಿದ್ದ ಬಹಳ ಜನಪ್ರಿಯ ಆಟ ಕಣ್ಣಾ ಮುಚ್ಚಾಲೆ. ಆಗೆಲ್ಲಾ ಶಾಲೆಯಿಂದ ಮನೆಗೆ ಬಂದರೆ ಸಂಜೆ ಓದಿಕೋ, ಹೋಂವರ್ಕ್ ಮಾಡು ಎಂದು ಯಾರೂ ತಲೆ ತಿನ್ನುತ್ತಿರಲಿಲ್ಲ..ಆಟ ಆಡಿಕೊಂಡು ಬಾ ಅಂತ ಹೇಳುತ್ತಿದ್ದರು. ಆಡಲು ಹತ್ತಾರು ಮಕ್ಕಳು, ಕಣ್ಣಾಮುಚ್ಚೆ ಕಾಡೇ ಗೂಡೇ ಹಾಡಲು ಮತ್ತು ಅಂಪೈರ್ ಥರಾ ಕಾರ್ಯನಿರ್ವಹಿಸಲು ಒಬ್ಬ ಹಿರಿಯರು, ಅಡಗಿಕೊಳ್ಳಲು ಜಾಗ ಇದ್ದರೆ ಸಾಕಾಗಿತ್ತು. ಬೇರೇನೂ ಸಲಕರಣೆ ಬೇಡದ, ಮನಸ್ಸಿಗೆ ಉಲ್ಲಾಸ, ದೇಹಕ್ಕೆ ವ್ಯಾಯಾಮ, ಸಮಯಪ್ರಜ್ಞೆ, ಜಾಣತನಗಳಿಂದ ಬುದ್ಧಿಗೆ ಚುರುಕುತನ ಮತ್ತು ಎಲ್ಲರಲ್ಲೂ ಸಾಮರಸ್ಯ ತುಂಬುತ್ತಿದ್ದ ಸೊಗಸಾದ ಆಟ ಕಣ್ಣಾಮುಚ್ಚಾಲೆ. ಈ ಆಟ ಒಳಾಂಗಣ ಆಟ. ಯಾರಾದರೂ ಹಿರಿಯರೋ, ದೊಡ್ಡ ಮಕ್ಕಳೋ ಔಟ್ ಆದವರ ಕಣ್ಣು ಮುಚ್ಚಿ, ಕಣ್ಣಾಮುಚ್ಚೇ ಪದ್ಯವನ್ನೋ ಅಥವಾ ಮುಂಚೆಯೇ ನಿಗದಿತವಾದ ಐವತ್ತೋ ನೂರನ್ನೋ ಎಣಿಸಿ ಕೈಬಿಟ್ಟರೆ ಆ ಹುಡುಗ ಅಡಗಿಕೊಂಡ ಮಿಕ್ಕವರನ್ನು ಹುಡುಕಬೇಕಿತ್ತು. ಅಡಗುದಾಣಗಳು ಬಾಗಿಲು, ಸೋಫಾ, ಮಂಚ, ಕರ್ಟನ್ ಹಿಂದೆ, ಕಪಾಟಿನ ಒಳಗೆ, ಮೆಟ್ಟಿಲು ಕೆಳಗೆ, ಬಟ್ಟೆಗಳ ಸಂದಿ ಹೀಗೆ ಇರುತ್ತಿತ್ತು. ನಾವು ಬೆಳೆಯುತ್ತಾ ಹೋದಂತೆಲ್ಲಾ ಮನೆಯೊಳಗಿನ ಆಟ ಇಕ್ಕಟ್ಟಾದ ನಿರ್ಬಂಧ ಅನಿಸತೊಡಗಿ ಆಟದ ಹರವು ರಸ್ತೆಗೆ ಇಳಿಯಿತು. ನಮ್ಮ ಕಣ್ಣನ್ನು ಬೇರೆ ಯಾರೋ ಮುಚ್ಚುವ ಬದಲು ನಾವೇ ಗೋಡೆಗೋ ಕಂಬಕ್ಕೋ ಒರಗಿ ಕೈ ಅಡ್ಡ ಇಟ್ಟುಕೊಂಡು ಎಣಿಸುವುದು ಶುರುವಾಯ್ತು. ಆಟದ ಹೆಸರೂ 'eye spies, Eyes #1' ಎಂದು ಬದಲಾಯ್ತು. ಔಟ್ ಆದವರು ಜೇಮ್ಸ್‌ಬಾಂಡನಂತೆ ಅಡಗಿದ್ದವರನ್ನು ಕಂಡಂತೆಲ್ಲಾ eyes #1...2 ಎಂದು ಕರೆಯುವುದೂ, ಹಿಡಿಯುವುದೂ, ಅಡಗಿಕೊಂಡಿದ್ದವರು ಕಣ್ಣಿಗೆ ಕಾಣದೇ ಹೋದರೂ "ಅಜ್ಜಿ ಮನೆ ಕಾಯಂಗಿಲ್ಲಾ" ಎಂದು ಔಟ್ ಆದವರನ್ನು ಒಂದೇಕಡೆ ನಿಲ್ಲದೇ ಓಡಾಡುತ್ತಾ ಹುಡುಕಲು ಪ್ರೇರೇಪಿಸುವುದೂ ಶುರು ಆಯ್ತು.

ನಮ್ಮ ಬಾಲ್ಯದಲ್ಲಿ ನಾವಿದ್ದ ಬಸವನಗುಡಿ ಬಾಂದುನವರ ಬೀದಿಯಲ್ಲಿ (ಸರ್ವೇಯರ್ ಸ್ಟ್ರೀಟ್), ಡಿವಿಜಿ ರಸ್ತೆಯಿಂದ ಕೆ ಆರ್ ರಸ್ತೆಯವರೆಗೂ ನಮ್ಮ ಆಟದ ವಿಸ್ತಾರ ಹರಡಿತ್ತು. ಡಿವಿಜಿ ರಸ್ತೆಯ ಒಂದು ಕೊನೆಯ ಡಾ.ಚಂದ್ರಶೇಖರ್ ಮನೆ ಎದುರು ಭಯಂಕರವಾದ ನಾಯಿ ಇದದ್ದುದರಿಂದ ಅದು ಮತ್ತು ಕೆ.ಆರ್.ರಸ್ತೆಯ ಮೂಲೆಯು ಆಗ ನಿರ್ಜನ ವಾಗಿದ್ದು ಭಯ ಹುಟ್ಟಿಸುವ ಆವರಣವಿದ್ದ, ಈಗ ಶೂಟಿಂಗ್ ಮನೆ ಎಂದು ಖ್ಯಾತವಾಗಿರುವ ದೊಡ್ಡಮನೆ ಎರಡನ್ನು ಹೊರತುಪಡಿಸಿ ಉಳಿದ ಇನ್ಯಾವ ಮನೆಯ ಮುಂದೆ ಹಿಂದೆ ಬೇಕಾದರೂ ಅಡಗಿಕೊಳ್ಳಬಹುದು ಎಂಬ ನಿಯಮವನ್ನು ನಾವೇ ಹಾಕಿಕೊಂಡಿದ್ದೆವು. ಹಾಗಾಗಿ ನಮ್ಮ ಅಡಗುದಾಣಗಳ ವ್ಯಾಪ್ತಿಯೂ ಹಿರಿದಾಗಿತ್ತು. ಕಾಂಪೌಂಡ್ ಹಿಂದೆ, ಮರದ ಮೇಲೆ, ಪೊದೆ ಸಂದಿ, ಮನೆಗಳ ಬಾಲ್ಕನಿ, ತಾರಸಿ ಮಾತ್ರವಲ್ಲ ನಿಂತಿದ್ದ ಸ್ಕೂಟರ್, ಕಾರುಗಳ ಹಿಂದೆಯೂ ಅಡಗಿಕೊಂಡು ಆಟ ಆಡಿಸುವುದು ತಮಾಷೆಯಾಗಿತ್ತು. ಎಷ್ಟೋ ಸಲ ನಿಂತಿದ್ದ ವಾಹನಗಳು ಮುಂದೆ ಸರಿದು ಫಜೀತಿಗೆ ಸಿಲುಕಿಸಿದ್ದೂ ಇದೆ. ಕೆಲವು ಸಲ ಒಟ್ಟಾಗಿ ಹೋಗುತ್ತಿದ್ದ ಮೂರು ನಾಲ್ಕು ಜನರ ಹಿಂದೆ ಬಗ್ಗಿಕೊಂಡು ಅಡಗಿಕೊಳ್ಳಲು ಹೋಗಿ ಯಾಕೆ ಹಿಂದೆ ಹಿಂದೆ ಬರ್ತಾ ಇದ್ದೀಯಾ ಅಂತ ಬೈಸಿಕೊಂಡದ್ದಿದೆ. ಅನೇಕ ಸಲ ಯಾರಿಗೂ ಕಾಣದಕಡೆ ಅಡಗಲು ಎಲ್ಲೆಲ್ಲೋ ಹೋಗಿ ಮುಜುಗರಕ್ಕೆ ಸಿಕ್ಕಿಕೊಂಡಿದ್ದಿದೆ. ಒಮ್ಮೆ ನಾನು ಯಾವುದೇ ಕಾರಣಕ್ಕೂ ಸಿಕ್ಕಿ ಬೀಳಲೇಬಾರದು ಎಂದು ಒಣಗಿದ್ದ ಮೋರಿಯೊಳಗೆ ಅಡಗಿದ್ದಾಗ ಮೈ ಕೈ ಮುಳ್ಳಿನಿಂದ ತರಚಿದ್ದರೂ, ಗಬ್ಬುವಾಸನೆಗೆ ಮೂಗು ಮುಚ್ಚಿಕೊಂಡಿದ್ದರೂ, ಅಲ್ಲಿದ್ದ ಇಲಿ ಜಿರಲೆಗಳ ಸಂಸಾರ ಕಂಡು ಗಾಬರಿಯಿಂದ ಹೊರಬಂದು ಔಟಾಗಿದ್ದೆ. ಮತ್ತೊಂದು ಸಲ ಹಿಂದಿನ ಕನ್ಸರ್ವೇನ್ಸಿಗೆ ಹಾರಲು ಕಂಪೌಂಡ್ ಹತ್ತಿ, ಹಳೆಯ ಕಾಲದ ಮೇಲ್ಛಾವಣಿರಹಿತ ಸಾಂಡಸಿನಲ್ಲಿ ಕೆಳಗೆ ಕುಳಿತಿದ್ದ ರುಕ್ಮಿಣಮ್ಮನವರಿಂದ "ಥೂ ದರಿದ್ರದವಾ... ನೆಮ್ಮದಿಯಾಗಿ ಇದಕ್ಕೆ ಕೂತು ಕೊಳ್ಳೋಕೂ ಬಿಡಲ್ವಲ್ಲಾ" ಅಂತ ಬೈಸಿಕೊಂಡಿದ್ದೆ. ಇನ್ನೊಂದು ಸಲ ಕಂಟ್ರಾಕ್ಟರ್ ರೆಡ್ಡಿಯವರ ಮನೆಯ ಬಿಸಿಲು ಮಚ್ಚಿನ ಮೇಲೆ ಅಡಗಲು ಹೋಗಿ ಮಹಡಿಯ ಕೋಣೆಯಲ್ಲಿ ಹೊಸದಾಗಿ ಮದುವೆಯಾಗಿದ್ದ ಅವರ ಮಗ ಸೊಸೆ ಸಿನಿಮೀಯ ಅಪ್ಪುಗೆಯಲ್ಲಿ ಮೈ ಮರೆತಿದ್ದನ್ನು ಕಿಟಕಿಯಲ್ಲಿ ಇಣುಕಿ ನೋಡಿ ರೋಮಾಂಚಿತಳಾಗಿದ್ದೆ. ಎಷ್ಟೋ ಸಲ ಬೇಸಗೆಯಲ್ಲಿ ತಾರಸಿಯ ಮೇಲೆ ಹರಡಿದ್ದ ಅರ್ಧ ಒಣಗಿದ್ದ ಸಬ್ಬಕ್ಕಿ, ಅರಳು ಸಂಡಿಗೆಗಳನ್ನು ಚಾಪೆಯಿಂದ ಕಿತ್ತು

ಚಿಮಣಿಯ ಹಿಂದೆ ಅಡಗಿಕುಳಿತು ಚಪ್ಪರಿಸಿ ತಿಂದಿದ್ದಿದೆ. ನಮ್ಮ ರಸ್ತೆಯಲ್ಲೇ ಇದ್ದ ಆನಂದ ಕಾಫಿ ವರ್ಕ್ಸ್‌ನ ಕಾಫಿ ರೋಸ್ಟರ್ ಮಷಿನಿನ ಹಿಂದೆ ಅಡಗಿದ್ದಾಗ ಅಂಗಡಿ ಮಾಲೀಕ ಆನಂದರಿಗೆ ಅಂಕಲ್ ಪ್ಲೀಸ್ ಯಾರಿಗೂ ಹೇಳ್ಬೇಡಿ ಎಂದು ಗೋಗರಿಯುತ್ತಾ ಹಿತವಾದ ಶಾಖ, ಹುರಿದ ಕಾಫಿಯ ಘಮಕ್ಕೆ ಮೈ ಮರೆತಿದ್ದಿದೆ. ಆಗೆಲ್ಲಾ ನಮ್ಮ ರಸ್ತೆಯ ಹಿರಿಯರೂ ನಮ್ಮ ಆಟಕ್ಕೆ ಸಾಥ್ ನೀಡುತ್ತಾ ಸಹಾಯ ಮಾಡುತ್ತಿದ್ದುದು ಮುದ ನೀಡುವ ಸವಿ ನೆನಪು.

ಒಂದು ಸಂಜೆ ಹೀಗೇ ಆಡುತ್ತಾ ಇದ್ದಾಗ ನನ್ನ ತಮ್ಮ ನಮ್ಮ ರಸ್ತೆಯ ಮಧ್ಯದಲ್ಲಿದ್ದ ಒಂದು ಪಾಳು ಮನೆಗೆ ಅಡಗಲು ಹೋದವನು ಕೆಟ್ಟದಾಗಿ 'ಕೊಳ್ಳಿದೆವ್ವ ಕೊಳ್ಳಿದೆವ್ವ' ಎಂದು ಕಿರುಚುತ್ತಾ ಓಡಿಬಂದ. ಆ ಮನೆ ಹಿಂಭಾಗದಲ್ಲಿ ಒಂದು ದೊಡ್ಡ ಹಾಳು ಬಾವಿ ಇತ್ತು. ಅಲ್ಲಿ ಹಿಂದೆ ಯಾರದೋ ಕೊಲೆಯಾಗಿ ಹೆಣವನ್ನು ಅದಕ್ಕೆ ಹಾಕಿದ್ದರೆಂದೂ, ಅದು ದೆವ್ವವಾಗಿ ಓಡಾಡಿಕೊಂಡಿದೆ ಎಂದೂ ಪ್ರತೀತಿ ಇತ್ತು. ಸಾಮಾನ್ಯವಾಗಿ ಯಾರೂ ಅಲ್ಲಿ ಹೋಗುತ್ತಿರ ಲಿಲ್ಲ. ನಡುಗುತ್ತಾ, ಬೆವರುತ್ತಾ ಏದುಸಿರು ಬಿಡುತ್ತಾ ಇದ್ದ ಅವನನ್ನು ನೋಡಿದರೆ ಸುಳ್ಳು ಹೇಳುತ್ತಿರುವ ಹಾಗೆ ಕಾಣಿಸಲಿಲ್ಲ. ಎಲ್ಲರೂ ಆಟ ನಿಲ್ಲಿಸಿ ಏನಾಯ್ತೋ ಎಂದು ಕೇಳಿದಾಗ ಅವನು ಮನೆಯತ್ತ ಕೈ ತೋರಿಸಿ ಅಲ್ಲಿ ದೆವ್ವ ನೋಡಿದೆ...ನಿಜ್ವಾ ಗೊತ್ತಾ ಅಂದ. ಆಗ ಮಕ್ಕಳ ಗಲಾಟೆ ಕೇಳಿ ನಮ್ಮ ಭರತನಾಟ್ಯ ಟೀಚರ್ ರೇವತಿ ಮೇಡಂ ಗಂಡ ನರಸಿಂಹನ್ ಬಂದರು. ಅವರು ಟಾರ್ಚ್ ಹಿಡಿದು ಹೋಗಿ ನೋಡಿದಾಗ ಆ ಬಾವಿಯ ಪಕ್ಕ ಹುಚ್ಚನಂತಿದ್ದ ಭಿಕ್ಷುಕನೊಬ್ಬ ಬೀಡಿ ಸೇದುತ್ತಾ ಬಿದ್ದಿದ್ದ. ಮುಸ್ಸಂಜೆಯ ಅರೆಕತ್ತಲಲ್ಲಿ ಅವನು ಬೀಡಿಗಾಗಿ ಗೀರಿದ್ದ ಕಡ್ಡಿ ನನ್ನ ತಮ್ಮನಿಗೆ ಕೊಳ್ಳಿದೆವ್ವವಾಗಿ ಕಂಡಿತ್ತು. ನರಸಿಂಹನ್ ಅಂಕಲ್ ನಮಗೆಲ್ಲಾ ಅದನ್ನು ವಿವರಿಸಿ ಎಲ್ಲವನ್ನೂ ಹೇಗೆ ವೈಜ್ಞಾನಿಕವಾಗಿ ಪರಿಶೀಲಿಸಬೇಕು ಎಂದು ತಿಳಿಸಿದರು. ಆದರೂ ಆ ಮನೆಯ ಕಡೆಗೆ ನಾವು ಆಮೇಲೂ ಹೋಗಲಿಲ್ಲ.

ನನ್ನ ಜೀವನದ ಮರೆಯಲಾರದ ಘಟನೆಯೊಂದು ಈ ಆಟಕ್ಕೆ ತಳಕು ಹಾಕಿಕೊಂಡಿದೆ. ನಾವು ಚಿತ್ರದುರ್ಗದಲ್ಲಿದ್ದಾಗ ನಮ್ಮ ಮನೆ ಎದುರು ಒಂದು ಮನೆ ಕಟ್ಟುತ್ತಾ ಇದ್ದು, ಅದಕ್ಕೆ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದರು. ಆದರೆ ಏನೋ ತಪ್ಪಾಗಿ ಇಡೀ ಕಟ್ಟಡವೇ ಗ್ರೌಂಡ್ ಆಗಿ ಎಲ್ಲಿ ಮುಟ್ಟಿದರೂ ಶಾಕ್ ಹೊಡೆಯುತ್ತಿತ್ತು. ಹಾಗಾಗಿ ಅಲ್ಲಿದ್ದ ಕಾರ್ಮಿಕರು ಮಧ್ಯಾಹ್ನ ಎಲ್ಲೋ ಹೋಗಿದ್ದರು. ಐಸ್ಪೈಸ್ ಆಡುತ್ತಾ ಇದ್ದ ನಾನು ಯಾರಿಗೂ ಸಿಗಬಾರದು ಎಂದು ಬಚ್ಚಿಟ್ಟುಕೊಳ್ಳಲು ಅಲ್ಲಿ ಮೆಟ್ಟಿಲುಗಳ ಹಿಂದೆ ಹೋಗುವಾಗ ಅರ್ಧಂಬರ್ಧ ಹಾಗೇ ಬಿಟ್ಟಿದ್ದ ಆ ಕಟ್ಟಡದ ಕಬ್ಬಿಣದ ಕಂಬಿಯನ್ನು ಹಿಡಿದುಕೊಂಡೆ. ತಕ್ಷಣವೇ ನನ್ನನ್ನು ಕರೆಂಟ್ ಹಿಡಿದುಕೊಂಡುಬಿಟ್ಟಿತು. ಮೈಯೊಳಗೆ ವಿದ್ಯುತ್ ಪ್ರವಾಹ ಹರಿದಾಗ ಏನಾಗುತ್ತಿದೆ ಎನ್ನುವ ಅರಿವೇ ಆಗದೇ, ಬಾಯಿಂದ ಸ್ವರವೇ ಹೊರಡದಿರುವಾಗ ಕರೆಂಟು ನನ್ನನ್ನು ಧೋಪ್ಪನೆ ಬಟ್ಟೆ ಒಗೆಯುವಂತೆ ಜಾಡಿಸಿತು. ನನ್ನ ಅದೃಷ್ಟ. ಆಗ ಪ್ರಜಾಮತ ಓದುತ್ತಿದ್ದರೂ ಆಟ ಆಡುತ್ತಾ ಇದ್ದ ಮಕ್ಕಳ ಮೇಲೆ ಒಂದು ಕಣ್ಣಿಟ್ಟು ಕಿಟಕಿ ಪಕ್ಕ ಕೂತಿದ್ದ ಪಕ್ಕದಮನೆ ಶಾಂತಾ ಆಂಟಿ ನನ್ನನ್ನು ನೋಡಿದರು. ಪ್ರತ್ಯುತ್ಪನ್ನಮತಿಯಾದ ಆಕೆ ತಕ್ಷಣ ಓಡಿಬಂದು ಅಲ್ಲೇ ಕಟ್ಟಡದ ಕಾಮಗಾರಿಗಾಗಿ ಇಟ್ಟಿದ್ದ ಸರ್ವೆ ಮರದ ಬೊಂಬನ್ನು ಎಳೆದುತಂದು ಒನಕೆ ಓಬವ್ವನಂತೆ ಕಂಬಿ ಹಿಡಿದಿದ್ದ ನನ್ನ ಕೈಗೆ ರಪರಪನೆ ಬಾರಿಸಿದರು. ಕರೆಂಟ್ ನನ್ನನ್ನು ಬಿಟ್ಟಿತು. ಮೂರ್ಛೆಹೋಗಿ ದೂರ ಬಿದ್ದಿದ್ದ ನನ್ನನ್ನು ಎಳೆದು ತಂದು ಶೈತ್ಯೋಪಚಾರ ಮಾಡಿದರು. ಆ ದಿನ ನಿಜಕ್ಕೂ ದೇವತೆಯಂತೆ ಆಕೆ ನನ್ನ ಜೀವ ಉಳಿಸಿದರು. ಆ ವರ್ಷ ಯಾವುದೋ ಹಬ್ಬಕ್ಕೆ ಅಮ್ಮ ಅವರಿಗೆ ಒಂದು ರೇಷ್ಮೆಸೀರೆ ಉಡುಗೊರೆ ನೀಡಿ ಕೃತಜ್ಞತೆ ಅರ್ಪಿಸಿದ್ದರು. ಆ ನಂತರ ನಾನು ಗೆಳೆಯರ ಗುಂಪಿನಲ್ಲಿ ನಾಯಕಿಯೇ ಆಗಿಬಿಟ್ಟೆ. ಬೊಂಬಿನ ಹೊಡೆತದಿಂದ 10 ದಿನ ನೇರಳೆ ಬಣ್ಣ ಇದ್ದ ನನ್ನ ಕೈ ನೋಡಿ "ನೀನು ಸತ್ತೇ ಹೋಗುತ್ತಿದ್ಯಂತೆ ಹೌದೇನೇ" ಎಂದರೆ ಯಮನನ್ನೇ ಗೆದ್ದಂತೆ ಬೀಗುತ್ತಿದ್ದೆ. ಉದ್ದಿನ ಮೂಟೆ ಉರುಡೇ ಹೋಗಿರಲಿಲ್ಲ.

ಹೀಗೆ ಕಣ್ಣಾಮುಚ್ಚಾಲೆ ಆಟ ನೂರೊಂದು ನೆನಪುಗಳ ಬಂಡಿಯನ್ನೇ ಎಳೆದು ತರುತ್ತದೆ. ಆನ್‌ಲೈನ್ ಆಟ ಆಡುತ್ತಾ ಕೋಣೆಯಿಂದಲೇ ಹೊರಗೆ ಬಾರದಿರುವ ಈಗಿನ ಪೀಳಿಗೆಯ ಮಕ್ಕಳನ್ನು ಕಂಡಾಗ ಇವರೆಲ್ಲಾ ಎಂಥಾ ರಸವತ್ತಾದ ಸಮಯದಿಂದ ವಂಚಿತರಾಗಿದ್ದಾರಲ್ಲಾ ಅಂತ ಬೇಸರ ಉಂಟಾಗುತ್ತದೆ. "ಅಜ್ಜಿ ಮನೆ ಕಾಯಂಗಿಲ್ಲ ಹೊರಗೆ ಹೋಗಿ ಆಡ್ರೋ" ಅಂತ ಕೂಗಿ ಹೇಳಬೇಕೆನಿಸುತ್ತದೆ.

***

ಕ್ಯಾಚ್‌ವರ್ಡ್ ಕರಾಮತ್ತು

– ಜಿ ವಿ ಅರುಣ

ನಿಮ್ಮ ಕ್ಯಾಚ್ ವರ್ಡ್ ಏನು ಎಂದು ನಿಮಗೆ ಗೊತ್ತೆ? ನಿಮ್ಮ ಸ್ನೇಹಿತರನ್ನು ಕೇಳಿದರೆ ಅವರು ಹೇಳದೆ ಇರಬಹುದು. ನಿಮ್ಮನ್ನು ಕಂಡರೆ ಅಷ್ಟು ಆಗದವರನ್ನು ಕೇಳಿದರೆ ಅವರೂ ಹೇಳುವುದಿಲ್ಲ. ಆದರೆ ಅವರಿಗೆ "ನೀವು ಯಾಕೆ ಯಾವಾಗ್ಲೂ ಮಾತು ಮಾತಿಗೆ "ಹಾಗಲ್ರೀ_" ಅಂತ ಸೇರಿಸ್ತಿರೀ? ಅದು ನಿಮ್ಮ ಕ್ಯಾಚ್ ವರ್ಡಾ?" ಅಂತ ಕೇಳಿ. ಆಗ ಅವರು "ಓ, ಮಹಾ ಹೇಳೋಕೆ ಬಂದ್ಬಿಟ್ಟ. ನೀನು ಪ್ರತಿ ವಾಕ್ಯಕ್ಕೂ "ಅಕ್ಚುಯಲಿ" ಅಂತ ಸೇರಿಸೋದು ನಮಗೆ ಗೊತ್ತಿಲ್ವಾ_!" ಎಂದು ನಿಮಗೆ ನಿಮ್ಮ ಸತ್ಯದರ್ಶನ ಮಾಡಿಸಿಬಿಡುತ್ತಾರೆ!

ನಾವು ಮಾತನಾಡುವಾಗ ನಮಗೆ ಗೊತ್ತಿಲ್ಲದಂತೆ ಅನಿಯಂತ್ರಿತವಾಗಿ ಅನೇಕ ಬಾರಿ ಹೇಳುವ ಶಬ್ದಗಳು; ಪದಪುಂಜಗಳು ಇರುತ್ತವೆ. ಇದಲ್ಲದೆ ಪ್ರತಿಯೊಬ್ಬ ಮಾತುಗಾರನಿಗೂ ಅವನದೇ ಆದ ವಿಶಿಷ್ಟ ಶಬ್ದಘೋಷಗಳಿರುತ್ತವೆ. ಅವೇ 'ಹಿಡಿನುಡಿಗಳು' ಅಥವಾ 'ಸೆಳೆನುಡಿಗಳು'. ಅದನ್ನೇ ಇಂಗ್ಲಿಷಿನಲ್ಲಿ 'ಕ್ಯಾಚ್ ವರ್ಡ್' ಎಂದು ಕರೆಯುವುದು. ಅವುಗಳ ಜಾಡು ಹಿಡಿದು ಹೊರಟರೆ ಅದೊಂದು ರಸಯಾತ್ರೆ ಆಗುತ್ತದೆ. ಕೆಲವು ವಿಶೇಷ ವ್ಯಕ್ತಿಗಳ ಕ್ಯಾಚ್ ವರ್ಡನ್ನು ನೆನೆಸಿಕೊಂಡರೆ ಮುಖದಲ್ಲಿ ಮುಗುಳ್ನಗೆ ತಾನಾಗಿಯೇ ಬರುತ್ತದೆ. ನಮ್ಮ ಕ್ಯಾಚ್ ವರ್ಡನ್ನು ನೆನೆಸಿಕೊಂಡು ಇತರರಿಗೆ ಸಂತೋಷವಾದರೆ ಅಷ್ಟರಮಟ್ಟಿಗೆ ನಾವು ಪ್ರಾಜ್ಞರಾದೆವೆಂದು ಸಂತೋಷಪಡಬಹುದು. ಎಷ್ಟಾದರೂ ಸಂತೋಷಂ ಜನಯೇತ್ ಪ್ರಾಜ್ಞಃ ಅಲ್ಲವೇ!



ತಳವಿಲ್ಲದೆ ಬಳ್ಳಗಟ್ಟಲೆ ಅಳೆಯುವ ನುರಿತ ಪುಢಾರಿಗಳ ಮಾತು ಹೀಗಿರುತ್ತದೆ: "ಈ ಯಾವ ಒಂದು ಸಭೆಯಲ್ಲಿ ನಿಮ್ಮೆಲ್ಲರ ಗಮನಕ್ಕೆ, ಯಾವ ಒಂದು ವಿಚಾರವನ್ನು ತರಬೇಕೆಂದು ಯಾವ ಒಂದು ನಿರ್ಧಾರವನ್ನು ಮಾಡಿಕೊಂಡು ಬಂದಿದ್ದೇನೋ, ಅದನ್ನು ಯಾವ ಒಂದು ಮಹಾಜನಗಳಾದ ನೀವುಗಳು ಕೇಳಿ, ಯಾವ ಒಂದು ರೀತಿ ಪ್ರತಿಕ್ರಿಯಿಸುತ್ತೀರಿ ಎಂಬುದನ್ನು ತಿಳಿದು_ ನಮ್ಮ ಯಾವ ಒಂದು ವಿರೋಧ ಪಕ್ಷದವರು ಇದ್ದಾರೋ, ಅವರಿಗೆ ಯಾವ ಒಂದು ನಮ್ಮ ಆಡಳಿತ ಪಕ್ಷದವರು_" ಈ ರೀತಿಯ ಭಾಷಣಗಳನ್ನು ಕೇಳಲು ನಿಮಗೆ ಬೇಜಾರಾದರೆ, ಆಗ ಆ ವಾಕ್ಪಟು ಐದು ನಿಮಿಷಗಳಲ್ಲಿ ಎಷ್ಟುಬಾರಿ, "ಯಾವ ಒಂದು" ಎಂದು ಹೇಳಿದರು ಎಂದು ಎಣಿಸುತ್ತಾ ಹೋಗಬಹುದು. ಇಲ್ಲಿ ನಿಮಗೆ ಒಂದು ಎಚ್ಚರಿಕೆ! ಏನೇ ಆದರೂ ಒಂದು ವಾಕ್ಯದಲ್ಲಿ ಎಷ್ಟು ಬಾರಿ "ಯಾವ ಒಂದು_" ಶಬ್ದ ಬರುತ್ತದೆ ಎಂದು ಮಾತ್ರ ಎಣಿಸಬೇಡಿ. ಯಾಕೆಂದರೆ ಸಾಮಾನ್ಯವಾಗಿ ಅವರ ಪೂರ್ತಿ ಭಾಷಣವು ಮುಗಿಯದ ಒಂದೇ ವಾಕ್ಯವಾಗಿರುತ್ತದೆ.

ಇನ್ನೊಂದು ಬಾರಿ ಕೆಲಸಕ್ಕೆ ಸೇರುವ ವಿಚಾರವಾಗಿ ಒಬ್ಬರು ಫೋನ್ ಮಾಡಿದ್ದರು. ಆಗ ನಡೆದ ಸಂಭಾಷಣೆ ಇದು.

"ನಮಸ್ಕಾರ ಸರ್, ನಾನು ಸರ್, ಮೂರ್ತಿ_ ಅಕ್ಚುಯಲಿ ಮೂರ್ತಿ ಸರ್"

"ಏನು ಅಕ್ಚುಯಲಿ ಮೂರ್ತಿನ_?"

"ಇಲ್ಲ ಸರ್, ಅಕ್ಚುಯಲಿ ಎ ಬಿ ಸಿ ಮೂರ್ತಿ ಸರ್_"



"ಓ ಸರಿ, ಅಂದ್ರೆ ಅಕ್ಚುಯಲಿ ಎ ಬಿ ಸಿ ಮೂರ್ತಿ ಅಂತ ನಿಮ್ಮ ಹೆಸರಾ?"

"ಅಕ್ಚುಯಲಿ ಹೌದು ಸರ್". ಅಕ್ಚುಯಲಿ ಎಂಬುದು ಎ ಬಿ ಸಿ ಮೂರ್ತಿಯವರ ಸೆಳೆನುಡಿ ನಿಮಗೆ ಗೊತ್ತಾಯಿತಲ್ಲ!

ಬಹಳ ಜನರಿಗೆ, ನನ್ನನ್ನೂ ಸೇರಿಸಿಕೊಂಡು "ಇದು"ಎನ್ನುವುದು ಸೆಳೆನುಡಿಯಾಗಿರುತ್ತದೆ. ಸೆಳೆನುಡಿಯ ಸೆಳೆತಕ್ಕೆ ಸಿಕ್ಕರೆ ಅದರ ಅಮಲಿನ ಪರಿಣಾಮ ವಿವರಣಾತೀತ. ಷಷ್ಟ್ಯಬ್ದಿ ಪೂರೈಸಿರುವ ನಾವು ಮಾತನಾಡುವಾಗ, ಹೇಳಬೇಕೆಂದಿರುವ ಶಬ್ದ ತಕ್ಷಣ ನೆನಪಿಗೆ ಬರದೇ ಕೈಕೊಟ್ಟರೆ, ಆಗ ಆಪತ್ ರಕ್ಷಕ ಪದ ಎಂದರೆ "ಇದು". ಅದರ ವಿಸ್ತರಣೆಯಾಗಿ 'ಇವನು, ಇವಳು' ಇತ್ಯಾದಿ ಪದಗಳು ಪುಂಖಾನು ಪುಂಖವಾಗಿ ಬಾಯಿಯಿಂದ ಉದುರುತ್ತವೆ.

ಒಮ್ಮೆ ನನ್ನ ಸ್ನೇಹಿತರು ಹೇಳಿದ್ದನ್ನು, ಆದಷ್ಟು ಅವರು ಹೇಳಿದಂತೆ ನಿಮಗೆ ತಿಳಿಸುತ್ತೇನೆ. ಬಹಳ ವರ್ಷಗಳ ಮೇಲೆ ಸಿಕ್ಕಿದಾಗ ಅವರು ಹೇಳಿದ್ದು ಇದು:

"ನಿನಗೆ ಗೊತ್ತಲ್ಲಪ್ಪ, ನನ್ನ ಇವಳಿಗೆ ಇದು ಮಾಡಬೇಕು ಅಂತ ತುಂಬಾ ಇದು ಮಾಡ್ತಾ ಇದ್ದೆ. ಯಾವುದು ಇದಾಗ್ಲಿಲ್ಲ. ಕೊನೆಗೆ ಒಬ್ಬ ಇದಾದ. ಅವರು ನಮಗೆ ಒಂದು ರೀತಿ ದೂರದ ಇದೇ. ಅವರೆಲ್ಲ ತುಂಬಾ ಒಳ್ಳೆ ಇದು. ಅವನು ಇದು ಮುಗಿಸಿ, ಇಲ್ಲೆ ಇದು ಮಾಡ್ತಾ ಇದಾನೆ. ಒಳ್ಳೆ ಇದು ಬರುತ್ತೆ. ಅವರಿಬ್ಬರ ಇದೂ ಚೆನ್ನಾಗಿ ಇದಾಯ್ತು. ಅವರ ಇದು ಮಾಡಿ ಮುಗಿಸ್ದೆ. ಇಬ್ರೂ ಮನೆ ಹತ್ತಿರಾನೇ ಇದು ಹೂಡಿದಾರೆ. ಒಂದುವರೆ ವರ್ಷಕ್ಕೆ ಮೊದಲನೇ ಇದು. ಅದಾದ ಎರಡು ವರ್ಷಕ್ಕೆ ಇನ್ನೊಂದು ಇದು. ಈಗ ಎಲ್ರೂ ಇದಾಗಿದಾರೆ. ನಾವು ಇದಾಗಿದ್ದೀವಿ. ಇನ್ನು ನಿನ್ನ ಇದು ಏನಪ್ಪಾ?"

ಅವನ ಮಾನಸ ನಿಘಂಟಿನಲ್ಲಿ "ಇದು" ಪದಕ್ಕೆ ಎಷ್ಟು ಅರ್ಥಗಳಿವೆ ನೋಡಿ! ಒಟ್ಟಿನಲ್ಲಿ ಅವನು ಏನು ಹೇಳಬೇಕು ಅಂತಿದ್ದ ಅನ್ನೋದು ಸ್ಪಷ್ಟವಾಗಿ ಗೊತ್ತಾಗಿತ್ತು. ಇನ್ನೇನು ಬೇಕು? ಅನಂತರ ಅವನಿಗೆ ನಾನು ಸಂತೋಷದಿಂದ ಇದು ಮಾಡಿ, ಹತ್ತಿರದಲ್ಲಿದ್ದ ಇದರಲ್ಲಿ ಇದು ತಿಂದು, ಆಮೇಲೆ ಬಿಸಿ ಬಿಸಿ ಇದು ಕುಡ್ದು, ನಮ್ಮ ನಮ್ಮ ಇವುಗಳಿಗೆ ಇದಾದ್ವಿ.



ನನ್ನ ಸ್ನೇಹಿತನೊಬ್ಬ ಮದುವೆಯಾದ ಹುಡುಗಿ ತಮಿಳುನಾಡಿನಿಂದ ಕನ್ನಡನಾಡಿಗೆ ಬಂದವಳು. ಧನ ಕನಕ ವಸ್ತು ವಾಹನಗಳ ಸಮೇತ ಬಂದವಳಿಗೆ ತಮಿಳು ಬಿಟ್ಟು ಬೇರೆ ಏನೂ ಬರುತ್ತಿರಲಿಲ್ಲ. ಅವಳ ಗಂಡನ ಸ್ನೇಹಿತರ ಹೆಂಡತಿಯರು, ಅವಳಿಗಾಗಿ ತಮಿಳು ಕಲಿಯದೇ ಇರಲು ಪಣತೊಟ್ಟರು. ಹಾಗೆ ಹಠ ಹಿಡಿದು ಅವಳಿಗೆ ಕನ್ನಡವನ್ನು ಕಲಿಸಿಬಿಟ್ಟರು. ಆಕೆ ಯಾವಾಗಲೂ ಉಪಯೋಗಿಸುತ್ತಿದ್ದ ಕ್ಯಾಚ್‌ವರ್ಡ್ ತಮಿಳಿನ 'ವಂದುಟ್ಟು' ಪದದ ಕನ್ನಡ ರೂಪ "ಬಂದ್ಬುಟ್ಟು". ನಮಗೆಲ್ಲ ಅವಳ ಕನ್ನಡ ಕೇಳುವುದಕ್ಕೆ ಬಹಳ ಆನಂದವಾಗುತ್ತಿತ್ತು. ಅದರ ಒಂದು ಸ್ಯಾಂಪಲ್–

"ನಾನು ಬಂದ್ಬುಟ್ಟು ನಮ್ಮ ಅಕ್ಕನ ಮನೆಗೆ ಹೋದೆ. ಅವಳು ಬಂದ್ಬುಟ್ಟು ಬೀಗ ಹಾಕ್ಕೊಂಡು ಮಾರ್ಕೆಟ್ಟಿಗೆ ಹೋಗಿದ್ಲು. ನಾನು ಬಂದ್ಬುಟ್ಟು ಗೇಟ್ ಹತ್ತಿರ ನಿಂತ್ಕೊಂಡಿದ್ನ, ನಮ್ಮಮ್ಮ ಬಂದ್ಬುಟ್ಟು ಫೋನ್ ಮಾಡ್ಬಿಟ್ರು. ನಾನು ಬಂದ್ಬುಟ್ಟು

ಹಾಗೆ ಮಾತಾಡ್ತಾ ಆ ಕಡೆ ಕಿಟಕಿ ಒಳಗೆ ಇಣುಕಿ ನೋಡಿದೆ. ಆಗ ಪಕ್ಕದ ಮನೆಯವರು ಬಂದ್ಬುಟ್ಟು 'ಯಾರ್ರೀ ನೀವು? ಯಾಕೆ ಕಿಟಕಿ ಒಳಗೆ ಬಗ್ಗಿ ನೋಡ್ತೀರಾ?' ಅಂತ ಜಗಳಕ್ಕೆ ಬಂದ್ಬುಟ್ರು".

ಇನ್ನು ನನ್ನ ಬಾಸ್ ಒಬ್ಬರ ಮಾತಿನ ಪ್ರಾರಂಭವು 'ನೋ' ಇಂದ ಆಗುತ್ತಿತ್ತು. ಅದು ಅವರ ಕ್ಯಾಚ್ ವರ್ಡ್ ಅದರ ಜೊತೆಗೆ ಅರ್ಧ ಮಾತುಗಳನ್ನು ನುಂಗಿಬಿಡುತ್ತಿದ್ದರಿಂದ ಅವರು ಏನು ಹೇಳುತ್ತಾರೆ ಎಂದು ಅನೇಕರಿಗೆ ತಿಳಿಯುತ್ತಿರಲಿಲ್ಲ. ಅವರು ಒಮ್ಮೆ ನ್ಯಾಯಾಲಯದಲ್ಲಿ ತಜ್ಞಸಾಕ್ಷಿಯಾಗಿದ್ದರು. ವಕೀಲರು ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ, ಕೊನೆಗೆ ನ್ಯಾಯಾಧೀಶರಿಗೆ "ಈ ತಜ್ಞಸಾಕ್ಷಿಯು ನಮ್ಮ ಪ್ರತಿಪಾದನೆಗೆ ಸಂಪೂರ್ಣ ಸಹಮತರಾಗಿದ್ದಾರೆ" ಎಂದರು.



ನ್ಯಾಯಾಧೀಶರು ಸಾಕ್ಷಿಯ ಅರ್ಧ ನುಂಗಿದ ಮಾತುಗಳನ್ನು ಕೇಳಿ, "ನಾನೇ ಕೇಳುತ್ತೇನೆ" ಎಂದು, ಸಾಕ್ಷಿಯ ಕಡೆ ತಿರುಗಿ "ಈ ವಕೀಲರ ಪ್ರತಿಪಾದನೆಯನ್ನು ಸಂಪೂರ್ಣವಾಗಿ ನೀವು ಒಪ್ಪುತ್ತೀರಾ?" ಎಂದು ಕೇಳಿದರು. ತಜ್ಞಸಾಕ್ಷಿಯು "ನೋ ಸರ್_ " ಎಂದು ತಮ್ಮ ಮಾತನ್ನು ಪ್ರಾರಂಭಿಸಿದರು.

ನ್ಯಾಯಾಧೀಶರು ವಕೀಲರಿಗೆ "ಏನ್ರೀ ಇದು, ಸಾಕ್ಷಿ 'ನೋ, ನೋ' ಅಂತ ಹೇಳ್ತಿದ್ದಾರೆ. ನೀವು ಅವರ ಹೇಳಿಕೆಯನ್ನು ತಿರುಚುತ್ತ ಇದ್ದೀರಾ?" ಅಂತ ಕೋಪದಿಂದ ಕೇಳಿದರು. ವಕೀಲರು ಬೆವರನ್ನು ಒರೆಸಿಕೊಳ್ಳುತ್ತಾ ಇವರತ್ತ ನೋಡಿದರು. ಸಾಕ್ಷಿ ಬೆಚ್ಚಿ ಬಿದ್ದು "ನೋ ಸರ್, ನಾನು ಸಹಮತನಾಗಿದ್ದೇನೆ" ಎಂದರು.

ನ್ಯಾಯಾಧೀಶರಿಗೆ ಸಾಕ್ಷಿಯ 'ನೋ' ಒಂದು ಕ್ಯಾಚ್ ವರ್ಡ್ ಎಂದು ತಿಳಿಯಿತು. ಅವರು ನಗುತ್ತ, "ಓ, **NO** ಅಲ್ಲ **KNOW,** ಅವರ ತಜ್ಞ ಹೇಳಿಕೆಯನ್ನು ಬರಹರೂಪದಲ್ಲಿ ಪಡೆದು ದಾಖಲಿಸಿ" ಎಂದು ಆಜ್ಞೆ ಮಾಡಿದರು.

ಇಲ್ಲಿಗೆ ನನ್ನ ಈ ಇದು ಇದಾಯಿತು ಅಂತ ತಿಳಿಸಲು ನನಗೆತುಂಬಾ ಇದಾಗ್ತಾ ಇದೆ.

***



ನೋಡಿಯೋ ಸಾಹಿತ್ಯ ದಾಸೋಹ 205

ಅಧ್ಯಕ್ಷರ ಅನಿಸಿಕೆಗಳು

– ಎಸ್. ಧೀರೇಂದ್ರ

ನನ್ನ ಎಲ್ಲಾ ದಾಸೋಹಿ ಮಿತ್ರರಿಗೆ ಸವಿನಯ ನಮಸ್ಕಾರಗಳು. ಇಂದಿನ ದಾಸೋಹದ ಅಧ್ಯಕ್ಷೀಯ ಜವಾಬ್ದಾರಿಯನ್ನು ನನಗೆ ವಹಿಸಿದ ಸಂಚಾಲಕ ಸಮಿತಿ ಸದಸ್ಯರಿಗೂ, ವಿಶೇಷವಾಗಿ ಗೆಳೆಯ, ಕವಿ, ಸಾಹಿತಿ ಮಹಾಬಲರಿಗೂ ನನ್ನ ಆತ್ಮೀಯ ವಂದನೆಗಳು.

ಈ ವೇದಿಕೆಯ ಸದಸ್ಯರೆಲ್ಲರೂ ಅನೇಕಾನೇಕ ಲೇಖನಗಳನ್ನು, ಕತೆಗಳನ್ನು, ಕವನಗಳನ್ನು, ಕಾದಂಬರಿಗಳನ್ನು ಬರೆದವರು, ಬರೆಯುತ್ತಿರುವವರು. ಇಂತಹ ಘಟಾನುಘಟಿಗಳ ಪ್ರಸ್ತುತಿಗಳನ್ನು ಅಧ್ಯಕ್ಷ ಸ್ಥಾನದಿಂದ ಅವಲೋಕಿಸುವ ಅವಕಾಶ ನನ್ನದಾಗಿರುವುದು ನನ್ನ ಸೌಭಾಗ್ಯ. ಇದಕ್ಕೆ ನಾನು ಸಂಪೂರ್ಣ ಅರ್ಹನಲ್ಲ ಎಂಬ ಅರಿವಿನಿಂದ ಈ ಕೆಲಸವನ್ನು ನಿರ್ವಹಿಸುತ್ತಿದ್ದೇನೆ.

ಇಂದಿನ ದಾಸೋಹಕ್ಕೆ ಒಟ್ಟು 25 ಪ್ರಸ್ತುತಿಗಳು ಬಂದಿವೆ. ಇದರಲ್ಲಿ ಕವನಗಳಿವೆ, ಹಾಡುಗಳಿವೆ, ಲಾವಣಿ ಇದೆ, ಹರಟೆ ಇದೆ, ಲೇಖನಗಳಿವೆ, ಕತೆಗಳಿವೆ, ಪ್ರವಾಸ ಕಥನಗಳಿವೆ, ಹೊಸ ಗಾದೆಗಳಿವೆ, ಪುಸ್ತಕ ವಿಮರ್ಶೆಯೂ ಇದೆ. ಒಂದೊಂದಾಗಿ ಗಮನಿಸೋಣ ಬನ್ನಿ.

1. ಅಲ್ಲಿ ಆ ನಾಲ್ಕು ಶ್ಲೋಕಗಳು – ಶಾಂತಾ ನಾಗಮಂಗಲ

ಮಹಾಕವಿ ಕವಿಕುಲಗುರು ಕಾಳಿದಾಸನ "ಅಭಿಜ್ಞಾನ ಶಾಕುಂತಲ" ನಾಟಕದ ನಾಲ್ಕನೇ ಅಂಕದಲ್ಲಿನ ನಾಲ್ಕು ಶ್ಲೋಕಗಳು ಅತ್ಯುತ್ತಮ ಎಂದೇ ಪರಿಗಣಿಸಲ್ಪಟ್ಟಿವೆ. ಅಭಿಜ್ಞಾನ ಶಾಕುಂತಲದ ಮಹತ್ವವನ್ನೂ, ಈ ನಾಲ್ಕು ಶ್ಲೋಕಗಳ ಪರಿಚಯವನ್ನೂ ಶಾಂತಾ ನಾಗಮಂಗಲ ಅವರು ಅತ್ಯಂತ ಹೃದಯಂಗಮವಾಗಿ, ವಿದ್ವತ್‌ಪೂರ್ಣವಾಗಿ ಮಾಡಿಕೊಟ್ಟಿದ್ದಾರೆ. ಈ ನಾಲ್ಕು ಶ್ಲೋಕಗಳು ಶಕುಂತಲೆಯ ಸಾಕು ತಂದೆ ಕಣ್ವ ಮುನಿಗಳು ಗರ್ಭಿಣಿ ಮಗಳನ್ನು ದುಷ್ಯಂತನ ಬಳಿಗೆ ಕಳಿಸಿ ಕೊಡುವಾಗ ಹೇಳುವ ಹಿತವಚನಗಳು, ಸಂದೇಶಗಳು!

ಈ ಪಾಠವನ್ನು ಕಾಲೇಜಿನಲ್ಲಿ ಪ್ರೊಫೆಸರ್ ವರದದೇಶಿಕಾಚಾರ್ಯರಿಂದ ಕೇಳುವ ಸೌಭಾಗ್ಯ ನನ್ನದಾಗಿತ್ತು. ಈ ಶ್ಲೋಕ ಚತುಷ್ಟಯದ ಸ್ವಾರಸ್ಯವನ್ನು ಚೆನ್ನಾಗಿ ಮನದಟ್ಟು ಮಾಡಿದ್ದರು. ಶಾಂತಾ ಅವರ ಲೇಖನದ ಮೂಲಕ ಅವೆಲ್ಲವೂ ನನ್ನ ಸ್ಮೃತಿಪಟಲದಲ್ಲಿ ಹಾದು ಹೋದವು.

"ಸಾಮಾನ್ಯ ಪ್ರತಿಪತ್ತಿಪೂರ್ವಕಮಿಯಂ" ಎಂಬಲ್ಲಿ "ಸಾಮಾನ್ಯ" ಎಂಬ ಮೂರಕ್ಷರದ ಪದಕ್ಕೆ ಪದ ವಿಭಾಗ ಮಾಡಿ ಐದು ಅರ್ಥಗಳನ್ನು ಹೇಳಿರುವುದನ್ನು ಶಾಂತಾ ನಾಗಮಂಗಲ ಅವರು ಪಾಂಡಿತ್ಯಪೂರ್ಣವಾಗಿ, ವಿಶದವಾಗಿ ವಿವರಿಸಿದ್ದಾರೆ.. ಅವರಿಗೆ ಅಭಿನಂದನೆಗಳು, ಅಭಿವಂದನೆಗಳು. ಅವರ ಪಾಂಡಿತ್ಯಕ್ಕೆ ನಮೋನ್ನಮಃ.

2. ಕೌಸಲ್ಯೆಯ ರಾಮ – ರಾಧಿಕಾ ಗುರ್ಜರ್

"ಕೌಸಲ್ಯೆಯ ರಾಮ" ಕವನದಲ್ಲಿ ಕವಯಿತ್ರಿ ರಾಧಿಕಾ ಗುರ್ಜರ್ ಅವರು ತಾವೇ ಕೌಸಲ್ಯೆಯಾಗಿ ರಾಮಚಂದ್ರನ ಬಾಲ್ಯ ದಿನಗಳನ್ನು ಬಹಳ ಸುಂದರ ಸಾಲುಗಳಲ್ಲಿ ವಿವರಿಸಿದ್ದಾರೆ.

"ನೀಲ ನೀರಜಗಳರಳಿಸಿದೆ", ಮತ್ತು "ಅಂಗಳಕಿಳಿದು ಮಮ್ಮು ಉಣುತಿರೆ ಉಳಿದ ತುತ್ತುಗಳಿಗಾಗಿ ಇಳಿದ ಗಿಳಿವಿಂಡು ರಾಮನಾಮ ಮರೆತಿವೆ" ಹಾಗೂ "ಚೆನ್ನ ಖನಿಯ ಹಾಲ್ಗೆನ್ನೆ ನೋಡೆ ತನ್ನ ಬನಿಯ ಶಶಿ ಒರೆಸಿಕೊಂಡನೆ" ಮತ್ತು "ವಾತ್ಸಲ್ಯಕೆ ಉಪಮೆ ಹಿರಿಯಣ್ಣನು" ಹಾಗೂ "ಆಲಿಸುತಿಹ ಆದಿಪುರುಷನು ಇಳಿವ ಜೊಲ್ಲಿನ ಜೇನ ಒರೆಸನು". ಮುಂತಾದುವು ಬಹಳ ಇಷ್ಟವಾಗುವ ಸಾಲುಗಳು. ಭಾವಪೂರ್ಣತೆಯಿಂದ, ಶಬ್ದ ಸಿರಿಯಿಂದ ತುಂಬಿವೆ.

೩. ಅಪ್ಪಯ್ಯನಿಗೆ ಮದುವೆ – ಗೋಪಿನಾಥ

ಇದು ಸರಳವಾಗಿ ಓದಿಸಿಕೊಳ್ಳುವ ಕತೆ. ಕತೆ ಹೇಳುವುದರಲ್ಲಿ ಗೋಪಿನಾಥರು ಬಹಳ ಚತುರರು. ಮಗಳ ಮದುವೆ ಮಾಡಲು ಹೊರಟ ಕುಲಕರ್ಣಿಯವರನ್ನು ಅವರ ಮಗಳೇ ನಿಂತು ಅವರನ್ನೇ ಮದುವೆಗೆ ಒಪ್ಪಿಸುವ ಕತೆ. ಸುಂದರವಾಗಿ ಹೆಣೆದ ಈ ಕತೆಯಲ್ಲಿ ಉತ್ತರ ಕರ್ನಾಟಕದ ಭಾಷಾ ಶೈಲಿಯನ್ನು ಬಳಸಿದ್ದಾರೆ. ಇದು ಪ್ರಶಂಸಾರ್ಹವಾಗಿದ್ದರೂ ಅಲ್ಲಲ್ಲಿ ಕೆಲವು ದೋಷಗಳು ನುಸುಳಿವೆ.

ಕುಲಕರ್ಣಿಯವರು ಸಾಧಾರಣವಾಗಿ ಬ್ರಾಹ್ಮಣರು. ಈ ಮನೆಗಳಲ್ಲಿ ಭಾಷೆ ಸ್ವಲ್ಪ ಶುದ್ಧವಾಗಿರುತ್ತದೆ. ಐತಿ, ಯಪ್ಪಾ, ಕುಂದಿಲ್ರೀ, ತಿಂಡಿ, ತಮಾಷಿ ಪದಗಳ ಬದಲಾಗಿ, ಇರ್ತದ, ಅಪ್ಪಾ, ಕೂಡ್ರಿ, ಫಳಾರ, ಚಾಷ್ಟಿ ಎಂದು ಬಳಸುತ್ತಾರೆ. ಇಂತಹ ದೋಷಗಳು ಇನ್ನಷ್ಟಿವೆ. ಬಹುಶಃ ಧಾರಾವಾಹಿಗಳ ಪ್ರಭಾವ. ಸರಿಪಡಿಸಿದರೆ ಕತೆ ಇನ್ನಷ್ಟು ಸುಂದರ ವಾಗುತ್ತದೆ. ಕತೆ ಮನಸ್ಸಿಗೆ ಮುದ ನೀಡಿತು.

4. ಮರದ ಸಾವು – ಕೆ ಎಸ್ ನಾಗರತ್ನ

ಪ್ರೀತಿಯಿಂದ ನೀರುಣಿಸಿ, ಪೋಷಿಸಿ ಬೆಳೆಸಿದ ಸಸಿ ಮುಂದೆ ಹೆಮ್ಮರವಾದಾಗ ಅಭಿವೃದ್ಧಿಯ ಹೊಡೆತಕ್ಕೆ ಸಿಕ್ಕು ಧರೆಗುರುಳಿದಾಗ ಆಗುವ ಸಂಕಟವನ್ನು ಲೇಖಕಿ ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಸಣ್ಣಪುಟ್ಟ ಗಿಡಗಳು ಮನೆಯ ಕಾರ್ ಗ್ಯಾರೇಜಿಗೆ ಬಲಿಯಾದರೆ, ಹೆಮ್ಮರವು ರಸ್ತೆ ಅಗಲೀಕರಣಕ್ಕೆ ಅಭಿವೃದ್ಧಿಯ ಹೆಸರಿನಲ್ಲಿ ಬಲಿಯಾಯಿತು. ಬೆಳಸಿದವರಿಗಿರುವ ಪ್ರೀತಿ ಬಳಸುವವರಿಗೆ ಇರುವುದಿಲ್ಲ ಎಂಬ ಮಾತನ್ನು ಬಹಳ ಸ್ಫುಟವಾಗಿ ಈ ಲೇಖನದಲ್ಲಿ ನಾಗರತ್ನ ಅವರು ಹೇಳಿದ್ದಾರೆ.

5. ಒಳಗೂ ಹೊರಗೂ – ಶಾಂತಿ ವಾಸು

ಮನುಷ್ಯ ಉಟ್ಟ ಬಟ್ಟೆ, ಮಾಡುವ ಕೆಲಸದಿಂದ ಯಾರನ್ನೂ ಅಳೆಯಬಾರದು ಎನ್ನುತ್ತಾರೆ ಲೇಖಕಿ ಶಾಂತಿ ವಾಸು ಅವರು, ತಮ್ಮ "ಒಳಗೂ ಹೊರಗೂ" ಎಂಬ ಸಣ್ಣ ಕತೆಯಲ್ಲಿ. ಹೊಸಮನೆ, ಅಪರಿಚಿತ ಪರಿಸರದಲ್ಲಿ ಒಂಟಿಯಾಗಿ ಮನೆಯಲ್ಲಿರುವ ಗೃಹಿಣಿಯ ಆತಂಕವನ್ನು, ಗೇಟ್ ತೆಗೆದು ಯಾರೋ ಒಳಬಂದಾಗ ಹೆದರಿಕೊಳ್ಳುವುದು, ಮಾತು ಬೆಳೆದಂತೆ ಆ ವ್ಯಕ್ತಿಯಲ್ಲಿ ಆತ್ಮೀಯತೆಯನ್ನು ಕಾಣುವುದು ಮುಂತಾದ ವಿಷಯಗಳನ್ನು ಈ ಕತೆಯಲ್ಲಿ ಹದವಾಗಿ ನಿರೂಪಿಸಿದ್ದಾರೆ.

6. ಕೀಲಿ ಕೈ ನೀಡಿದ ಸಾಂತ್ವನ – ನಿರ್ಮಲ ಜಿ ವಿ

ಇಂದಿಗೆ ಹತ್ತೊಂಭತ್ತು ವರ್ಷಗಳ ಹಿಂದೆ, ಮಗ ಆನಂದ ಅಮೆರಿಕೆಯಲ್ಲಿ ಪ್ರಶಸ್ತಿ ಪಡೆಯುವ ಸಮಾರಂಭದಲ್ಲಿ ಭಾಗವಹಿಸಲು ಮೊದಲ ಬಾರಿ ಅಮೆರಿಕೆಗೆ ಹೋದ ಅನುಭವ ಪ್ರವಾಸ ಕಥನವನ್ನು ಈ ಲೇಖನದಲ್ಲಿ ಲೇಖಕಿ, ವಿಜ್ಞಾನಿ, ನಿರ್ಮಲ ಜಿ.ವಿ. ಅವರು ರಮ್ಯವಾಗಿ ಬರೆದಿದ್ದಾರೆ. ಒಬ್ಬಂಟಿಯಾಗಿ ಮೊದಲಸಲ ವಿಮಾನಯಾನ ಮಾಡಿದಾಗಿನ ಆತಂಕ, ಗೊಂದಲ, ಎಲ್ಲವನ್ನೂ ಸರಳವಾಗಿ ಬಿಚ್ಚಿಟ್ಟಿದ್ದಾರೆ. ಗೊತ್ತಿಲ್ಲದೆ ಸೂಟ್‌ಕೇಸಿಗೆ ಬೀಗ ಹಾಕಿ, ಸಿಕ್ಕಿಬಿದ್ದು, ಹೆದರುತ್ತಲೇ ಅದರ ಕೀಲಿಕೈಯನ್ನು ಸಿಬ್ಬಂದಿಗೆ ಒಪ್ಪಿಸಿ, ಆತಂಕದಲ್ಲೇ ವಿಮಾನ ಹತ್ತಿದ್ದನ್ನೂ, ಗೇಟ್‌ಗಳ

ಗೊಂದಲವನ್ನೂ, ಬಹಳ ಚೆನ್ನಾಗಿ ವಿವರಿಸಿದ್ದಾರೆ. ಮೊದಲಬಾರಿ ವಿಮಾನ ಪ್ರಯಾಣ ಮಾಡಿದ ಅನೇಕರಿಗೆ ಇಂಥ ಅನುಭವಗಳು ಆಗಿರಲಿಕ್ಕೆ ಸಾಕು. ಮೈಸೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ಬರುವಾಗ, ಶ್ರೀರಂಗಪಟ್ಟಣ, ಪಾಂಡವಪುರಗಳು ಬಂದಾಗ, ಸರಿಯಾದ ರೈಲು ಹತ್ತಿದ ಸಮಾಧಾನವನ್ನು ನೆನಪಿಸಿಕೊಂಡು ವಿಮಾನಯಾನದಲ್ಲಿ ಅಂಥ ಸಮಾಧಾನ ದೊರಕದ ಕಳವಳವನ್ನು ವಿವರಿಸುತ್ತಲೇ, ಗಗನಸಖಿ ಸೂಟ್‌ಕೇಸಿನ ಕೀಲಿಕೈ ತಂದು ಕೊಟ್ಟಾಗ, ಸಿಕ್ಕ ಸಾಂತ್ವನವನ್ನು ಲೇಖಕಿ ಸೊಗಸಾಗಿ ವಿವರಿಸಿದ್ದಾರೆ.

7. ನನ್ನ ಹಾಡು – ಭರತೂರು ವಿಜಯಕುಮಾರ

ತಮ್ಮ ಹಾಡು ಹೇಗಿರಬೇಕು ಎಂಬುದನ್ನು ಸೊಗಸಾದ ರೂಪಕಗಳಲ್ಲಿ ಚೊಕ್ಕವಾಗಿ, ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ ಕವಿ ಭರತೂರು ವಿಜಯಕುಮಾರ ಅವರು.

"ಬಾಯಾರಿದೊಡಲಿಗೆ ಸಿಹಿನೀರಿನೊರತೆಯೊಲು ಹಾಯಾಗಿರುತ್ತದೆ ನನ್ನ ಹಾಡು" ಮತ್ತು "ಬಿಂಬವನೇ ನೋಡುತ್ತ ಅಂಗೈ ಸವರಿ ಕೇಶ ತಿದ್ದುವ ಪರಿಯಲಿರಲಿ ನನ್ನ ಹಾಡು" ಹಾಗೂ "ಮಗು ನಕ್ಕು ಕರೆದಂತೆ ಕರು ನೆಗೆದು ಕುಣಿದಂತೆ ಎಳೆಬಿಸಿಲ ಕೋಲಾಗಲೆನ್ನ ಹಾಡು" ಬಹಳ ಸುಂದರವಾದ ಮನಸೆಳೆಯುವ ರೂಪಕಗಳು. ಈ ಕವನ ಮನಮುಟ್ಟಿತು.

8. ಪಾಪದ ಪಾಪಣ್ಣ – ಶೀಲಾ ಅರಕಲಗೂಡು

ಲೇಖನದ ಆರಂಭ ಕುತೂಹಲ ಹುಟ್ಟುಹಾಕುವುದರಲ್ಲಿ ಯಶಸ್ವಿಯಾಗಿದೆ. ಅನೇಕ ಸಮಾರಂಭಗಳಲ್ಲಿ ಸಹಾಯಕನಾಗಿ ಓಡಾಡಿದ್ದ ಪಾಪಣ್ಣನಿಗೆ ತನ್ನದೇ ಸನ್ಮಾನ ಸಮಾರಂಭ ಇದ್ದಾಗ, ಅದು ಚಿಟಿಕೆ ಹೊಡೆಯುವಷ್ಟರಲ್ಲಿ ನಡೆದು, ಮುಗಿದೂ ಹೋಗಿದ್ದು ನಾವೂ ಪಾಪದ ಪಾಪಣ್ಣ ಎಂದು ಲೊಚಗುಟ್ಟುವಂತಾಗುತ್ತದೆ. ಸರಳವಾದ ಹಾಸ್ಯಪೂರಿತ ಲಘುಬರಹ.

9. ಗಾದೆಗಳು ಹೊಸ ಅವತಾರದಲ್ಲಿ – ವೆಂಕಟೇಶ್ ಕೆ.ಆರ್.

ಹಳೆಯ ಗಾದೆಗಳಿಗೆ ಆಧುನಿಕ ಸ್ಪರ್ಶ ಕೊಟ್ಟು ಹೊಸ ಗಾದೆಗಳು ಹೀಗೂ ಇರಬಹುದೇ ಎಂಬ ಆಶಯವನ್ನು ವೆಂಕಟೇಶ್ ನಮ್ಮ ಮುಂದಿಟ್ಟಿದ್ದಾರೆ. ಗಾದೆಗಳು ಜೀವನಾನುಭವದ ಮೂಸೆಯಲ್ಲಿ ತಯಾರಾಗಿ ತಲೆತಲಾಂತರ ಗಳನ್ನು ದಾಟಿ ಬಂದವುಗಳು. ಬಳಸಿದಂತೆ ಭಾಷೆ ಎಂಬಂತೆ ಬಳಕೆ ಹೆಚ್ಚಾದಂತೆ ಜನರ ನುಡಿಮಾನಸದಲ್ಲಿ ಸೇರಿಹೋಗಬಹುದು. ತಾಳ್ಮೆಯಿಂದ ಕಾದು ನೋಡಬೇಕಷ್ಟೇ.

10. ಕಥಾ ಪ್ರಪಂಚ – ಅಜ್ಜಿಯ ಕತೆಗಳು – ವಿಠ್ಠಲ ಇಜೇರಿ

ಪೀಠಿಕೆಯೇ ಬಹಳ ರಸವತ್ತಾಗಿದೆ. ನಮ್ಮನ್ನು 50 ವರ್ಷಗಳ ಹಿಂದೆ ಸೆಳೆದೊಯ್ಯುತ್ತದೆ. "ಆಗ ಇಷ್ಟೊಂದು ಹಣದ ಹರಿದಾಟ ಇರಲಿಲ್ಲ. ಆದರೆ ಜನರಲ್ಲಿ ಪರಸ್ಪರರಲ್ಲಿ ವಿಶ್ವಾಸ, ಪ್ರೀತಿ, ಸಹಾಯ, ಸಹಕಾರಗಳು ಇರುತ್ತಿದ್ದವು. ನಿಜಕ್ಕೂ ಸತ್ಯವಾದ ಮಾತು!

ಊಟ ಮಾಡಿಸುವಾಗ ಮಕ್ಕಳ ಕೈಯಲ್ಲಿ ಮೊಬೈಲ್ ಕೊಟ್ಟು, ತುತ್ತು ತುರುಕುವ ಈ ಕಾಲದಲ್ಲಿ ಅಜ್ಜಿಯ ಕೈತುತ್ತು, ಆಕೆ ಹೇಳುವ ಕತೆಗಳು, ನೀತಿ ಪಾಠಗಳು ನಮ್ಮ ಬಾಲ್ಯವನ್ನು ನೆನಪಿಸುತ್ತವೆ. ಅದರಲ್ಲಿಯೂ, ಅಜ್ಜ ಅಜ್ಜಿಯರು ಮೊಮ್ಮಕ್ಕಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ತಲೆ ಬೆನ್ನು ಸವರುತ್ತ ಕತೆ ಹೇಳುವ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಇದೂ ಈಗ ಹೆಚ್ಚಿನ ಮಕ್ಕಳಿಗೆ ಮರೀಚಿಕೆಯೆ! ಇದರ ಆನಂದವನ್ನು ಅನುಭವಿಸಿದವರಿಗೇ ಅದರ ಮಹತ್ವದ ಅರಿವಾಗಿರುತ್ತದೆ.

ಇನ್ನು "ಪ್ರಶ್ನೆಗೆ ಪ್ರಶ್ನೆ" ಕತೆಯಲ್ಲಿ ತಿಳಿ ಹಾಸ್ಯವಿದೆ, ನೀತಿಪಾಠವಿದೆ. ಅಜ್ಜಿಯ ಮಾರ್ದವತೆ ಸಿದ್ದಪ್ಪ ರಂಗಣ್ಣರು ದೊಡ್ಡವರಾದುದರಿಂದ ಮಾಯವಾಗಿದೆ ಎನ್ನಿಸುತ್ತದೆ. ವಿಠ್ಠಲ ಇಜೇರಿಯವರೂ ಕತೆಯನ್ನು ನವಿರಾಗಿ ಹೇಳುವುದರಲ್ಲಿ ನಿಪುಣರು.

11. ಚಾಮುಂಡೇಶ್ವರಿ ಲಾವಣಿ – ರತ್ನಾ ಮೂರ್ತಿ

ಬಹುಮುಖ ಪ್ರತಿಭೆಯ ಕವಯಿತ್ರಿ, ಲೇಖಕಿ ರತ್ನಾ ಮೂರ್ತಿಯವರು ಕನ್ನಡ ನಾಡಿನ ಗುಡಿ, ನೆಲ, ಜಲ, ವನ, ಗಿರಿಗಳನ್ನು ಸುಂದರವಾಗಿ ಲಾವಣಿ ಹಾಡಿನ ಮೂಲಕ ಸ್ಮರಿಸುತ್ತ, ನಮಿಸುತ್ತ ಮೈಸೂರಿನ ಕುಲದೇವಿ ಚಾಮುಂಡೇಶ್ವರಿಯ ಕತೆಯನ್ನು ರತ್ನಾ ಮೂರ್ತಿಯವರು ಹೇಳಿದ್ದಾರೆ, ಹಾಡಿದ್ದಾರೆ.

ಈ ಹಾಡಿನಲ್ಲಿ ಏನಿಲ್ಲ?! ನಾಡಿನಲ್ಲಿ ಇರುವುದೆಲ್ಲವೂ ಇದೆ! ಬೇಲೂರು, ಹಳೇಬೀಡು, ಕೊಲ್ಲೂರು, ಶೃಂಗೇರಿ, ಶ್ರವಣಬೆಳಗೊಳ, ಹಾಸನಾಂಬೆ, ಮಂಗಳಾದೇವಿ, ಉಡುಪಿ ಕೃಷ್ಣ, ಧರ್ಮಸ್ಥಳ, ಇಡಗುಂಜಿ, ಹೊರನಾಡು, ಶ್ರೀರಂಗಪಟ್ಟಣ, ನಂಜನಗೂಡು, ಹರಿಹರ, ಬನಶಂಕರಿ, ಜೋಗ, ಭರಚುಕ್ಕಿ, ಎಡಮುರಿ, ಬಲಮುರಿ, ಕಾವೇರಿ ತುಂಗೆ, ಹೇಮಾವತಿ, ಕಪಿಲೆ, ಬಿಳಿಗಿರಿರಂಗನ ಬೆಟ್ಟ, ಮಲೆಮಹದೇಶ್ವರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಕೊಡಚಾದ್ರಿ, ಶಿವಗಂಗೆ, ನಂದಿಬೆಟ್ಟ, ಸ್ಕಂದಗಿರಿ, ಮುಳ್ಳಯ್ಯನ ಗಿರಿ ಎಲ್ಲವೂ ಬಂದಿವೆ! ಇಷ್ಟೆಲ್ಲ ಹೆಸರು ನೆನಪು ಇಟ್ಟುಕೊಳ್ಳುವುದೇ ಕಷ್ಟ! ಅಂಥದ್ದರಲ್ಲಿ, ಹಾಡಿನಲ್ಲಿ ಸುಂದರವಾಗಿ ಇವನ್ನೆಲ್ಲ ತಂದಿದ್ದಾರೆ. ಇದರಲ್ಲಿ ಗೇಯ ಗುಣವಿದೆ, ಮಾಧುರ್ಯವಿದೆ, ಜಾನಪದವಿದೆ. ಆಮೇಲೆ ಚಾಮುಂಡಿಯ ಕತೆಯನ್ನು ಸುಂದರವಾಗಿ ಹೆಣೆದಿದ್ದಾರೆ. ದಾರದಲ್ಲಿ ರತ್ನಗಳನ್ನು ಪೋಣಿಸುವಂತೆ ಚಾಮುಂಡಿಗೆ ರಮಣೀಯ ರತ್ನಹಾರವನ್ನು ಲಾವಣಿಯ ಮೂಲಕ ಅರ್ಪಿಸಿದ್ದಾರೆ. ಬಹಳ ಮೆಚ್ಚಿಗೆಯಾಯಿತು.

12. ನನ್ನಮ್ಮನ ಅಲ್ಮೇರಾ – ಎನ್ ವಿ ರಘುರಾಮ್

ಬಾಲಕೃಷ್ಣನ ಬಾಯಲ್ಲಿ ಅಮ್ಮ ಯಶೋದಾ ಬ್ರಹ್ಮಾಂಡವನ್ನೇ ಕಂಡಂತೆ ರಘುರಾಮ್ ಅವರು ತಮ್ಮ ಅಮ್ಮನ ಅಲ್ಮೇರಾ ತೆಗೆದು ನಮಗೂ ಬ್ರಹ್ಮಾಂಡ ದರ್ಶನವನ್ನೇ ಮಾಡಿಸಿದ್ದಾರೆ. ಅಲ್ಮೇರಾದೊಳಗಿನ ಅಚ್ಚುಕಟ್ಟು, ಒಪ್ಪ ಓರಣ, ವಸ್ತುಗಳ ವಿಂಗಡನೆ, ಅವುಗಳ ಜೊತೆಗಿನ ಆಪ್ತ ಸಂಬಂಧ ಎಲ್ಲವನ್ನೂ ನವಿರಾಗಿ, ಹದವಾಗಿ ಮನ ಮೆಚ್ಚುವಂತೆ ತೆಗೆದು ತೋರಿಸಿದ್ದಾರೆ. ಅಮ್ಮ ಜೀವನದುದ್ದಕ್ಕೂ ಸಂಪಾದಿಸಿದ್ದ ಪುಣ್ಯವನ್ನು ಮಂತ್ರಾಲಯದ ಮೃತ್ತಿಕೆ ರೂಪದಲ್ಲಿ ತುಂಬಿದ್ದು ರಘುರಾಮ್ ಸೊಗಸಾಗಿ ತೋರಿಸಿದ್ದಾರೆ. ಎಲ್ಲರ ಮನೆಯಲ್ಲೂ ಇಂತಹ ಅಲ್ಮೇರ ಇರಬಹುದು. ತೆಗೆದು ನೋಡಿದಾಗ ಆಸ್ವಾದಿಸುವ ಸಂಭ್ರಮಿಸುವ ಮನಸ್ಸು ಬೇಕು, ಕಾಣುವ ಕಣ್ಣು ಬೇಕು ಅಷ್ಟೇ!

13. ಸಂಜೀವಾಣಿಯ ಸಂಭಾವನೆ – ಕೆ ಎನ್ ಭಗವಾನ್

ಆಕಸ್ಮಿಕವಾಗಿ ಬಂದ ಒಂದು ಸಂಭಾವನೆಯ ಘಟನೆಯನ್ನು ಈ ಲೇಖನದ ಮೂಲಕ ಭಗವಾನರು ಸುಂದರವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಲೇಖಕನ ತಳಮಳವನ್ನೂ, ಖುಷಿಯನ್ನೂ ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಒಂದು ವಾಸ್ತವಿಕ ಘಟನೆಯ ಸರಳ ನಿರೂಪಣೆ.

14. 'ನೆನಪುಗಳೇ ನೆನಪುಗಳೇ' ಮತ್ತು 'ಭಕ್ತಿಯ ಹಾಡು' – ಮಾಲತಿ ಶ್ರೀನಿವಾಸನ್

ಮಾಲತಿ ಶ್ರೀನಿವಾಸನ್ ಅವರು ಎರಡು ಕವನಗಳನ್ನು ಪ್ರಸ್ತುತಪಡಿಸಿದ್ದಾರೆ. "ನೆನಪುಗಳೇ ನೆನಪುಗಳೇ" ಎಂಬ ಕವನದಲ್ಲಿ ನೆನಪುಗಳನ್ನು ನೆನಪು ಮಾಡಿಕೊಂಡು ಅವುಗಳನ್ನು ವಿವರಿಸಿದ್ದಾರೆ, ಸುಂದರ ಸಾಲುಗಳಲ್ಲಿ. ಸರಳವಾದ ಕವನ, ಸುಂದರ ಸಾಲುಗಳು. "ನಿನ್ನೆಯ ನೆನಪಿಸಿ, ಇಂದನು ಮರೆಸಿ, ನಾಳೆಯಲ್ಲಿ ಮನ ಭ್ರಮಿಸಿ" ಮತ್ತು "ಬಾಲ್ಯದ ತುಂಟಾಟ, ಹರೆಯದ ಹಾರಾಟ, ಮರ್ಕಟ ಮನದ ಚೆಲ್ಲಾಟ" ಮುಂತಾದುವು ಚಂದದ ಸಾಲುಗಳು.

ಎರಡನೆಯ ಕವನ, "ಭಕ್ತಿಯ ಹಾದಿ". ಅಧ್ಯಾತ್ಮಿಕ ನೆಲೆಯಲ್ಲಿ ಸಾಗುವ ಈ ಕವನದಲ್ಲಿ ಭಕ್ತಿಯ ಹಾದಿಯನ್ನು ಚಂದಾಗಿ ವಿವರಿಸಿದ್ದಾರೆ. "ಹಾದಿಯಲ್ಲಿ ಬಂದುದೆಲ್ಲವ ಸರಿಸುತ್ತ ಅತ್ತಿತ್ತ ಬದುವಿನಲಿ" ಮತ್ತು "ಕಾಣದಾ ಕೈ ನಡೆಸಿತ್ತು ಸಂತೃಪಿ ಪ್ರತಿ ತಿರುವಿನಲು ಮುಂದಕೆ" ಹಾಗೂ "ನಂಬಿಕೆಯ ಶಕ್ತಿಯಿಂದ ಪಯಣಿಸಿದೆ" ಎಂಬ ಸಾಲುಗಳು ಅರ್ಥಪೂರ್ಣ.

15. ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ – ಶ್ರವಣಕುಮಾರಿ

ಒಂದು ಜಾನಪದ ಹಾಡಿನ ಸಾಲನ್ನು ಗುನುಗುತ್ತ ಲೇಖಕಿ ಶ್ರವಣಕುಮಾರಿಯವರು ಈ ಹರಟೆಯನ್ನು ಬಹಳ ಸೊಗಸಾಗಿ ಬರೆದಿದ್ದಾರೆ. ಮನೆಗೆಲಸದವಳ ಮೇಲಿನ ಅವಲಂಬನೆ, ಮನೆಯ ದಿನಚರಿಯಲ್ಲಿ ಅವಳ ಹಾಜರಿಯ ಮಹತ್ವವನ್ನು ರಸವತ್ತಾಗಿ ವರ್ಣಿಸಿದ್ದಾರೆ. ಮೂರ್ತಿಯವರ ಮನೆ ನಿಂಗಿಯ ಮೇಲೆ ಅವರ ಹೆಂಡತಿ ಆವಾಜ್ ಹಾಕಿದ್ದಕ್ಕೆ, ಅವರು ರೇಗಿ, "ನೀವು ಬಾಯಿಗ್ಬಂದಂಗ್ ಮಾತಾಡೋಕ್ ನಾನೇನು ನಿಮ್ಮ ಎಂಡ್ರಾ? ವಸಿ ಮರ್ವಾದೆ ಕೊಟ್ಟು ಮಾತಾಡಿ" ಅಂದದ್ನ ಮೂರ್ತಿಗಳ ಹೆಂಡತಿ ತಮ್ಮ ಹತ್ತಿರ "ನಮ್ಮ ಸ್ಥಾನ ಎಲ್ಲಿಗೆ ಬಂದ್ಹೋಯ್ತು ನೋಡಿ" ಎಂದು ಹೇಳಿರುವಲ್ಲಿ ನವಿರು ಹಾಸ್ಯವಿದೆ. "ಮನೆ ಕೆಲಸದವರ ಬಳಿ ಮಾತಾಡೋವಾಗ ಹುಷಾರಾಗಿರ್ತಾರೆ" ಎಂಬಲ್ಲಿ ವಾಸ್ತವವಿದೆ. "ನಾನು ಸದಾ ಮರೆಯಬೇಕು ಅಂದ್ಕೊಳ್ಳೋ ನನ್ನ ವಯಸ್ಸನ್ನ ಈ ಡಾಕ್ಟರ್ ಜ್ಞಾಪಿಸೋದ!?" ಎಂಬಲ್ಲಿ ಮತ್ತೆ ತಿಳಿ ಹಾಸ್ಯ!

ಹಾಡಿನ ಗುನುಗು, ಯಜಮಾನರ ಕಿರಿಕಿರಿ, ಪರ್ಸಿನಿಂದ ಚೀಟಿ ಹೆಕ್ಕಿ ತೆಗೆಯುವಾಗಿನ ಗಲಿಬಿಲಿ, ತುರ್ತು ಸಂದರ್ಭದಲ್ಲಿ ಕರೆಂಟ್ ಹೋಗುವುದು, ಈ ಎಲ್ಲ ವಿಷಯಗಳಲ್ಲೂ ಸಹಜತೆ ಇದೆ, ವಾಸ್ತವಿಕತೆ ಇದೆ. ನಮ್ಮದೇ ಬದುಕಿನ ಆಗುಹೋಗು ಎನಿಸುತ್ತದೆ. ಮಿಕ್ಸಿ ಕಂಡಾಗ, ಕೊಟ್ಟ ಅಮ್ಮನ ನೆನಪಿನಲ್ಲಿ ಆರ್ದ್ರತೆ ಇದೆ. ಮಾಧುರ್ಯವಿದೆ, ಸವಿನೆನಪಿದೆ. ಪ್ರೀತಿ ಉಕ್ಕಿ ಹರಿದಿದೆ. ಹಾಡನ್ನು ಗುನುಗುವಾಗ ಮನೆಯವರಿಗೆ ಶುಭ ಹಾರೈಕೆಗಳನ್ನೂ ಸೇರಿಸಿ, ಆಶಯಗಳನ್ನು ಅದರಲ್ಲಿ ತುಂಬಿಸಿರುವುದು ಬಹಳ ಸುಂದರವಾಗಿದೆ.

"ಮಲ್ಲಿಗೆ ಹೂ ಮುಡಿಯೋ ಸೊಸೆ ಬರಲಿ" ಎಂದರೂ, ಈಗಿನ ಹುಡುಗಿಯರಿಗೆ ಹೂ ಮುಡಿಯುವುದರಲ್ಲಿ ಆಸಕ್ತಿ ಇಲ್ಲ ಎಂಬ ಸತ್ಯವನ್ನೂ ಮುಂದಿಡುತ್ತಾರೆ! ಹಾಗೇ ಮಲ್ಲಿಗೆ ಮುಡಿಯದಿದ್ದರೂ, ಮಲ್ಲಿಗೆ ಹಾಗೆ ನಗುವವರು ಬರಲಿ ಎಂಬುದಾಗಿ ಸಂತೈಸಿಕೊಳ್ಳುತ್ತಾರೆ. ಒಂಭತ್ತು ಗಂಟೆಗೆ ತಿಂಡಿ ತಟ್ಟೆಯನ್ನು ಯಜಮಾನರ ಕೈಗಿತ್ತು ಸಮಯದ ಸವಾಲು ಗೆದ್ದು ಬೀಗುತ್ತಾರೆ. ಯಾರ್ಯಾರ ನೆನೆಯಲಿ ಎನ್ನುತ್ತಲೇ ಇಷ್ಟೆಲ್ಲವನ್ನೂ ನೆನೆಯುತ್ತ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ! ತುಂಬಾ ಇಷ್ಟವಾಯಿತು!

16. ಪತ್ತೇದಾರಿ ಸಾಹಿತ್ಯಕ್ಕೆ ಹೊಸ ದಿಕ್ಕು ತೋರಿದ, ಸಾಹಿತ್ಯ ಲೋಕದ "ಬಂಗಾರದ ಮನುಷ್ಯ " ಟಿ ಕೆ ರಾಮರಾವ್ – ಕೆ ಎನ್ ಮಹಾಬಲ

ಪ್ರಸಿದ್ಧ ಸಾಹಿತಿ ದಿ. ಟಿ ಕೆ ರಾಮರಾಯರ ಜೊತೆಗಿನ ತಮ್ಮ ಒಡನಾಟವನ್ನು ಬಹಳ ಸೊಗಸಾಗಿ, ಸರಳವಾಗಿ, ಆಪ್ತವಾಗಿ ವರ್ಣಿಸಿದ್ದಾರೆ ಕವಿ, ಸಾಹಿತಿ ಮಹಾಬಲರು. ಸಾಹಿತಿಯ ಬದುಕನ್ನು, ಅವರ ಹಾಸ್ಯಪ್ರಜ್ಞೆಯನ್ನು, ಸಹೃದಯತೆಯನ್ನು, ಬೇರೆಲ್ಲೂ ಸಿಗದ ಮಾಹಿತಿಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಎಲ್ಐಸಿಗೆ ಸಹಿ ಹಾಕದೇ ಕೊಟ್ಟ ಚೆಕ್ಕನ್ನು ಅವರು ಕಣ್ಮುಚ್ಚಿ ಸ್ವೀಕರಿಸಿದ ಬಗ್ಗೆ ಎಲ್ಐಸಿ ಅವರನ್ನು ನವಿರಾಗಿ ಕಿಚಾಯಿಸಿದ್ದಲ್ಲದೇ, ಬ್ಯಾಂಕಿನವರ ಚುರುಕು ಕಣ್ಣನ್ನು ಮೆಚ್ಚಿದ ರಾಮರಾಯರ ಹಾಸ್ಯಪ್ರಜ್ಞೆ ನಮ್ಮಲ್ಲೂ ನಗೆಯ ಅಲೆ ಉಕ್ಕುವಂತೆ ಮಾಡಿತು.

ಲೇಖಕರು ಸಾಧಾರಣವಾಗಿ ಸರಸ್ವತಿಯ ನೆಂಟರು, ಲಕ್ಷ್ಮೀದೇವಿಗೆ ಬಲುದೂರದವರು ಎಂಬ ಸತ್ಯ ದರ್ಶನ ಮಾಡಿಸಿದ್ದಾರೆ. ಪ್ರತಿಷ್ಠಿತ ನಿಯತಕಾಲಿಕೆಗಳಿಗೆ ಕತೆ, ಕಾದಂಬರಿಗಳನ್ನು ಕಳಿಸಿ ಅವು ಸ್ವೀಕೃತವಾಗದೇ ಹಿಂತಿರುಗಿ

ಬಂದುದನ್ನು, ಬಂಗಾರದ ಮನುಷ್ಯ ಮೂಲಕ ಪ್ರಸಿದ್ಧಿಯ ಉತ್ತುಂಗಕ್ಕೇರಿದಾಗ, ಅದೇ ಸಂಪಾದಕರು, ಪ್ರಕಾಶಕರು ಮುಂಗಡ ಹಣ ನೀಡಿ ಬರೆಯಲು ದುಂಬಾಲು ಬಿದ್ದ ಸತ್ಯದ ಕಟು ದರ್ಶನವನ್ನೂ ಮಹಾಬಲರು ಮಾಡಿಸಿದ್ದಾರೆ. ಬಹಳ ಖುಷಿ ನೀಡಿದ ಪರಿಚಯ ಲೇಖನ.

16. ಮನೆಯೇ ಶಾಲೆ – ಜಗನ್ನಾಥ ಜೆ ಎನ್

ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು ಎಂಬುದನ್ನು "ಮನೆಯೇ ಶಾಲೆ" ಲೇಖನದಲ್ಲಿ ಜಗನ್ನಾಥರು ಸೊಗಸಾಗಿ ನಿರೂಪಿಸಿದ್ದಾರೆ. ತಿಳಿಹೇಳುವುದರಲ್ಲಿ ಒಬ್ಬೊಬ್ಬರದೂ ಒಂದೊಂದು ರೀತಿ. ಕತೆಯ ಮೂಲಕ ತಪ್ಪು ಅರಿವಾಗುವಂತೆ ಮಾಡುವುದೂ ಒಂದು ರೀತಿ. ತಪ್ಪು ಮಾಡಿದಾಗ ಮನದಟ್ಟು ಮಾಡುವುದು, ತಿದ್ದುವುದು ಒಂದು ಕಲೆ. ಅದಕ್ಕೆ ಪ್ರಾಮಾಣಿಕತೆ ಬೇಕು ಎಂದು ವಿವರಿಸುತ್ತಾರೆ. ಐಐಎಂನಲ್ಲಿ ಕಲಿಯದಿದ್ದನ್ನು ಮನೆಯಲ್ಲಿ ಕಲಿತೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಜಗನ್ನಾಥ. ಸುಂದರ ಬರಹ, ಇಷ್ಟವಾಯಿತು.

18. ಅದ್ವೈತ ಆಶ್ರಮ, ಮಾಯಾವತಿ – ಗುರುರಾಜ ಶಾಸ್ತ್ರಿ

ಉತ್ತರಾಖಂಡದ ಕುಮಾಂವ್ ಪ್ರದೇಶದಲ್ಲಿರುವ ಮಾಯಾವತಿ ಎಂಬ ಟೀ ಎಸ್ಟೇಟಿನಲ್ಲಿರುವ ಈ ಅದ್ವೈತ ಆಶ್ರಮಕ್ಕೆ ಭೇಟಿಕೊಟ್ಟು ಬಂದಿರುವ ಗುರುರಾಜ ಶಾಸ್ತ್ರಿಗಳು ಸುಂದರವಾಗಿ ಮಾಹಿತಿ ಹಂಚಿಕೊಂಡು ಇತರರಿಗೆ ಮಾರ್ಗದರ್ಶನ ಮಾಡಿದ್ದಾರೆ. ಯಾವುದೇ ಮೂರ್ತಿ ಪೂಜೆ ಇಲ್ಲದೇ ಕೇವಲ ಓಂಕಾರ, ಜೀವಾತ್ಮ, ಪರಮಾತ್ಮ, ಮಾಯೆಗಳ ಬಗ್ಗೆ ಅಧ್ಯಾತ್ಮಿಕ ವಿಚಾರಗಳ ಚರ್ಚೆ ಮತ್ತು ಉಪನ್ಯಾಸಗಳು ನಡೆಯುತ್ತವೆ ಎಂದು ಸವಿವರವಾಗಿ ಹೇಳಿದ್ದಾರೆ. ಅಧ್ಯಾತ್ಮಿಕ ವಿಷಯದಲ್ಲಿ ಗಂಭೀರ ಚಿಂತನೆ ಮಾಡುವವರಿಗೆ ಮಾತ್ರ ಈ ಪರಿಸರವನ್ನು ಅನುಭವಿಸಲು, ಆನಂದಿಸಲು ಸಾಧ್ಯ. ಬರೀ ಪ್ರವಾಸದ ದೃಷ್ಟಿಯಿಂದ ಹೋದವರಿಗೆ ಒಂದೇ ದಿನದಲ್ಲಿ ಸಾಕು ಎನ್ನಿಸಬಹುದು ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ. ಮಾಹಿತಿಪೂರ್ಣ ಪ್ರವಾಸ ಕಥನ.

19. 'ಭವಾನಿ ಕಾಫಿ' ಮತ್ತು 'ದಿಢೀರ್ ಕವನ' – ಬಾಲಸುಬ್ರಹ್ಮಣ್ಯಂ

ಮಲ್ಲೇಶ್ವರದ ಭವಾನಿ ಕಾಫಿ ಬಗ್ಗೆ ಕೆಲವು ಸುಂದರ ಸಾಲುಗಳನ್ನು ಬರೆದು, ಬಾಲಸುಬ್ರಹ್ಮಣ್ಯಂ ಅವರು ಅದರ ರುಚಿ ಸವಿಯಲು ನಮ್ಮನ್ನು ಆಹ್ವಾನಿಸಿದ್ದಾರೆ. "ಅಂತಿಂಥ ಕಾಫಿ ನಮದಲ್ಲ ಇನ್ನಂಥ ಕಾಫಿ ಸಿಗದಲ್ಲ" ಸಾಲುಗಳನ್ನು ಓದಿದಾಗ 'ಅಂತಿಂಥ ಹೆಣ್ಣು ನೀನಲ್ಲ ನಿನ್ನಂಥ ಹೆಣ್ಣು ಇನ್ನಿಲ್ಲ' ಹಾಡನ್ನು ಜ್ಞಾಪಿಸುತ್ತದೆ.

ಇವರ ಇನ್ನೊಂದು ಕವನ. ದಿಢೀರ್ ಕವನ ಬರೆಯಲು ಅದೇನು ಸುಲಿದ ಬಾಳೇಹಣ್ಣೇ ಎನ್ನುತ್ತಲೇ ಒಂದು ಸುಂದರ ಕವನ ರಚಿಸಿದ್ದಾರೆ ಕಲಾವಿದ ಬಾಲಸುಬ್ರಹ್ಮಣ್ಯಂ! 'ಪದಕೋಶ ಎದುರಿಗಿದೆ, ಬೇಕಿರುವ ಪದ ಮರೆಯಾಗಿದೆ', 'ಕಡೆಯಬೇಕು, ಕಾಯಬೇಕು ಬೆಣ್ಣೆ ತಾನಾಗಿ ತೇಲಲು, ಮಾಡಿಸಬೇಕು ಮಂಥನ ನಡೆಸಬೇಕು ಅಮೃತ ಹೊಮ್ಮಲು', 'ನನ್ನ ಕಡೆ ನೋಡವ್ವ ತಾಯಿ ಕಾಯುತ್ತಿದೆ ನಿನಗಾಗಿ ಸಾಲುಗಳು' ಸುಂದರ, ಅರ್ಥಪೂರ್ಣ! ಈ ಪುಟ್ಟ ಕವನ ಇಷ್ಟವಾಯಿತು.

20. ಅಜ್ಜಿಮನೆ ಕಾಯಂಗಿಲ್ಲಾ – ಅನುರಾಧಾ ನಟರಾಜ್

ಕಣ್ಣಾಮುಚ್ಚಾಲೆ ಆಟದ ಮೂಲಕ ಬಸವನಗುಡಿಯ ಬಾಂದುನವರ ಬೀದಿಯಲ್ಲಿ ಕಳೆದ ತಮ್ಮ ಬಾಲ್ಯದ ದಿನಗಳ ನೆನಪನ್ನು ಬಹಳ ಹದವಾಗಿ, ಸುಂದರವಾಗಿ ಚಿಚ್ಚಿಟ್ಟಿದ್ದಾರೆ ಲೇಖಕಿ ಅನುರಾಧಾ ನಟರಾಜ್ ಅವರು. ಬಾಂದುನವರ ಬೀದಿಗೂ ನನಗೂ ಬಹಳ ಹತ್ತಿರದ ಸಂಬಂಧ. ನನ್ನ ಅತ್ತೆ ಮನೆ ಇದ್ದದ್ದು ಅಲ್ಲಿಯೇ. ನಮ್ಮ ತಂದೆಯ ಸಹೋದ್ಯೋಗಿ ದಿ. ಕೃಷ್ಣ ಶಾಸ್ತ್ರಿಗಳ ಮನೆ, ಗೆಳೆಯ ಗುರುರಾಜ ಮೂರ್ತಿಯವರ ಮನೆ ಕೂಡ ಇದ್ದಿದ್ದು ಅಲ್ಲೇ. ಹೀಗಾಗಿ ಅಲ್ಲಿಯ ಪರಿಸರ ನನಗೂ ಪರಿಚಿತವೇ!

ಬೇರೇನೂ ಸಲಕರಣೆ ಬೇಡದ, ಮನಸ್ಸಿಗೆ ಉಲ್ಲಾಸ, ದೇಹಕ್ಕೆ ವ್ಯಾಯಾಮ ನೀಡುವ, ಸಮಯಪ್ರಜ್ಞೆ, ಜಾಣತನ, ಚುರುಕುತನಗಳನ್ನು ಬೆಳೆಸುವ ಆಟ ಕಣ್ಣಾಮುಚ್ಚಾಲೆ ಎಂಬ ಸಾಲುಗಳು ಮನನೀಯ. ಅಡಗುತಾಣಗಳಲ್ಲಿ ವಾಸ್ತವಿಕತೆ ಇದೆ, ಫಜೀತಿಗೆ ಒಳಗಾಗುವುದರಲ್ಲಿ ತಿಳಿಹಾಸ್ಯವಿದೆ. ನೆರೆಹೊರೆಯ ನವಿರಾದ ಸಂಬಂಧಗಳಲ್ಲಿ ಸುಂದರ ಆಪ್ತತೆ ಇದೆ. ಎಲ್ಲರಿಗೂ ತಮ್ಮ ಬಾಲ್ಯದ ದಿನಗಳನ್ನು ನೆನಪಿಸುವ ಈ ಸುಂದರ ಬರಹ ನನಗೆ ಬಹಳ ಇಷ್ಟವಾಯಿತು.

21. ಕ್ಯಾಚ್ ವರ್ಡ್ ಕರಾಮತ್ತು – ಜಿ.ವಿ.ಅರುಣ

ಜಿ ವಿ ಅರುಣ ಅವರ ಲೇಖನಗಳು ಯಾವಾಗಲೂ ವಿಶೇಷವಾಗಿರುತ್ತವೆ. ಹೊಸತನದಿಂದ ಕೂಡಿರುತ್ತವೆ. ಹೊಸ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ. ಈ ಲೇಖನದಲ್ಲಿ "ಕ್ಯಾಚ್ ವರ್ಡ್ ಕರಾಮತ್ತು" ಬಗ್ಗೆ ವರ್ಣರಂಜಿತವಾಗಿ ವಿವರಿಸಿದ್ದಾರೆ. ಇಂಗ್ಲೀಷಿನ ಕ್ಯಾಚ್ ವರ್ಡ್ ಕನ್ನಡದಲ್ಲಿ "ಹಿಡಿ ನುಡಿ" ಅಥವಾ "ಸೆಳೆ ನುಡಿ" ಆಗಿದೆ ಎಂದಿದ್ದಾರೆ. ನಾವು ಮಾತನಾಡುವಾಗ ನಮಗೇ ಅರಿವಿಲ್ಲದಂತೆ ಕೆಲವು ಶಬ್ದಗಳನ್ನು, ಪದಪುಂಜಗಳನ್ನು ಮೇಲಿಂದ ಮೇಲೆ ಬಳಸುತ್ತೇವೆ. ಇದನ್ನೇ ಕ್ಯಾಚ್ ವರ್ಡ್ ಎನ್ನುವುದು ಎಂದು ಸರಳವಾಗಿ ಹೇಳುತ್ತಾರೆ. ಇದಕ್ಕೆ ಪುಢಾರಿಗಳ ಭಾಷಣವನ್ನು ಉದಾಹರಿಸುತ್ತಾರೆ. ಅವರ ಭಾಷಣದಲ್ಲಿ ಎಲ್ಲೂ ಪೂರ್ಣ ವಿರಾಮಗಳಿರುವುದಿಲ್ಲ. ಇಡೀ ಭಾಷಣ ಒಂದೇ ವಾಕ್ಯವಾಗಿರುತ್ತದೆ ಎಂದು ರಸವತ್ತಾಗಿ ವರ್ಣಿಸಿದ್ದಾರೆ. ಒಬ್ಬರು ಮಾಜಿ ಮುಖ್ಯಮಂತ್ರಿಗಳ ಭಾಷಣ ಕೇಳಿದವರಿಗೆ ಇದು ಬಹುಶಃ ಅವರ ಅರಿವಿಗೆ ಬಂದಿರಲಿಕ್ಕೆ ಸಾಕು!

ಹಾಗೆಯೇ, "ಇದು" ಪದದ ಬಳಕೆ, "ಬಂದ್ಬುಟ್ಟು" ಪದದ ಬಳಕೆ, "ನೋ" ಪದದ ಬಳಕೆಯನ್ನು ಸೋದಾಹರಿಸಿ ಮನರಂಜನೆಯ ಜೊತೆ ಓದುಗರ ಅರಿವು ಹೆಚ್ಚಿಸಿದ್ದಾರೆ ಅರುಣ ಅವರು. ಅರುಣ ಅವರ ಲೇಖನ ಓದಿ ನನಗೂ ಬಹಳ "ಇದು" ಆಯಿತು!

22. ಬಯಕೆ – ಬಿ.ಎಸ್. ಶ್ರೀನಿವಾಸ್

ಬಿ.ಎಸ್.ಶ್ರೀನಿವಾಸರು 'ಬಯಕೆ' ಎಂಬ ತಮ್ಮ ಕವನದಲ್ಲಿ ತಾವು ಹೇಗಿರಬೇಕು ಎಂಬ ಮನದಾಸೆಯನ್ನು ಬಹಳ ಸುಂದರವಾಗಿ ತೋಡಿಕೊಂಡಿದ್ದಾರೆ. "ಹರಿವ ನದಿಯ ನಿರ್ಮಲ ನೀರಿನಂತೆ" ಮತ್ತು "ಉರಿದುರಿದು ಜೀವ ತೊರೆದು ಬೆಳಕ ನೀಡುವ ದೇಗುಲದ ಹಣತೆಯಂತೆ" ಹಾಗೂ "ತಮ್ಮದೆಲ್ಲವ ನೀಡಿ ತಮಗಾಗಿ ಏನನ್ನೂ ಬಯಸದ ಅಕ್ಕರೆಯ ಅಮ್ಮಂದಿರಂತೆ ಇರಬೇಕು ಇದ್ದೂ ಇಲ್ಲದಂತೆ" ಮುಂತಾದುವು ಸುಂದರವಾದ, ಅದ್ಭುತವಾದ ಮನಸೆಳೆಯುವ ಸಾಲುಗಳು. ಈ ಕವನ ಬಹಳ ಇಷ್ಟವಾಯಿತು.

23. ಪೋಲೀಸ್ ಸಾಹಿತ್ಯ ಸಂಭ್ರಮ – 2022 – ಶ್ರೀಮಂತ ಕಟ್ಟೀಮನಿ

ಇದೊಂದು ಸಮಾರಂಭದ ವರದಿ. ಕವನದಲ್ಲಿ ಹಿಡಿದಿಡಲು ಕಟ್ಟೀಮನಿ ಪ್ರಯತ್ನಿಸಿದ್ದಾರೆ. ಇದರಲ್ಲಿ ಅಂಥ ವಿಶೇಷತೆ ಏನೂ ನನಗೆ ಕಂಡು ಬರಲಿಲ್ಲ. ಆದರೆ ಪ್ರಯತ್ನ ಮುಂದುವರಿಸಿದರೆ ಮುಂದೊಂದು ದಿನ ಫಲ ಖಂಡಿತವಾಗಿ ಸಿಗುತ್ತದೆ.

24. ಪುಸ್ತಕ ವಿಮರ್ಶೆ – ನೀರಿನೊಳಗಿನ ಮಂಜು – ಡಾ.ನಾ. ಮೊಗಸಾಲೆ – ಮಾಧುರಿ ಕೃಷ್ಣ

ನಾನು ಓದಿರದ ಕಾದಂಬರಿಯ ಬಗ್ಗೆ ಬರೆದ ವಿಮರ್ಶೆ ಓದಿ ನನ್ನ ಅಭಿಪ್ರಾಯ ತಿಳಿಸುವುದು ತೀರ ಕಷ್ಟಕರ ಮತ್ತು ಅದು ಅಷ್ಟು ಸಾಧು ಅಲ್ಲ ಎಂಬುದು ನನ್ನ ಭಾವನೆ. ಆದರೂ ವಿಮರ್ಶೆಯ ಪ್ರಸ್ತುತಿ ಬಂದಿರುವುದರಿಂದ ಅವರು ಏನು ಹೇಳಿದ್ದಾರೆ ಎಂಬುದನ್ನು ಆಧರಿಸಿ ನನ್ನ ಕೆಲವು ಅನಿಸಿಕೆಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

ಇದೊಂದು ಮನೋವಿಶ್ಲೇಷಣಾತ್ಮಕ ಕಾದಂಬರಿ. ಮಾನವನ ವರ್ತನೆ ವೀಕ್ಷಣೆಗೆ ನಿಲುಕದು. ಕೇವಲ ವಿಶ್ಲೇಷಣೆಗೆ ಮಾತ್ರ ಸಿಕ್ಕುವುದು. ಪಾತ್ರಗಳ ವರ್ತನೆಯನ್ನು ಅವರ ಅಂತರಾತ್ಮದ ಅವಲೋಕನಕ್ಕೆ ಒಳಪಡಿಸುತ್ತ, ಮಾನವನ ಮನೋವೈಶಿಷ್ಟ್ಯಗಳನ್ನೂ, ಚಿತ್ತವೈಕಲ್ಯಗಳನ್ನೂ ಜೊತೆಜೊತೆಯಲ್ಲೇ ಓದುಗರ ಮುಂದಿಡುವವರು ಕೆಲವೇ ಅಪರೂಪದ ಬರಹಗಾರರು ಎಂದು ಸೂಕ್ತವಾಗಿ ಹೇಳಿದ್ದಾರೆ ಮಾಧುರಿ ಕೃಷ್ಣ ಅವರು. ಅಂತಹವರ ಸಾಲಿನಲ್ಲಿದ್ದಾರೆ ಡಾ. ನಾ. ಮೊಗಸಾಲೆ. ಅವರ ಈ ಮಾತುಗಳು ನನ್ನಲ್ಲೂ "ನೀರಿನೊಳಗಿನ ಮಂಜು" ಕಾದಂಬರಿಯನ್ನು ಓದ ಬೇಕೆಂಬ ಆಸೆಯನ್ನು ಹುಟ್ಟಿಸುವಲ್ಲಿ ಸಫಲವಾಗಿದೆ. ಶ್ರೀನಿವಾಸರಾಯರ ಸಾತ್ವಿಕ ಮನೋಭಾವ ಮತ್ತು ಕಾಮುಕ ವರ್ತನೆಗಳ ತಾಕಲಾಟ ವಿಮರ್ಶೆಯ ಓದುಗರಲ್ಲಿ ಈ ಕಾದಂಬರಿಯನ್ನು ಓದುವ ಹಂಬಲ ಉತ್ಕಟವಾಗುತ್ತದೆ ಎಂದು ಮಾತ್ರ ಈಗ ಹೇಳಬಲ್ಲೆ.

25. ರಂಗ ಬಾರೋ ಕೃಷ್ಣ ಬಾರೋ – ಮಂಗಳಾ ನಾಡಿಗ್

ರಂಗ ಬಾರೋ ಎಂದು ಸುಶ್ರಾವ್ಯವಾಗಿ ಹಾಡುತ್ತಲೇ, ರಂಗನ ವಿವಿಧ ರೂಪಗಳನ್ನು, ವಿವಿಧ ನಿಲುವುಗಳನ್ನೂ ಈ ಹಾಡಿನಲ್ಲಿ ಸುಂದರವಾಗಿ ನಮ್ಮ ಕಣ್ಮುಂದೆ ನಿಲ್ಲಿಸಿದ್ದಾರೆ ಲೇಖಕಿ, ಗಾಯಕಿ ಮಂಗಳಾ ನಾಡಿಗ್ ಅವರು.

ದ್ವಾರಕೆಯ ಕೃಷ್ಣ, ಪಂಢರಪುರದಲ್ಲಿ ನಿಂತಿರುವ ಪಾಂಡುರಂಗ ವಿಠಲ, ಶ್ರೀರಂಗಪಟ್ಟಣದ ಮಲಗಿರುವ ರಂಗನಾಥ, ಅಷ್ಟೇ ಅಲ್ಲದೇ, ಬೇಲೂರಿನ ಚನ್ನಕೇಶವ, ತಿರುಪತಿಯ ತಿಮ್ಮಪ್ಪ, ಮೇಲುಕೋಟೆಯ ಚೆಲುವ ನಾರಾಯಣ ಎಲ್ಲರೂ ಬಂದಿದ್ದಾರೆ ಮಂಗಳಾ ಅವರ ಹಾಡಿನಲ್ಲಿ. ಸರಳ ಸುಂದರ ಈ ಹಾಡು ನನಗಿಷ್ಟವಾಯಿತು.

ಅಬ್ಬಬ್ಬ, ಅದೆಷ್ಟು ಪ್ರಸ್ತುತಿಗಳು! ವಿವಿಧ ಪ್ರಕಾರಗಳು. ವಿಷಯ ವೈವಿಧ್ಯಗಳು! ಓದುತ್ತ ಹೋದಂತೆ ನಮ್ಮ ಮನಸ್ಸು ಶ್ರೀಮಂತವಾಗುತ್ತದೆ. ಈ ದಾಸೋಹ ಬಹಳಷ್ಟು ಜನ ಸಾಹಿತಿಗಳನ್ನು, ಲೇಖಕರನ್ನು, ಕವಿಗಳನ್ನು, ಕತೆಗಾರರನ್ನು ಬೆಳಸಿದೆ, ಬೆಳಸುತ್ತಲೇ ಇದೆ. ಇದು ಸಂತಸದ ವಿಷಯ. ಪ್ರಸ್ತುತಿಪಡಿಸಿದ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು. ನನ್ನ ಮಿತಿ ಅರಿತು ಈ ಕರ್ತವ್ಯ ನಿರ್ವಹಿಸಲು ಪ್ರಯತ್ನಿಸಿದ್ದೇನೆ.

ಈ ಅವಕಾಶ ಕಲ್ಪಿಸಿದ ಸಂಚಾಲಕ ಸಮಿತಿಗೆ ನನ್ನ ನಮನಗಳು

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ,
ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 205 – ಸಂಚಿಕೆಯ ಬಿಡುಗಡೆಯ ದಿನಾಂಕ: 08 ಅಕ್ಟೋಬರ್ 2022 – ಶನಿವಾರ